

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 18 ಸೋಮವಾರ 2023

ಸಂಪುಟ: 44 | ಸಂಚಿಕೆ: 241 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಡಿ.21–22ರಿಂದ ಎಮ್ಮೆ ಹಾಲು ಮಾರಾಟ



ಬೆಂಗಳೂರು: ಗ್ರಾಹಕರಿಂದ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಲು ಕರ್ನಾಟಕ ಹಾಲು ಒಕ್ಕೂಟ ಎಮ್ಮೆ ಹಾಲು ಮಾರಾಟ ಮಾಡಲು ಸಿದ್ಧವಾಗಿದೆ. ಡಿ.21 ಮತ್ತು 22ರಿಂದ ರಾಜ್ಯಾದ್ಯಂತ ಮಾರು ಕಟ್ಟೆಗಳಲ್ಲಿ ಎಮ್ಮೆ ಹಾಲು ಮಾರಾಟ ಪ್ರಾರಂಭವಾಗಲಿದ್ದು, ಅದರ ಬೆಲೆ ಲೀಟರ್‌ಗೆ 70–75 ರೂ.ಗಳಾಗಿರುತ್ತವೆ. ಅಂತಿಮ ಬೆಲೆ ಇನ್ನೂ ನಿರ್ಧಾರವಾಗಿಲ್ಲ ಎಂದು ಕೆಎಂಎಫ್ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ● 8ನೇ ಪುಟಕ್ಕೆ

ಶೀಘ್ರದಲ್ಲೇ ನಿಗಮ–ಮಂಡಳಿ ಅಧ್ಯಕ್ಷರ ನೇಮಕ



■ 25 ಶಾಸಕರು, ನಾಲ್ವರು ವಿಧಾನಪರಿಷತ್ ಸದಸ್ಯರಿಗೆ ಸ್ಥಾನ ■ ಮುಂದಿನ ವಾರ ಸಿಎಂ, ಡಿಸಿಎಂ ದೆಹಲಿಗೆ ಪ್ರಯಾಣ ■ ಮೊದಲ ಹಂತದಲ್ಲಿ ಶಾಸಕರಿಗೆ, 2ನೇ ಹಂತದಲ್ಲಿ ಕಾರ್ಯಕರ್ತರಿಗೆ ಅಧಿಕಾರ

ಬೆಂಗಳೂರು, ಡಿ.17–ನಿಗಮ ಮಂಡಳಿಗಳ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ನೇಮಕಾತಿ ಪಟ್ಟಿ ಮುಂದಿನ ವಾರ ಪ್ರಕಟವಾಗಲಿದೆ ಎಂದು ಹೇಳಲಾಗಿದ್ದು, ಮೊದಲ ಹಂತದಲ್ಲಿ 25 ಶಾಸಕರು ಮತ್ತು ನಾಲ್ವರು ವಿಧಾನಪರಿಷತ್ ಸದಸ್ಯರಿಗೆ ಸ್ಥಾನ ಕಲ್ಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ನಿಗಮ ಮಂಡಳಿಗಳ ಅಧ್ಯಕ್ಷ–ಉಪಾಧ್ಯಕ್ಷರ ನೇಮಕಾತಿ ಸಂಬಂಧ ದೆಹಲಿಯಲ್ಲಿ ಮಹತ್ವದ ಸಭೆ ನಿಗದಿ ಮಾಡಲಾಗಿದ್ದು, ಈ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮುಂದಿನ ವಾರ ದೆಹಲಿಗೆ ತೆರಳಲಿದ್ದಾರೆ.

ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರು ಈಗಾಗಲೇ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳೂ ಆದ ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೊಂದಿಗೆ ಮೂರು ಸುತ್ತಿನ ಸಭೆ ನಡೆಸಿದ್ದು, ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಿಸಬಹುದಾದ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರ ಸಂಭವನೀಯ ಪಟ್ಟಿ ಸಿದ್ಧಪಡಿಸಿ, ಹೈಕಮಾಂಡ್‌ಗೆ ಅನುಮೋದನೆಗಾಗಿ ರವಾನಿಸಿದ್ದಾರೆ. ಬೆಳಗಾವಿಯಲ್ಲಿ ನಡೆದ ಚಳಿಗಾಲ ಅಧಿವೇಶನ ಆರಂಭಕ್ಕೂ ಮುನ್ನವೇ ಶಾಸಕರಿಗೆ ನಿಗಮ ಮಂಡಳಿಗಳ ಅಧಿಕಾರ ಭಾಗ್ಯ ದೊರೆಯಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಅಧಿವೇಶನ ಮುಕ್ತಾಯಗೊಂಡರೂ ಕೂಡ ಹೈಕಮಾಂಡ್ ಪಟ್ಟಿ ಬಿಡುಗಡೆ ಮಾಡಿಲ್ಲ. ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೆಲವು ಶಾಸಕರು ನಮಗೆ ಸಚಿವ ಸ್ಥಾನವೂ ದೊರೆತಿಲ್ಲ, ನಿಗಮ ಮಂಡಳಿಗಳ ಅಧ್ಯಕ್ಷ ಸ್ಥಾನವೂ ಕೊಟ್ಟಿಲ್ಲ. ಹೀಗಾದರೆ ಹೇಗೆ? ಎಂದು ಪ್ರಶ್ನಿಸಿದಾಗ ಮುಖ್ಯಮಂತ್ರಿ ಸಿದ್ದರಾಮಯ್ಯ, ಶೀಘ್ರದಲ್ಲೇ ನಿಗಮ ಮಂಡಳಿಗಳಿಗೆ ಅಧ್ಯಕ್ಷರನ್ನು ● 8ನೇ ಪುಟಕ್ಕೆ

ಅಯೋಧ್ಯೆ ರಾಮಮಂದಿರ ಉದ್ಘಾಟನಾ ಕಾರ್ಯಕ್ರಮಕ್ಕೆ ಹೆಚ್.ಡಿ.ದೇವೇಗೌಡರಿಗೆ ಆಹ್ವಾನ



2024ರ ಜನವರಿ 22ರಂದು ಅಯೋಧ್ಯೆಯಲ್ಲಿ ನಡೆಯುವ ರಾಮಮಂದಿರ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ನವದೆಹಲಿಯಲ್ಲಿ ಭೇಟಿ ಮಾಡಿದ ರಾಮ ಮಂದಿರ ಕಟ್ಟಡ ಅಭಿವೃದ್ಧಿ ಸಮಿತಿ ಅಧ್ಯಕ್ಷ ನೃಪೇಂದ್ರ ಮಿಶ್ರಾ, ಹಿರಿಯ ಆರ್‌ಎಸ್‌ಎಸ್ ನಾಯಕ ರಾಮ್‌ಲಾಲ್, ಹಿರಿಯ ವಿಎಚ್‌ಪಿ ನಾಯಕ ಅಲೋಕ್‌ಕುಮಾರ್ ಆಮಂತ್ರಣ ಪತ್ರ ನೀಡಿ, ಆತ್ಮೀಯವಾಗಿ ಆಹ್ವಾನಿಸಿದರು.

ನವದೆಹಲಿ: ಅಯೋಧ್ಯೆಯಲ್ಲಿ ರಾಮಮಂದಿರ ಉದ್ಘಾಟನೆಗೆ ಮುಹೂರ್ತ ಫಿಕ್ಸ್ ಆಗಿದೆ. 2024ರ ಜನವರಿ 22ರಂದು ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆಯಾಗಲಿದ್ದು, ರಾಮಲಲ್ಲಾ ಮೂರ್ತಿಯನ್ನು ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲಾಗುತ್ತಿದೆ. ಈ ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರಿಗೆ ಅಧಿಕೃತವಾಗಿ ಆಹ್ವಾನ ನೀಡಲಾಗಿದೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಹೆಚ್.ಡಿ.ದೇವೇಗೌಡ, ರಾಮ ಮಂದಿರ ಕಟ್ಟಡ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ, ಹಿರಿಯ ಆರ್‌ಎಸ್‌ಎಸ್ ನಾಯಕ ರಾಮ್ ಲಾಲ್ ಮತ್ತು ಹಿರಿಯ ● 8ನೇ ಪುಟಕ್ಕೆ



ಸಂಸತ್ ಭದ್ರತೆ ಉಲ್ಲಂಘನೆ ಗಂಭೀರ ಪ್ರಕರಣ, ಈ ವಿಷಯದಲ್ಲಿ ಜಗಳವಾಡುವುದು ಬೇಡ

ನವದೆಹಲಿ,ಡಿ.17–ಸಂಸತ್ತಿನಲ್ಲಿ ಭದ್ರತಾ ಲೋಪ ಪ್ರಕರಣ ಒಂದು ಗಂಭೀರ ಘಟನೆಯಾಗಿದ್ದು, ಅದನ್ನು ಅಸಡ್ಡೆ ಮಾಡಲು ಸಾಧ್ಯವೇ ಇಲ್ಲ, ಈ ವಿಷಯದಲ್ಲಿ ಜಗಳ ಬೇಡ ಎಂದು ಸಂಸತ್ತಿನಲ್ಲಿ ಪ್ರತಿಪಕ್ಷಗಳ ತೀವ್ರ ಪ್ರತಿಭಟನೆಯ ನಡುವೆ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಹಿಂದಿ ದೈನಿಕ 'ದೈನಿಕ್ ಜಾಗರಣ್'ಗೆ ನೀಡಿದ ಸಂದರ್ಶನದಲ್ಲಿ ಈ ಬಗ್ಗೆ ಮಾತನಾಡಿದ ಪ್ರಧಾನ ಮಂತ್ರಿ ಮೋದಿ, ತನಿಖಾ ಸಂಸ್ಥೆಗಳು ಘಟನೆ ಬಗ್ಗೆ ತನಿಖೆ ನಡೆಸುತ್ತಿವೆ. ಕಠಿಣ ಕ್ರಮಗಳನ್ನು ತೆಗೆದುಕೊಳ್ಳುತ್ತವೆ ಎಂದರು.




ಈ ಘಟನೆ ನಡೆಸಿರುವವರು ಮತ್ತು ಅವರ ಉದ್ದೇಶಗಳ ಮೂಲಕ್ಕೆ ಹೋಗಿ ತನಿಖೆ ನಡೆಸುವುದು ಅತ್ಯಗತ್ಯ ಎಂದರು. ಸಂಸತ್ತಿನ ಭದ್ರತಾ ಉಲ್ಲಂಘನೆಯು ಅತ್ಯಂತ ನೋವಿನ ವಿಷಯ. ಸಾಂಘಿಕ ಮನೋಭಾವದಿಂದ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆಯಬೇಕು. ಇಂತಹ ವಿಚಾರದಲ್ಲಿ ಕಿತ್ತಾಡಿಕೊಳ್ಳಬಾರದು ಎಂದು ಹೇಳಿದ್ದಾರೆ. ಸಂಸತ್ತಿನಲ್ಲಿ ಸಂಭವಿಸಿದ ಘಟನೆಯ ಗಂಭೀರತೆಯನ್ನು ನಿರ್ಲಕ್ಷಿಸಬಾರದು. ಸ್ಪೀಕರ್ ಕೂಡ ಗಂಭೀರತೆಯಿಂದ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದರು. ಸಂಸತ್ತಿನ ಚಳಿಗಾಲ ಅಧಿವೇಶನ ನಡೆಯುತ್ತಿದ್ದು, ಡಿ.13ರಂದು ಇಬ್ಬರು ವ್ಯಕ್ತಿಗಳು ಸಂದರ್ಶಕರ ಗ್ಯಾಲರಿಯಿಂದ ಲೋಕ ಸಭೆಯ ಚೇಂಬರ್‌ಗೆ ಹಾರಿ ದಾಂಧಲೆ ನಡೆಸಿದ್ದರು.

ಕೇರಳದಲ್ಲಿ JN-1ಗೆ ನಾಲ್ವರ ಬಲಿ

ಮೈಸೂರಿನಲ್ಲಿ ಆರೋಗ್ಯ ಇಲಾಖೆ ಹೈ ಅಲರ್ಟ್

● ಕೇರಳದಲ್ಲಿ ವ್ಯಾಪಕವಾಗಿ ಹರಡುತ್ತಿರುವ JN-1 ● ಮೈಸೂರಿನಲ್ಲಿ ಎರಡು ಟಾಸ್ಕ್ ಫೋರ್ಸ್ ರಚನೆ ● ಅಗತ್ಯ ಟೆಸ್ಟ್ ಕಿಟ್‌ಗಳ ಸಂಗ್ರಹ ● ಆಕ್ಸಿಜನ್ ಸಿಲಿಂಡರ್ ಕಾರ್ಯ ನಿರ್ವಹಣೆ ಬಗ್ಗೆ ಅಣಕು ಪ್ರದರ್ಶನ ● ಕೇರಳ–ಕರ್ನಾಟಕದ ಗಡಿಯಲ್ಲಿ ತೀವ್ರ ನಿಗಾ

ಮೈಸೂರು, ಡಿ.17(ಬಿಎಲ್‌ಯು)– ನೆರೆಯ ರಾಜ್ಯ ಕೇರಳದಲ್ಲಿ ಕೊರೊನಾ ರೂಪಾಂತರಿ JN-1 ಮಹಾಮಾರಿ ವ್ಯಾಪಕವಾಗಿ ಹರಡುತ್ತಿದ್ದು, ನಾಲ್ವರು ಮೃತಪಟ್ಟಿದ್ದಾರೆ. ಈ ಹಿನ್ನೆಲೆ ಗಡಿ ಜಿಲ್ಲೆ ಮೈಸೂರಿನಲ್ಲಿ ಆರೋಗ್ಯ ಇಲಾಖೆ ಹೈ ಅಲರ್ಟ್ ಘೋಷಿಸಿದೆ.



ಕೇರಳದಲ್ಲಿ ವ್ಯಾಪಿಸುತ್ತಿರುವ ಸೋಂಕು ಮೈಸೂರು ಜಿಲ್ಲೆಯಲ್ಲಿ ಹರಡದಂತೆ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ರಚನೆ ಮಾಡಿ ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲಾಗಿದೆ. ಈ ಕಾರಣದಿಂದ ಕೇರಳದ ಗಡಿ ಜಿಲ್ಲೆಯಾದ ಮೈಸೂರಿನಲ್ಲಿ ಸೋಂಕು ಹರಡದಂತೆ ಆರೋಗ್ಯ ಇಲಾಖೆ ಹೈ ಅಲರ್ಟ್ ಘೋಷಿಸಿದೆ. ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ಈಗಾಗಲೇ ಆರೋಗ್ಯ ಇಲಾಖೆ ● 8ನೇ ಪುಟಕ್ಕೆ

ಭಾನುವಾರ 335 ಹೊಸ ಪ್ರಕರಣ ಪತ್ತೆ, ಸಕ್ರಿಯ 1,701ಕ್ಕೆ ಏರಿಕೆ

ನವದೆಹಲಿ: ಕೊರೊನಾ ಹೊಸ ರೂಪಾಂತರಿ ಪತ್ತೆಯಾಗಿರುವ ಬೆನ್ನಲ್ಲೇ, ದೇಶಾದ್ಯಂತ ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ವರದಿಯಾಗುತ್ತಿವೆ.

ಡಿ.17ರಂದು 335 ಹೊಸ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 1,701ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ. ಕೋವಿಡ್–19 ಕ್ಯಾಸೆಲೋಡ್ 4.50 ಕೋಟಿ (4,50,04,816) ಮತ್ತು ಸಾವಿನ ಸಂಖ್ಯೆ 5,33,316 ಆಗಿದೆ ಎಂದು ಬೆಳಗ್ಗೆ 8 ಗಂಟೆಗೆ ನವೀಕರಿಸಿದ ಡೇಟಾ ತಿಳಿಸಿದೆ.



Estd : 2006 Regd. No. : MSCS/CR1130/2014

ತುಮಕೂರು ಮರ್ಚೆಂಟ್ಸ್ ಕ್ರೆಡಿಟ್ ಕೋ–ಆಪರೇಟೀವ್

TUMKUR MERCHANTS CREDIT CO-OPERATIVE

(Multi State Co-Operative Society)

H.O. : J.C. Road, TUMKUR - 572 101, Karnataka.

Ph.: 0816-2260146 Email : ho@tmccltd.com

ಜೀವ ವಿಮೆ ಮಾಡಿಸಿದ್ದೀರಾ ?

ಈಗಲೇ ಪ್ರಾರಂಭಿಸಿ ....

ನೂತನ ಠೇವಣಿ ಯೋಜನೆ

ಟಿ.ಎಂ.ಸಿ.ಸಿ. ಗೋಲ್ಡ್ ಫಿಕ್ಸೆಡ್ ಡೆಪಾಸಿಟ್



ನೀವು
ರೂ. 1,00,000/- ದಿಂದ
ರೂ. 20,00,000/- ಗಳವರೆಗೆ
ಠೇವಣಿ ಹೂಡಬಹುದು

ನಿಮ್ಮ ಠೇವಣಿ ಮೊತ್ತಕ್ಕೆ
ಸಮನಾಗಿ ಜೀವವಿಮೆ
ಸೌಲಭ್ಯವನ್ನು ಪಡೆಯಬಹುದು

ಠೇವಣಿಗೆ ಶೇ. 7.5 ರಂತೆ ಬಡ್ಡಿ ಕೊಡಲಾಗುವುದು

ನೀವು ವಿಮಾ ಕಂತನ್ನು ಪಾವತಿಸುವಂತಿಲ್ಲ

ಹೆಚ್ಚಿನ ಮಾಹಿತಿಗಾಗಿ ಇಂದೇ ಹತ್ತಿರದ ಶಾಖೆಯನ್ನು ಸಂಪರ್ಕಿಸಿ



"Sahakara Rathna"
N.S.JAYAKUMAR
President

"Join & Grow with Us"

ಶಾರದಾ ವಿಲಾಸ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಗಳ ನೆನಪು ಮೆಲುಕು




ಮೈಸೂರು, ಡಿ.17(ಬಿಎಲ್‌ಯು)- ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಕಾಲೇಜಿನ ಹಿರಿಯ ವಿದ್ಯಾರ್ಥಿಗಳ ಸಂಘದ ಸಂಗಮ-2023 ಕಾರ್ಯಕ್ರಮ ಇಂದು ಅರ್ಥಪೂರ್ಣವಾಗಿ ನಡೆಯಿತು.

ಕಾಲೇಜಿನ ಶತಮಾನೋತ್ಸವ ಭವನದಲ್ಲಿ ನಡೆದ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳೂ ಆದ ಕಾಲೇಜಿನ ಗೌವರ್ನಿಂಗ್ ಕೌನ್ಸಿಲ್ ಸದಸ್ಯ ಪ್ರೊ.ಟಿ.ಕೆ.ಉಮೇಶ್ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಪ್ರೊ.ಉಮೇಶ್, ಶಾರದಾ ವಿಲಾಸ ಕಾಲೇಜು ನಡೆದು ಬಂದ ದಾರಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಕಾಲೇಜಿನಲ್ಲಿ ಹೊಸ ಕಟ್ಟಡ ನಿರ್ಮಾಣ ಮಾಡುವ ಯೋಜನೆ ಇದೆ ಎಂಬ ಮಾಹಿತಿಯನ್ನು ಈ ವೇಳೆ ನೀಡಿದರು.

ತರುವಾಯ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ಮತ್ತೊಬ್ಬ ವಿಶ್ರಾಂತ ಕುಲಪತಿ ಪ್ರೊ.ಹೇಮಂತ್‌ಕುಮಾರ್, ಕಾಲೇಜು ಮತ್ತಷ್ಟು ಅಭಿವೃದ್ಧಿ ಸಾಧಿಸಲು ಸ್ವಾಯತ್ತತೆ ಪಡೆಯಬೇಕು. ಇದಕ್ಕೆ ನನ್ನ ಸಂಪೂರ್ಣ ಸಹಕಾರವಿದೆ ಎಂದು ಭರವಸೆ ನೀಡಿದರು. ಈ ವೇಳೆ ಕಾಲೇಜಿನಲ್ಲಿ ಕಳೆದ ನೆನಪುಗಳನ್ನು ಪ್ರೊ.ಹೇಮಂತ್ ಕುಮಾರ್ ಮೆಲುಕು ಹಾಕಿದರು.

ಇದೇ ಸಂದರ್ಭದಲ್ಲಿ ಹಿರಿಯ ವಿದ್ಯಾರ್ಥಿಗಳು ಗುರುವಂದನೆ ಸಲ್ಲಿಸಿದರು. ನಂತರ ಕಾಲೇಜಿಗೆ ದೇಣಿಗೆ ನೀಡಿದ ಹಿರಿಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾಲೇಜಿನ ಪ್ರಿನ್ಸಿಪಾಲ್ ಡಾ.ಎಂ. ದೇವಿಕಾ, ಹಿರಿಯ ವಿದ್ಯಾರ್ಥಿಗಳ ಸಂಘದ ಖಜಾಂಚಿ ಯತಿರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

'ಶಿಲ್ಪಿಯೇ ರಾಜಗುರುವಾಗಿ' ಕೃತಿ ಬಿಡುಗಡೆ



ಮೈಸೂರು, ಡಿ.17(ಎಂಟಿವೈ)- ವ್ಯಕ್ತಿ ಆಧಾರಿತ ಕೃತಿ ರಚನೆ ವೇಳೆ ಆರಾಧನಾ ಮನೋಭಾವ ಉಂಟಾದರೆ ಕೃತಿ ಪರಿಣಾಮಕಾರಿಯಾಗಿ ಮೂಡಿಬರಲು ಸಾಧ್ಯವಾಗುವುದಿಲ್ಲ ಎಂದು ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ.ನಂದೀಶ್ ಹಂಚೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಶಂಕರಮಠದ ರಸ್ತೆಯಲ್ಲಿರುವ ನಟರಾಜ ಸಭಾ ಭವನದಲ್ಲಿ ಹೊಸಮಠದ ನಟರಾಜ ಪ್ರತಿಷ್ಠಾನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಲಾವಿದ ಎಲ್.ಶಿವಲಿಂಗಪ್ಪ ಅವರ 'ಶಿಲ್ಪಿಯೇ ರಾಜಗುರುವಾಗಿ' ಕೃತಿಯನ್ನು ಬಿಡುಗಡೆ ಮಾಡಿ, ಮಾತನಾಡಿದ ಅವರು, ಶಿಲ್ಪ ಸಿದ್ಧಾಂತಿ ಸಿದ್ದಲಿಂಗಸ್ವಾಮೀಜಿ ಅವರ ಅಧ್ಯಯನವನ್ನು ಶಿವಲಿಂಗಪ್ಪ ಅವರು ಸೂಕ್ಷ್ಮವಾಗಿ ಕಟ್ಟಿಕೊಟ್ಟಿದ್ದಾರೆ. ಅದರಲ್ಲಿ ವ್ಯಕ್ತಿಚಿತ್ರವಷ್ಟೇ ಅಲ್ಲ, ಆ ಕಾಲದ ಸಾಮಾಜಿಕ, ಧಾರ್ಮಿಕ ಹಾಗೂ ಕಲಾ ಜಗತ್ತನ್ನು ಪರಿಚಯಿಸಿಕೊಡುತ್ತದೆ. ಮೈಸೂರಿನ ಚಿತ್ರಕಲೆ, ಸಂಗೀತ, ಸಾಹಿತ್ಯ ಹಾಗೂ ವಿಚಾರಗಳನ್ನು ಕೃತಿಯ ಮೂಲಕ ತಿಳಿದುಕೊಳ್ಳಬಹುದು. ಶಿಲ್ಪಿಯು ಎಂದಿಗೂ ಆಸ್ತಿಕ ಮನೋಭಾವ ಉಳ್ಳವನು. ಶಿಲ್ಪ ರೂಪುಗೊಂಡಾಗ ನೋಡುವವರಲ್ಲಿ ದೈವಿಕತೆ ಮೂಡಬೇಕೆಂದರೆ ಶಿಲ್ಪಿಯು ಕಲ್ಲಿಗೆ ಅಧ್ಯಾತ್ಮ ಸ್ಪರ್ಶವನ್ನು ಉಳಿಯ ಮೂಲಕ ನೀಡಿರುತ್ತಾನೆ. ಸಿದ್ದಲಿಂಗಸ್ವಾಮೀಜಿ ಅವರ ಆಸ್ತಿಕತೆಯು ವೇದ, ಆಗಮ ಎಲ್ಲವನ್ನು ಓದಿ ದೊಡ್ಡ ಆಸ್ತಿಕರಾಗಿದ್ದರು ಎಂದು ತಿಳಿಸಿದರು.

ಜಯಚಾಮರಾಜೇಂದ್ರ ಒಡೆಯರ್ ಅವರು ಋಗ್ವೇದಾ ಸಂಹಿತೆಯನ್ನು ಬರೆಯಲು ಸಿದ್ದಲಿಂಗಸ್ವಾಮಿ ಸ್ಫೂರ್ತಿಯಾಗಿದ್ದರು. ಅದು ಅವರ ಆಸ್ತಿಕತೆಯನ್ನು ತೋರುತ್ತದೆ. ದೇಶದ ಸಮಾಜವು ವೃತ್ತಿಗಳನ್ನು ಆಧರಿಸಿ ಜಾತಿಗಳಾಗಿ ಒಡೆದು ಹೋಗಿದೆ. ವೃತ್ತಿಗಳ ಬಗ್ಗೆ ಪಾರಂಪರಿಕವಾಗಿ ಬಂದ ಕೌಶಲದ ಶ್ರೇಷ್ಠತೆಯನ್ನು ನಿರಾಕರಿಸಲಾಗದು. ಭಾರತದಲ್ಲಿ ಬೌದ್ಧರಿಂದಲೇ ಮೂರ್ತಿಗಳ ಸ್ವರೂಪ ಚಾಲ್ತಿಗೆ ಬಂದಿದೆ. ಆಗಮನಗಳು ಬಂದದ್ದೇ ಬೌದ್ಧರಿಂದ ಎಂದರು.

ಕಾರ್ಯಕ್ರಮದಲ್ಲಿ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಪ್ರತಿಷ್ಠಾನದ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಶರಣ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಇದ್ದರು.

ಇಂದು ಜಿಲ್ಲಾದ್ಯಂತ ಸುಬ್ರಹ್ಮಣ್ಯ ಷಷ್ಠಿ

ಮೈಸೂರು,ಡಿ.17(ಆರ್‌ಕೆ)-ಶ್ರೀ ಸುಬ್ರಹ್ಮಣ್ಯ ಷಷ್ಠಿ ಅಂಗವಾಗಿ ಮೈಸೂರು ನಗರ ಹಾಗೂ ಜಿಲ್ಲೆಯಾದ್ಯಂತ ನಾಳೆ(ಡಿ.18) ಸ್ವಾಮಿಯ ಅರಾಧನಾ ಮಹೋತ್ಸವ ನಡೆಯಲಿದೆ. ನಂಜನಗೂಡು ತಾಲೂಕು, ದೊಡ್ಡ ಕವಲಂದೆ ಹೋಬಳಿ ಗಟ್ಟವಾಡಿ ಗ್ರಾಮದಲ್ಲಿ ಸೋಮವಾರ 10ನೇ ವರ್ಷದ ಶ್ರೀಸುಬ್ರಹ್ಮಣ್ಯಸ್ವಾಮಿ ಜಾತ್ರಾ ಮಹೋತ್ಸವ ಆಯೋಜಿಸಲಾಗಿದೆ. ಗಣಪತಿ ಪೂಜೆ, ಪುಣ್ಯಾಹ, ಶ್ರೀ ಸ್ವಾಮಿಯ ಮೂರ್ತಿಗೆ ಕಳಶ ಕ್ಷೀರಾಭಿಷೇಕ, ಪಂಚಾಮೃತಾಭಿಷೇಕ, ಸಹಸ್ರಾರ್ಚನೆ, ಶತ ಸಹಸ್ರ ಶ್ರೀ ಸುಬ್ರಹ್ಮಣ್ಯ ಹೋಮದ ಧಾರ್ಮಿಕ ಕೈಂಕರ್ಯಗಳ ನಂತರ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ರಥ ಮಹೋತ್ಸವ ಮೆರವಣಿಗೆ ನಡೆಯಲಿದೆ. ಜೀರ್ಣೋದ್ಧಾರ ಮತ್ತು ಗೋಪುರ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಸಿದ್ದಲಿಂಗಪುರ ಬಳಿಯ ಶ್ರೀ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನದ ಬಳಿ ನಾಳೆ(ಡಿ.18) ನಡೆಯಬೇಕಿದ್ದ ಷಷ್ಠಿ ಮಹೋತ್ಸವದ ವಿಶೇಷ ಪೂಜೆ ಮತ್ತು ಜಾತ್ರೆಯನ್ನು ರದ್ದುಪಡಿಸಲಾಗಿದೆ. ಉಳಿದಂತೆ ಮೈಸೂರಿನ ಎಲ್ಲಾ ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನಗಳಲ್ಲಿ ಷಷ್ಠಿ ಅಂಗವಾಗಿ ಸೋಮವಾರ ವಿಶೇಷ ಪೂಜೆ, ಹೋಮ, ಪ್ರಸಾದ ವಿನಿಯೋಗ ನಡೆಯಲಿದೆ. ಎಲ್ಲಾ ಬಡಾವಣೆಗಳಲ್ಲಿ ಭಕ್ತಾದಿಗಳು ಹುತ್ತಗಳಿಗೆ ಹಾಲು, ಹಣ್ಣು ಸಮರ್ಪಿಸಿ ಷಷ್ಠಿ ಪೂಜೆ ನೆರವೇರಿಸುವರು.





ಮೈಸೂರಿನ ವಿಜಯನಗರದಲ್ಲಿರುವ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಧನುರ್ಮಾಸ ಹಿನ್ನೆಲೆಯಲ್ಲಿ ವಿಶೇಷ ಪೂಜೆ, ಅಭಿಷೇಕಗಳು ನೆರವೇರಿದವು. ಈ ವೇಳೆ ದೇವಸ್ಥಾನದ ಪ್ರಧಾನ ಅರ್ಚಕ ಭಾಷ್ಯಂ ಸ್ವಾಮೀಜಿ, ವ್ಯವಸ್ಥಾಪಕ ಶ್ರೀನಿವಾಸ್, ಜೆಡಿಎಸ್ ಮುಖಂಡ ಪುಟ್ಟರಾಜು ಹಾಗೂ ಭಕ್ತರು ಉಪಸ್ಥಿತರಿದ್ದರು.

ಹೆಡ್ ಕಾನ್‌ಸ್ಟೇಬಲ್ ಕರ್ತವ್ಯಕ್ಕೆ ಅಡ್ಡಿ: ಬೈಕ್ ಸವಾರ ಬಂಧನ

ಮೈಸೂರು, ಡಿ.17(ಆರ್‌ಕೆ)-ವಾಹನ ತಪಾಸಣೆ ವೇಳೆ ಮೈಸೂರಿನ ಮೃಗಾಲಯದ ಬಳಿ ಸಿದ್ಧಾರ್ಥ ಸಂಚಾರ ಠಾಣೆಯ ಹೆಡ್ ಕಾನ್‌ಸ್ಟೇಬಲ್‌ವೊಬ್ಬರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಅನುಚಿತವಾಗಿ ವರ್ತಿಸಿದ್ದಲ್ಲದೆ, ಕರ್ತವ್ಯಕ್ಕೆ ಅಡ್ಡಿಪಡಿಸಿದ ಬೈಕ್ ಸವಾರನನ್ನು ನಜರ್‌ಬಾದ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಗಾಂಧಿನಗರ ನಿವಾಸಿ ಸಿದ್ದಲಿಂಗಮೂರ್ತಿ ಅವರ ಮಗ ವಿಕಾಸ್ (22) ಬಂಧಿತ ಯುವಕ. ಇಂದು ಮಧ್ಯಾಹ್ನ ಸುಮಾರು 3 ಗಂಟೆ ವೇಳೆ ಬುಲೆಟ್ ಬೈಕ್‌ನಲ್ಲಿ ಬರುತ್ತಿದ್ದಾಗ ಇಟ್ಟಿಗೆಗೂಡಿನ ಮೃಗಾಲಯ ಸಮೀಪ ವಾಹನಗಳ ತಪಾಸಣಾ ಕರ್ತವ್ಯದಲ್ಲಿದ್ದ ಸಿದ್ಧಾರ್ಥನಗರ ಸಂಚಾರ ಠಾಣೆ ಹೆಡ್‌ಕಾನ್‌ಸ್ಟೇಬಲ್ ಲಿಂಗರಾಜು ಎಂಬುವರು ಆತನನ್ನು ತಡೆದು ದಾಖಲಾತಿ ತೋರಿಸುವಂತೆ ತಿಳಿಸಿದ್ದಾರೆ. ಅದರಿಂದ ಕೋಪಗೊಂಡ ವಿಕಾಸ್, ಸಂಚಾರ ನಿಯಮ ಉಲ್ಲಂಘಿಸಿದವರನ್ನು ಬಿಡುತ್ತಿದ್ದೀರಿ, ನನ್ನನ್ನು ಮಾತ್ರ ತಡೆದು ನಿಲ್ಲಿಸಿದ್ದೇಕೆ ಎಂದು ಪ್ರಶ್ನಿಸಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ, ಅವರನ್ನು ಎಳೆದಾಡಿದ. ಅಷ್ಟರಲ್ಲಿ ಠಾಣೆಯ ಇತರ ಸಿಬ್ಬಂದಿಗಳೇ ಬಂದು ನಜರ್‌ಬಾದ್ ಠಾಣೆ ಪೊಲೀಸರನ್ನು ಕರೆಸಿದರು.

ಅವರಿಗೂ ಅವಾಜ್ ಹಾಕಿದ್ದರಿಂದ ಆತನನ್ನು ಠಾಣೆಗೆ ಕರೆದೊಯ್ದರು. ಅಲ್ಲಿಯೂ ಲಿಂಗರಾಜು ವಿರುದ್ಧ ಹರಿಹಾಯುತ್ತಿದ್ದ ದೃಶ್ಯ ಠಾಣೆಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ, ದುರ್ನಡತೆ, ಅವಾಚ್ಯ ಶಬ್ದಗಳಿಂದ ನಿಂದಿಸಿದ ರೀತ್ಯಾ ಪ್ರಕರಣ ದಾಖಲಿಸಿದ ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ ಅವರು, ವಿಕಾಸ್‌ನನ್ನು ಬಂಧಿಸಿದ್ದಾರೆ.

ಮಾರ್ಚ್‌ನಿಂದ ಡಿಸೆಂಬರ್ 11ರವರೆಗೆ ಟ್ರಾಮಾ ಕೇರ್ ಸೆಂಟರ್, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 2,658 ಶಸ್ತ್ರಚಿಕಿತ್ಸೆ ಯಶಸ್ವಿ

- 46,586 ಹೊರ, 4636 ಒಳರೋಗಿಗಳಿಗೆ ಚಿಕಿತ್ಸೆ
- 11,442 ಎಕ್ಸ್‌ರೇ- 2454 ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಸೇವೆ
- 1,502 ಮಂದಿಗೆ ಫಿಸಿಯೋಥೆರಪಿ ಚಿಕಿತ್ಸೆ
- ಚಿಕಿತ್ಸೆ ಫಲಕಾರಿಯಾಗದೇ 9 ತಿಂಗಳಲ್ಲಿ 31 ರೋಗಿಗಳು ಸಾವು





ಮೈಸೂರಿನ ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಮಹಾರಾಣಿ ಕೃಷ್ಣಾಜಮ್ಮಣಿ ಟ್ರಾಮಾ ಕೇರ್ ಸೆಂಟರ್

> ಕಳೆದ 9 ತಿಂಗಳ ಅವಧಿಯಲ್ಲಿ 620 ಹೊಸ ರೋಗಿಗಳು ಹಾಗೂ 882 ಪುನರಾವರ್ತಿತ ರೋಗಿಗಳಿಗೆ ಈ ಆಸ್ಪತ್ರೆಯಲ್ಲಿ ಪಿಸಿಯೋಥೆರಪಿ ಚಿಕಿತ್ಸಾ ಸೇವೆ ಮೂಲಕ ನೋವು ನಿವಾರಣೆ ಮಾಡಲಾಗಿದೆ. ಈ ಅವಧಿಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ 31 ರೋಗಿಗಳು ಸಾವನ್ನಪ್ಪಿದ್ದಾರೆ. ಆ ಪೈಕಿ ಪ್ಲಾಸ್ಟಿಕ್ ಸರ್ಜರಿಯಲ್ಲಿ 1, ಸರ್ಜಿಕಲ್ ಆಂಕಾಲಜಿ ವಿಭಾಗದ 12, ಆಂಕಾಲಜಿಯ 6, ಸರ್ಜಿಕಲ್ ಗ್ಯಾಸ್ಟ್ರೋಲಜಿಯ 4, ಯೂರಾಲಜಿಯ 4 ಹಾಗೂ ಆರ್ಥೋಪೆಡಿಕ್ ಸಂಬಂಧಿತ ಓರ್ವ ರೋಗಿ ಮೃತಪಟ್ಟಿದ್ದಾರೆ.

ಎಸ್.ಟಿ.ರವಿಕುಮಾರ್

ಮೈಸೂರು, ಡಿ.17-ಆರೋಗ್ಯ ಹಬ್ ಎನಿಸಿರುವ ಮೈಸೂರಿನ ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಿರುವ ಮಹಾರಾಣಿ ಕೃಷ್ಣಾಜಮ್ಮಣಿ ಟ್ರಾಮಾ ಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ರೋಗಿಗಳಿಗೆ ಗುಣಾತ್ಮಕ ಚಿಕಿತ್ಸೆ ಲಭ್ಯವಾಗುತ್ತಿದೆ.

ಮಹಾರಾಣಿ ಕೃಷ್ಣಾಜಮ್ಮಣಿ ಅವರು ಟಿಬಿ ಕಾಯಿಲೆಗೆ ತುತ್ತಾಗಿ ಮೃತಪಟ್ಟಿದ್ದು, ಅವರ ನೆನಪಿಗಾಗಿ ಮಹಾರಾಜರು ಕುಂಬಾರಕೊಪ್ಪಲಿಗೆ ಹೊಂದಿಕೊಂಡಂತಿರುವ ಎತ್ತರವಾದ ಮತ್ತು ಗಾಳಿ-ಬೆಳಕು ಹೊಂದಿದ್ದ ಪ್ರದೇಶದಲ್ಲಿ ಪಿಕೆಟಿಬಿ ಮತ್ತು ಸಿಡಿ ಆಸ್ಪತ್ರೆ ನಿರ್ಮಿಸಿ ಪ್ರಜೆಗಳಿಗೆ ಚಿಕಿತ್ಸೆ ನೀಡಲಾರಂಭಿಸಿದ್ದರು. ಸುಮಾರು 100 ವರ್ಷಗಳ ಇತಿಹಾಸ ಹೊಂದಿರುವ ಈ ಆಸ್ಪತ್ರೆಯ ಗಿಡ-ಮರಗಳ ನಿರ್ಮಲ ವಾತಾವರಣದಲ್ಲಿ ಈಗಲೂ ಆಸ್ಪತ್ರೆಯಲ್ಲಿ ಬಡ ರೋಗಿಗಳಿಗೆ ಉತ್ತಮ ವೈದ್ಯಕೀಯ ಸೇವೆ ನೀಡುತ್ತಿರುವುದು ಹಲವರ ಪಾಲಿಗೆ ದೇವಾಲಯ ಎಂಬಂತಾಗಿರುವುದರಲ್ಲಿ ಸಂಶಯವಿಲ್ಲ.

ರಾಜಮಹಾರಾಜರ ಬಳಿಕ ಪ್ರಜಾಪ್ರಭುತ್ವ ಆಡಳಿತ ಬಂದ ನಂತರ ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ ಮೊದಲನೇ ಬಾರಿ ಮುಖ್ಯಮಂತ್ರಿಯಾಗಿದ್ದಾಗ, ಈಗಲೂ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರು ಶ್ರೀ ಜಯದೇವ ಹೃದ್ರೋಗ ಮತ್ತು ಸಂಶೋಧನಾ ಸಂಸ್ಥೆ ಆಸ್ಪತ್ರೆ, ಪ್ರಿನ್ಸಸ್ ಕೃಷ್ಣಾಜಮ್ಮಣಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್ ಹಾಗೂ ಸಿಡಿ ಆಸ್ಪತ್ರೆ ಆವರಣದಲ್ಲಿ ಜಿಲ್ಲಾ ಆಸ್ಪತ್ರೆ ಕಟ್ಟಡಗಳನ್ನು ನಿರ್ಮಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಅಂದು ವಾಸು ಅವರು ಚಾಮರಾಜ ಕ್ಷೇತ್ರದ ಶಾಸಕರಾಗಿದ್ದರು.

2019ರಲ್ಲಿ ಆರಂಭವಾಗಿದ್ದ ಕೋವಿಡ್-19 ಮೊದಲು ಮತ್ತು ಎರಡನೇ ಅಲೆಯ ಸಂಕಷ್ಟ ಸಂದರ್ಭದಲ್ಲಿ ಹೊಸದಾಗಿ ನಿರ್ಮಿಸಿದ್ದ ಈ ಆಸ್ಪತ್ರೆ ಕಟ್ಟಡಗಳು ರೋಗಿಗಳ ಚಿಕಿತ್ಸೆಗೆ ಬಳಕೆಯಾದವು. ತದನಂತರ ಈ ಕಟ್ಟಡಗಳಿಗೆ ಖಾಸಗಿ ಕೈಗಾರಿಕೋದ್ಯಮಿಗಳ ನೆರವಿನಿಂದ ವೈದ್ಯಕೀಯ ಉಪಕರಣಗಳು, ಮೂಲ ಸೌಲಭ್ಯಗಳನ್ನು ಕಲ್ಪಿಸಿದ್ದರಿಂದಾಗಿ ಅಲ್ಲಿ ಈಗ ಪೂರ್ಣ ಪ್ರಮಾಣದ ವೈದ್ಯಕೀಯ ಸೇವೆ ನೀಡಲಾಗುತ್ತಿದೆ.

ನವೀಕರಣಕ್ಕಾಗಿ ಸ್ಥಳಾಂತರ: ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMC &RI) ಅಧೀನದಲ್ಲಿ ಬರುವ ಪಿಕೆ ಟ್ರಾಮಾ ಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡಗಳಿಗೆ ಶತಮಾನೋತ್ಸವ ಆಚರಣೆ ನಿಮಿತ್ತ ರಿಪೇರಿ ಮತ್ತು ನವೀಕರಣ ಕಾಮಗಾರಿ ನಡೆಯುತ್ತಿರುವುದರಿಂದ ಕೆ.ಆರ್.ಆಸ್ಪತ್ರೆ ಪಾರಂಪರಿಕ ಕಟ್ಟಡದಿಂದ ಹಲವು ವಿಭಾಗಗಳ ಸೇವೆಯನ್ನು ಸ್ಥಳಾಂತರಿಸಲಾಗಿದೆ.

ಕಳೆದ ಮಾರ್ಚ್ ತಿಂಗಳಲ್ಲಿ ಪ್ಲಾಸ್ಟಿಕ್ ಸರ್ಜರಿ, ನ್ಯೂರಾಲಜಿ, ಸರ್ಜಿಕಲ್ ಆಂಕಾಲಜಿ, ಆಂಕಾಲಜಿ, ಎಂಡೋಕ್ರೈನಾಲಜಿ, ಸರ್ಜಿಕಲ್ ಗ್ಯಾಸ್ಟ್ರೋಲಜಿ, ಯೂರಾಲಜಿ, ನೆಫ್ರಾಲಜಿ ಹಾಗೂ ಆರ್ಥೋಪೆಡಿಕ್ ವಿಭಾಗಗಳನ್ನು ಕೆ.ಆರ್.ಆಸ್ಪತ್ರೆ ಪಾರಂಪರಿಕ ಕಟ್ಟಡದಿಂದ ಟ್ರಾಮಾ ಕೇರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡಗಳಿಗೆ ಸ್ಥಳಾಂತರಿಸಲಾಯಿತು.

46,586 ಹೊರ ರೋಗಿಗಳು: 2023ರ ಮಾರ್ಚ್ ಮಾಹೆಯಿಂದ ಡಿಸೆಂಬರ್ 11ರವರೆಗೆ ಈ ಎರಡೂ ಆಸ್ಪತ್ರೆಗಳಲ್ಲಿ ಒಟ್ಟು 46,586 ಮಂದಿ ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. 11,314 ಮೂಳೆ ಮತ್ತು ಕೀಲು ಸಂಬಂಧಿ ರೋಗಿಗಳು, 3,009 ಪ್ಲಾಸ್ಟಿಕ್ ಸರ್ಜರಿ, 8,373 ನ್ಯೂರಾಲಜಿ, 7052 ನ್ಯೂರೋ ಸರ್ಜರಿ, 124 ಸರ್ಜಿಕಲ್ ಆಂಕಾಲಜಿ, 3517 ಆಂಕಾಲಜಿ, 832 ಎಂಡೋಕ್ರೈನಾಲಜಿ, 1,984 ಸರ್ಜಿಕಲ್ ಗ್ಯಾಸ್ಟ್ರಾಲಜಿ, 6,330 ಯೂರಾಲಜಿ, 3595 ನೆಫ್ರಾಲಜಿ ಹಾಗೂ 456 ಕ್ಯಾಸ್ವಲ್ಟಿಗೆ ಸಂಬಂಧಿಸಿದ ರೋಗಿಗಳಿಗೆ ಹೊರ ರೋಗಿಯಾಗಿ ಚಿಕಿತ್ಸೆ ನೀಡಲಾಗಿದೆ.

ಅಗತ್ಯವಿದ್ದ 4636 ಮಂದಿಯನ್ನು ದಾಖಲಿಸಿಕೊಂಡು ಒಳರೋಗಿ ಚಿಕಿತ್ಸೆ, ಶುಶ್ರೂಷೆ ನೀಡಲಾಗಿದೆ. ಹೊರರೋಗಿಗಳ ಪೈಕಿ ಇಬ್ಬರು ಲೈಂಗಿಕ ಅಲ್ಪಸಂಖ್ಯಾತರು (Transgenders), 4,055 ಮಕ್ಕಳು ಸೇರಿದಂತೆ 27,888 ಪುರುಷರು, 18,697 ಮಹಿಳೆಯರು, ಹೊರರೋಗಿಗಳಾಗಿ 187 ಮಕ್ಕಳು, 2,720 ಪುರುಷರು ಹಾಗೂ 1,916 ಮಹಿಳೆಯರಿಗೆ ಒಳರೋಗಿಗಳಾಗಿ ಚಿಕಿತ್ಸೆ ನೀಡಲಾಗಿದೆ.

2,658 ಶಸ್ತ್ರಚಿಕಿತ್ಸೆಗಳು: ಪಿಕೆ ಟ್ರಾಮಾ ಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ 2,162 ಮೇಜರ್ ಮತ್ತು 496 ಮೈನರ್ ಸೇರಿದಂತೆ ಒಟ್ಟು 2,658 ಶಸ್ತ್ರಚಿಕಿತ್ಸೆ (Surgery)ಗಳನ್ನು ಯಶಸ್ವಿಯಾಗಿ ಮಾಡಲಾಗಿದೆ. 11,012 ಜನರಲ್ ಎಕ್ಸ್‌ರೇ, 430 ಎಂಎಲ್‌ಸಿ ಎಕ್ಸ್‌ರೇ ಹಾಗೂ 2,454 ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಾಡಿ ವರದಿ ನೀಡಲಾಗಿದೆ.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಶುಶ್ರೂಷಕರು ಹಾಗೂ ಸಿಬ್ಬಂದಿಗಳೇ ಪಿಕೆ ಟ್ರಾಮಾ ಕೇರ್ ಸೆಂಟರ್ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆಯೇ ಹೊರತು, ಪ್ರತ್ಯೇಕವಾಗಿ ಸರ್ಕಾರದಿಂದ ನೇಮಕಾತಿ ಪ್ರಕ್ರಿಯೆ ನಡೆದಿಲ್ಲ.

ಕೇಂದ್ರ ಸರ್ಕಾರದ ಸಾಲ ಸೌಲಭ್ಯ ಪಡೆದು, ಕೈಸಾಲದಿಂದ ಮುಕ್ತರಾಗಿ

ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಸಲಹೆ



ಮೈಸೂರು, ಡಿ. 17 (ಬಿಎಲ್‌ಯು) -ಕೇಂದ್ರ ಸರ್ಕಾರದ ಸಾಲ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಕೈ ಸಾಲದಿಂದ ಮುಕ್ತರಾಗಿ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಸಲಹೆ ನೀಡಿದ್ದಾರೆ.

ಮೈಸೂರಿನ ಕೃಷ್ಣರಾಜ ಕ್ಷೇತ್ರದಲ್ಲಿ ಇಂದು ಆರಂಭವಾದ ವಿಕಸಿತ ಭಾರತ ಸಂಕಲ್ಪ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದ ಅವರು, ಸಾಲದಿಂದ ಮುಕ್ತರಾಗಿ ಆರ್ಥಿಕವಾಗಿ ಬೆಳವಣಿಗೆ ಹೊಂದಲು ಕೇಂದ್ರ ಸರ್ಕಾರ ಬ್ಯಾಂಕ್ ಮೂಲಕ ಹಲವು ಸಾಲ ಸೌಲಭ್ಯಗಳನ್ನು ನೀಡುತ್ತಿದೆ. ಈ ಯೋಜನೆಯ ಸೌಲಭ್ಯವನ್ನು ಪಡೆಯುವ ಮೂಲಕ ಕೈ ಸಾಲದಿಂದ ಮುಕ್ತರಾಗಿ ಎಂದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 9 ವರ್ಷದ ಅವಧಿಯಲ್ಲಿ ಹಲವು ಸಾಲ ಯೋಜನೆಗಳನ್ನು ನೀಡಿದೆ. ಜನರು ಬ್ಯಾಂಕ್‌ಗಳ ಮೂಲಕ ಸಾಲ ಪಡೆದು ಅದರಿಂದ ಯಶಸ್ವಿ ವ್ಯವಹಾರಗಳನ್ನು ನಡೆಸಬೇಕು. ತರುವಾಯ ಸಾಲ ಮರು ಪಾವತಿ ಮಾಡಿ ಮತ್ತಷ್ಟು ಸಾಲ ಪಡೆದು ಆರ್ಥಿಕವಾಗಿ ಬೆಳವಣಿಗೆ ಸಾಧಿಸಬೇಕು ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಸಾಲ ಯೋಜನೆಗಳನ್ನು ಜನರಿಗೆ ತಿಳಿಸುವ ಸಲುವಾಗಿ ವಿಕಸಿತ ಭಾರತ ಸಂಕಲ್ಪ ಯಾತ್ರೆ ಆರಂಭಿಸಲಾಗಿದೆ. ಕೃಷ್ಣರಾಜ ಕ್ಷೇತ್ರದಲ್ಲಿ ಸಂಚಾರ ಮಾಡುವ ಯಾತ್ರೆ ಜನವರಿ 26ರ ತನಕ ಮೈಸೂರು ಜಿಲ್ಲೆಯ ಹಲವು ಭಾಗಗಳಲ್ಲಿ ಸಂಚರಿಸಲಿದೆ ಎಂದು ಮಾಹಿತಿ ನೀಡಿದರು.

ಕೇಂದ್ರ ಸರ್ಕಾರದ ಯೋಜನೆಗಳು ಯಾವುದೇ ಒಂದು ಜಾತಿ ಮತ್ತು ಧರ್ಮಕ್ಕಾಗಿ ಸೀಮಿತವಾಗಿಲ್ಲ. 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎಂಬ ಪರಿಕಲ್ಪನೆಯಲ್ಲಿ ಪ್ರತಿಯೊಬ್ಬರು ಇದರ ಪ್ರಯೋಜನ ಪಡೆಯಬಹುದು. ಮಧ್ಯವರ್ತಿಗಳ ಹಾವಳಿ ಇಲ್ಲದೆ ಬ್ಯಾಂಕ್ ಮೂಲಕ ನೇರವಾಗಿ ಸಾಲ ಸೌಲಭ್ಯ ಪಡೆಯಬಹುದು ಎಂದರು.

ರಸ್ತೆಬದಿ ವ್ಯಾಪಾರಿಗಳು, ಕೂಲಿ ಕಾರ್ಮಿಕರು, ರೈತರು ಸೇರಿದಂತೆ ಎಲ್ಲಾ ವರ್ಗದವರು ಸಾಲ ಪಡೆದು ವ್ಯವಸ್ಥಿತವಾಗಿ ವಾಪಾಸು ಮಾಡಬೇಕು. ಇದರಿಂದ ಮತ್ತಷ್ಟು ಜನರಿಗೆ ಅನುಕೂಲವಾಗಲಿದೆ ಎಂದು ಶಾಸಕ ಶ್ರೀವತ್ಸ ಸಲಹೆ ನೀಡಿದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವ್ಯವಸ್ಥಾಪಕಿ ಮಂಜುಳಾಭಟ್, ಕರ್ನಾಟಕ ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ವ್ಯವಸ್ಥಾಪಕ ಶಂಕರ್ ನಾರಾಯಣ್, ವಲಯ ಆಯುಕ್ತ ಮಂಜುನಾಥ್ ರೆಡ್ಡಿ, ರೇವಂತ್, ಮಾಜಿ ಕಾರ್ಪೊರೇಟರ್ ಮಾ.ವಿ.ರಾಮಪ್ರಸಾದ್, ಸೌಮ್ಯ, ಉಮೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪೂರ್ಣಯ್ಯ ನಾಲೆ ಡ್ರೋನ್ ಸರ್ವೆಗಾಗಿ ಸ್ಯಾಟಲೈಟ್ ಮೂಲಕ ಮಾರ್ಕಿಂಗ್ ಕಾರ್ಯ ಪೂರ್ಣ



ಮೈಸೂರು, ಡಿ.17 (ಎಂಟಿವೈ)- ಒತ್ತುವರಿಯಾಗಿರುವ ಪೂರ್ಣಯ್ಯ ನಾಲೆ ತೆರವಿಗಾಗಿ ಜಿಲ್ಲಾಡಳಿತ ನಡೆಸಲು ಉದ್ದೇಶಿಸಿರುವ ಡ್ರೋನ್ ಸರ್ವೆಗಾಗಿ ಭಾನುವಾರ ಸ್ಯಾಟಲೈಟ್ ಮೂಲಕ ಗ್ರೌಂಡ್ ಲೆವೆಲ್ ಮಾರ್ಕಿಂಗ್ ಕಾರ್ಯ ಪೂರ್ಣಗೊಳಿಸಲಾಗಿದ್ದು, ಇಂದು ಕುಕ್ಕರಹಳ್ಳಿ ಕೆರೆಯಿಂದ ಎರಡು ಕಿ.ಮಿ ಡ್ರೋನ್ ಸರ್ವೆ ಮಾಡಲಾಯಿತು.

ಬೆಂಗಳೂರಿನ ನಕ್ಷಾ ಟೆಕ್ ಪ್ರೈ.ಲಿಮಿಟೆಡ್ ಡ್ರೋನ್ ಸರ್ವೆ ಕಾರ್ಯದ ಜವಾಬ್ದಾರಿ ಪಡೆದಿದ್ದು, ಇದಕ್ಕಾಗಿ ಜಿಲ್ಲಾಡಳಿತ, ಸರ್ವೆ ಇಲಾಖೆ ನೀಡಿದ ನಕ್ಷೆ ಆಧರಿಸಿ ಇಂದು ಬೆಳಗ್ಗಿನಿಂದ ಮಧ್ಯಾಹ್ನದವರೆಗೂ ಪೂರ್ಣಯ್ಯ ನಾಲೆಯ ಡ್ರೋನ್ ಸರ್ವೆಗಾಗಿ ಮಾರ್ಕಿಂಗ್ ಕಾರ್ಯ ನಡೆಸಿತು. ಪರಿಪಕ್ವವಾಗಿ ದಾಖಲೀಕರಿಸುವುದಕ್ಕಾಗಿ ಸ್ಯಾಟಲೈಟ್ ಮೂಲಕ ಮಾರ್ಕಿಂಗ್ ಮಾಡಲಾಯಿತು. ಇದರಿಂದ ಪೂರ್ಣಯ್ಯ ನಾಲೆಯ ಗ್ರೌಂಡ್ ಲೆವೆಲ್‌ನ ಮಾಹಿತಿ ಖಚಿತವಾಗಿ ನಮೂದಿಸಲು ಸಾಧ್ಯವಾಗಲಿದ್ದು, ಗ್ರೌಂಡ್ ಕಂಟ್ರೋಲ್ ಪಾಯಿಂಟ್ ಗುರುತಿಸಲಾಗಿದೆ. ಸರ್ವೆ ಇಲಾಖೆ ನೀಡಿರುವ ದಾಖಲೆ ಹಾಗೂ ಗುರುತಿಸಿರುವ ಸ್ಥಳದವರೆಗೆ 10ರಿಂದ 12 ಕಿ.ಮೀ.ವರೆಗೆ ವಿಸ್ತೀರ್ಣದವರೆಗೂ ಮಾರ್ಕಿಂಗ್ ಮಾಡಲಾಗಿದೆ. ಇಂದು ಸಂಜೆ ವೇಳೆ ಕುಕ್ಕರಹಳ್ಳಿ ಕೆರೆ ಭಾಗದಿಂದ 2 ಕಿ.ಮೀ. ದೂರದ ಸರ್ವೆ ಕಾರ್ಯ ನಡೆಸಲಾಗಿದೆ.

ಸೋಮವಾರ ಪೂರ್ಣ ಪ್ರಮಾಣದ ಸರ್ವೆ ಕಾರ್ಯ ಮುಗಿಲಿದ್ದು, ಡ್ರೋನ್ ಸರ್ವೆ ದಾಖಲೆಗಳನ್ನು ದಾಖಲಿಸಿ, ಪೂರ್ಣಯ್ಯ ನಾಲೆಯ ಒತ್ತುವರಿಯ ಸ್ಪಷ್ಟ ಚಿತ್ರಣವನ್ನು ಜಿಲ್ಲಾಡಳಿತಕ್ಕೆ ನೀಡಲಾಗುತ್ತದೆ. ಆ ಬಳಿಕ ಸರ್ಕಾರದ ಅನುಮತಿ ಪಡೆದು ಅನಧಿಕೃತ ಒತ್ತುವರಿಯನ್ನು ತೆರವುಗೊಳಿಸಲಾಗುತ್ತದೆ. ಮಂಜೂರು ಪಡೆದು ಒತ್ತುವರಿ ಮಾಡಿಕೊಂಡಿರುವವರ ತೆರವಿಗೆ ಪರ್ಯಾಯ ಮಾರ್ಗದ ಕಂಡು ಹಿಡಿಯಲು ಜಿಲ್ಲಾಡಳಿತ ಆಲೋಚಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.12.2023 ಸೋಮವಾರ, ಮಳೆ ನಕ್ಷತ್ರ: ಮೂಲ 16.12.2023 ರಿಂದ 28.12.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ 6.10 ಚಿಂತನ: ಗಣೇಶ್ ಹೆಗಡೆ, 6.15 ಗೀತಾರಾಧನ 6.35 ಹಾಗೂ 6.10 "ಅಂಚೆ-ಅಂಕನ" ಆಕಾಶವಾಣಿ ಅಂಕಣ: ಪ್ರಾಯೋಜಿತ ಬಾನುಲಿ ಸರಣಿ, 6.40 ಪದಸಂಸ್ಕೃತಿ: ಪ್ರೊ.ಲಕ್ಷ್ಮೀನಾರಾಯಣ ಅರೋರಾ, 6.50 ರೈತರಿಗೆ ಸಲಹೆ, 9.00 ನೆನಪಿನಂಗಳ- ಖ್ಯಾತ ಗಮಕ ಕಲಾವಿದರಾದ ಹೊಸಹಳ್ಳಿ ಕೇಶವಮೂರ್ತಿ ಅವರೊಂದಿಗೆ ಜಿ.ರಾಜಲಕ್ಷ್ಮಿ ಶ್ರೀಧರ್ ಅವರು ನಡೆಸಿರುವ ಸಂವಾದ, 10.00 ವಿ.ದೇಶಿಕಾಚಾರ್-ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **12.30 ದೇವರನಾಮ:** ಟಿ.ಎನ್.ಶೇಷಗೋಪಾಲ್, 12.45 ನಮ್ಮ ಆರೋಗ್ಯ: ಚಳಿಗಾಲದಲ್ಲಿ ಕಂಡು ಬರುವ ಸಾಮಾನ್ಯ ಆರೋಗ್ಯ ಸಮಸ್ಯೆಗಳು, ಮೈಸೂರಿನ ಹಿರಿಯ ಕುಟುಂಬ ವೈದ್ಯರಾದ ಕೆ.ನಾಗೇಂದ್ರಪ್ರಸಾದ್ ಅವರೊಂದಿಗೆ ಮಾತುಕತೆ, 1.25 ಭಾವಗೀತೆಗಳು: ಎಸ್.ಜಿ.ರಘುರಾಂ, 3.00 ಶಕುಂತಲಾ ನರಸಿಂಹನ್-ಹಾಡುಗಾರಿಕೆ. **4.00 ಮಹಿಳಾರಂಗ:** "ಡಾಕ್ಟರ್ ಸಮಯ" ವಿಷಯ- ಬಾಣಂತಿ ಆರೈಕೆ, ಭಾಗವಹಿಸುವ ವೈದ್ಯರು- ಡಾ.ನಾಗಶ್ರೀ, 4.45 ಹಿಂದಿ ಪಾಠ: ಡಾ.ಸ್ಮಿತಾ ಚಿಪ್ಳೂಣ್‌ಕರ್, 6.00 "ಅಂಚೆ-ಅಂಕನ ಆಕಾಶವಾಣಿ ಅಂಕಣ": ಪ್ರಾಯೋಜಿತ ಬಾನುಲಿ ಸರಣಿ, 6.50 ಕೃಷಿರಂಗ: "ಹಣ್ಣು ಹೊನ್ನು" ಅಣಬೆ ಬೇಸಾಯ ಹಾಗೂ ಮೌಲ್ಯವರ್ಧನೆ- ಈ ಕುರಿತು ಡಾ.ವಿಕ್ರಮ್ ಅಪ್ಪಣ್ಣ ಅವರೊಂದಿಗೆ ಸಂದರ್ಶನ, 9.30 ವಿಕಸಿತ್ ಭಾರತ್ ಸಂಕಲ್ಪ ಯಾತ್ರೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ:** ಸುಬ್ಬರಾಯನ ಷಷ್ಠಿ, ಮುಂಜಾನೆ 4.45ರಿಂದ ಕ್ಷೀರಾಭಿಷೇಕ 108 ಲೀಟರ್ ಹಾಲಿನಿಂದ, ಪಳನಿ ಪಂಚಾಮೃತ ಅಭಿಷೇಕ, ಫಲಾಮೃತ ಅಭಿಷೇಕ, ಗಂಧಾಭಿಷೇಕ, ವಿಭೂತಿ ಅಭಿಷೇಕ, ಪುಷ್ಪಾಭಿಷೇಕ, ಪ್ರಸಾದ ವಿನಿಯೋಗ ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ, ಸಂಜೆ 5ರಿಂದ ರಾತ್ರಿ 10ರವರೆಗೆ ದರ್ಶನ ಮತ್ತು ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ.

■ **ಮೈಸೂರು ವಿಶ್ವವಿದ್ಯಾನಿಲಯ:** ಪ್ರಥಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 'ಅಭಿವಿನ್ಯಾಸ ಕಾರ್ಯಕ್ರಮ-2023', ಉದ್ಘಾಟನೆ: ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಉಪಾಧ್ಯಕ್ಷ ಪ್ರೊ.ಎಸ್.ಆರ್. ನಿರಂಜನ, ಮುಖ್ಯ ಅತಿಥಿ: ದಕ್ಷಿಣ ವಲಯ ಉಪ ಪೊಲೀಸ್ ಮಹಾ ನಿರೀಕ್ಷಕರಾದ (ಡಿಐಜಿಪಿ) ಡಾ.ಎಂ.ಬಿ.ಬೋರಲಿಂಗಯ್ಯ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಸ್ಥಳ: ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಸೆನೆಟ್ ಭವನ, ಮಾನಸ ಗಂಗೋತ್ರಿ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ಗಂಟೆವರೆಗೆ.

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷರ್ಚನಾ ಮತ್ತು ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಶ್ರೀ ಸ್ವಾಮಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ (ಶ್ರೀ ಅಯ್ಯಪ್ಪ ಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪ ದೇವಾಲಯ):** 63ನೇ ವಾರ್ಷಿಕ ಪೂಜಾ ಮಹೋತ್ಸವ, ಬೆಳಗ್ಗೆ 5.30ರಿಂದ ಮಹಾ ಗಣಪತಿ ಹೋಮ, ಉಷಪೂಜಾ, ಚತುಶುದ್ಧಿ, ಧಾರೆ, ಪಂಚಗವ್ಯಂ, ಪಂಚಕಮ್, ಕಳಶ ಪೂಜಾ, ಶೀವೇಲಿ ವಾದ್ಯದೊಂದಿಗೆ ದೇವರಿಗೆ ಉತ್ಸವ ಕಳಶಾಭಿಷೇಕಂ, ಉಚ್ಚಪೂಜಾ, ಮಧ್ಯಾಹ್ನ 12.30ರಿಂದ ಮಹಾ ಅನ್ನದಾತ, ಸಂಜೆ 5.30ಕ್ಕೆ ಪ್ರಸಾದ ವಿನಿಯೋಗ, ಸಂಜೆ 6.30ರಿಂದ ವಿಶೇಷ ತಾಯಂಬಕ-ವಾದ್ಯ ಕಲಾರತ್ನ ಪಯ್ಯಾನೂರು ಗೋಪಾಲನ್ ಕುಟ್ಟಿ ಮರಾರ್-ವೃಂದವರಿಂದ, ಸ್ಥಳ: ದೇವಸ್ಥಾನದ ಆವರಣ, ಶ್ರೀ ಚಾಮುಂಡಿಬೆಟ್ಟದ ಪಾದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ:** 74ನೇ ಸಂವಿಧಾನ ದಿನಾಚರಣೆಯ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಉಪನ್ಯಾಸ: ಮೈಸೂರು ವಿವಿ ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಡಿ. ಆನಂದ್, ವಿಷಯ: 'ಭಾರತದ ಸಂವಿಧಾನ ಮತ್ತು ವಾಣಿಜ್ಯಶಾಸ್ತ್ರ' ಅಧ್ಯಕ್ಷತೆ: ವಾಣಿಜ್ಯ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಎಂ.ಎಲ್.ಅಶೋಕ್, ಸ್ಥಳ: ವಾಣಿಜ್ಯ ಅಧ್ಯಯನ ವಿಭಾಗ, ಮಾನಸ ಗಂಗೋತ್ರಿ, ಬೆಳಗ್ಗೆ 10.30ರಿಂದ.


■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು:** ನೂತನ ವಿದ್ಯಾರ್ಥಿಗಳಿಗೆ ಮೂರು ದಿನಗಳ ಪುನಶ್ಚೇತನ-ಕಾರ್ಯಕ್ರಮ-2023-24, ಉದ್ಘಾಟನೆ: ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಪ್ರಭಾವತಿ ಎಂ.ಹಿರೇಮಠ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** ಬೆಳವಣಿಗೆಯನ್ನು ಸ್ಥಿರಗೊಳಿಸಲು ಜಾಗತಿಕ ಮಾದರಿ ಬದಲಾವಣೆ ಕುರಿತು ಅಂತಾರಾಷ್ಟ್ರೀಯ ಕಾರ್ಯಾಗಾರ, ಸ್ಥಳ: ಕಾವೇರಿ ಆಡಿಟೋರಿಯಂ, ಮುಕ್ತ ವಿವಿ ಆವರಣ, ಬೆಳಗ್ಗೆ 11 ಗಂಟೆಗೆ.

■ **ದೇಶಿರಂಗ ಸಾಂಸ್ಕೃತಿಕ ಸಂಸ್ಥೆ, ಮೈಸೂರು:** ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರರ 'ಬೆಪ್ಪುತಕ್ಕಡಿ ಬೋಳೆ ಶಂಕರ' ನಾಟಕ ಪ್ರದರ್ಶನ, ಸ್ಥಳ: ಕಿರುರಂಗಮಂದಿರ, ಕಲಾಮಂದಿರ, ಸಂಜೆ 6.30ಕ್ಕೆ

ಕಿರಿಯ ಲೆಕ್ಕ ಸಹಾಯಕರ ಹುದ್ದೆ ಪರೀಕ್ಷೆಗೆ ಮೈಸೂರಿನ 3800 ಅಭ್ಯರ್ಥಿಗಳು ಹಾಜರು

• ಮೈಸೂರಿನ 8 ಕೇಂದ್ರಗಳಲ್ಲಿ ಪರೀಕ್ಷೆ • 161 ಅಭ್ಯರ್ಥಿಗಳು ಗೈರು • ಪರೀಕ್ಷಾ ಕೇಂದ್ರದಲ್ಲಿ ಜಾಮರ್ ಅಳವಡಿಕೆ



ಮೈಸೂರು, ಡಿ.17(ಬಿಎಲ್‌ಯು)– ಕರ್ನಾಟಕ ಲೋಕಸೇವಾ ಆಯೋಗವು ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯ ಕಿರಿಯ ಲೆಕ್ಕ ಸಹಾಯಕರ ಹುದ್ದೆಗಳ ನೇಮಕಾತಿಗೆ ನಡೆಸಿದ ಪರೀಕ್ಷೆಯಲ್ಲಿ ಮೈಸೂರು ಜಿಲ್ಲೆಯ 3,872 ಅಭ್ಯರ್ಥಿಗಳು ಹಾಜರಾಗಿದ್ದರು. ಪರೀಕ್ಷಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಲೋಕ ಸೇವಾ ಆಯೋಗವು ಪರೀಕ್ಷಾ ಕೇಂದ್ರದಲ್ಲಿ ಜಾಮರ್ ಅಳವಡಿಕೆ ಸೇರಿದಂತೆ ಹಲವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿತ್ತು.

ಕರ್ನಾಟಕ ಲೋಕಸೇವಾ ಆಯೋಗವು 262 ಕಿರಿಯ ಲೆಕ್ಕ ಸಹಾಯಕರ ಹುದ್ದೆಗಳ ನೇಮಕಾತಿಗೆ ಮೈಸೂರಿನ 8 ಪರೀಕ್ಷಾ ಕೇಂದ್ರಗಳಲ್ಲಿ ಇಂದು ಪರೀಕ್ಷೆ ನಡೆಸಿತು. ಈ ಹುದ್ದೆಗಳ ಆಯ್ಕೆಗಾಗಿ ಮೈಸೂರು ಜಿಲ್ಲೆಯ 4,033 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಆದರೆ ಇವರಲ್ಲಿ 3,872 ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಹಾಜರಾಗಿದ್ದರು.

ಹೊರರಾಜ್ಯದ ಕನ್ನಡಿಗರಿಗೆ ನಿನ್ನೆ ಆಯೋಜಿಸಿದ್ದ ಜನರಲ್ ಕನ್ನಡ ಪರೀಕ್ಷೆಯಲ್ಲಿ ನೋಂದಣಿ ಮಾಡಿಕೊಂಡಿದ್ದ 43 ಅಭ್ಯರ್ಥಿಗಳಲ್ಲಿ 16 ಮಂದಿ ಭಾಗವಹಿಸಿದ್ದರು. ಇಂದು ಹಾಜರಾದ ಅಭ್ಯರ್ಥಿಗಳಿಗೆ ಬೆಳಿಗ್ಗೆ ಜನರಲ್ ಸ್ಟಡೀಸ್ ಪರೀಕ್ಷೆ ನಡೆದರೆ, ಮಧ್ಯಾಹ್ನ ಇಂಗ್ಲಿಷ್, ಕನ್ನಡ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯದ ಪರೀಕ್ಷೆಗಳು ನಡೆಯಿತು.

ಮೈಸೂರಿನ ನಜರ್‌ಬಾದ್‌ನ ಮಹಾರಾಜ ವಿಭಜಿತ ಪಿ.ಯು ಕಾಲೇಜು, ಜೆಎಲ್‌ಬಿ ರಸ್ತೆಯ ಮೈಸೂರು ವಿಶ್ವವಿದ್ಯಾನಿಲಯದ ಮಹಾರಾಜ ಕಾಲೇಜು, ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಹಾರಾಣಿ ಕಾಲೇಜು, ಎಂ.ಜಿ.ಕೊಪ್ಪಲಿನ ಸರ್ಕಾರಿ ಪದವಿ ಪೂರ್ವ ಕಾಲೇಜು, ನಾರಾಯಣ ಶಾಸ್ತ್ರಿ ರಸ್ತೆಯ ಮಹಾರಾಣಿ ಕಾಲೇಜು, ಪೀಪಲ್ಸ್ ಪಾರ್ಕ್‌ನ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಜಾಕಿ ಕ್ವಾಟ್ರರ್ಸ್‌ನ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಇಂದು ಪರೀಕ್ಷೆ ನಡೆಯಿತು.

ಪರೀಕ್ಷಾ ಅಕ್ರಮ ತಡೆಗಟ್ಟಲು ಪ್ರತಿಯೊಂದು ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾ, ಮೊಬೈಲ್ ಜಾಮರ್ ಅಳವಡಿಸಲಾಗಿತ್ತು. ಪ್ರತಿಯೊಂದು ಕೊಠಡಿಗೆ ನಿಂಯೋಜನೆಗೊಂಡಿದ್ದ ಪರೀಕ್ಷಾ ವೀಕ್ಷಕರಿಗೆ ಬಾಡಿ ಕ್ಯಾಮರಾ ನೀಡಲಾಗಿತ್ತು.

ಈ ಮೊದಲು ಅಭ್ಯರ್ಥಿಗಳ ಬದಲಿಗೆ ಬೇರೆ ಯಾರೊ ಬಂದು ಪರೀಕ್ಷೆ ಬರೆಯುತ್ತಿದ್ದರು. ಇಂತವರನ್ನು ಪತ್ತೆ ಮಾಡಲು ಲೋಕಸೇವಾ ಆಯೋಗ ಆಧುನಿಕ ಯಂತ್ರಗಳನ್ನು ಬಳಕೆ ಮಾಡಿತ್ತು. ಮುಖ ಗುರುತಿಸುವಿಕೆ ಯಂತ್ರದಿಂದ ಪರೀಕ್ಷೆಗೆ ಹಾಜರಾಗಿದ್ದ ಅಭ್ಯರ್ಥಿಗಳು ಅವರೇ ಎಂದು ಖಾತರಿಪಡಿಸಿಕೊಳ್ಳಲಾಯಿತು.

ಮೊಬೈಲ್, ಬ್ಲೂಟೂತ್ ಸೇರಿದಂತೆ ಇತರೆ ವಸ್ತುಗಳನ್ನು ಪರೀಕ್ಷಾ ಕೇಂದ್ರದೊಳಗೆ ಕೊಂಡೊಯ್ಯದಂತೆ ಶೋಧಿಸಿ ಒಳಗೆ ಬಿಡಲಾಯಿತು. ಪರೀಕ್ಷಾ ಕೇಂದ್ರದ 200 ಮೀಟರ್ ಸುತ್ತ ಸೆಕ್ಷನ್ 144 ಪ್ರಕಾರ ನಿಷೇಧಾಜ್ಞೆ ವಿಧಿಸಲಾಗಿತ್ತು. ಪ್ರತಿಯೊಂದು ಪರೀಕ್ಷಾ ಕೇಂದ್ರದ ಸುತ್ತ ಒಬ್ಬ ಪೊಲೀಸ್ ಪೇದೆಯನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಅಪರ ಜಿಲ್ಲಾಧಿಕಾರಿ ರಂಗನಾಥ್ ಹಾಗೂ ಡಿಡಿಪಿಐ ಹೆಚ್.ಕೆ.ಪಾಂಡು ಪರೀಕ್ಷೆಯ ಮೇಲುಸ್ತುವಾರಿ ವಹಿಸಿದ್ದರು.

ಪರೀಕ್ಷಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿತ್ತು. ಇಬ್ಬರು ರೂಟ್ ಆಫೀಸರ್‌ಗಳು ಹಾಗಾಗ್ಗೆ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪ್ರತಿಯೊಂದು ಪರೀಕ್ಷಾ ಕೇಂದ್ರಕ್ಕೆ ಸ್ಥಳೀಯ ತಪಾಸಣಾ ಅಧಿಕಾರಿ, ಅಧೀಕ್ಷಕ ಹಾಗೂ ಮೇಲ್ವಿಚಾರಕರನ್ನು ನಿಯೋಜನೆ ಮಾಡಲಾಗಿತ್ತು.

ಒಟ್ಟಾರೆ ಪರೀಕ್ಷಾ ಅಕ್ರಮ ತಡೆಗಟ್ಟಲು ಲೋಕಸೇವಾ ಆಯೋಗ ಹಲವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿತ್ತು. ಪರೀಕ್ಷೆಗೆ ನೋಂದಣಿ ಮಾಡಿಕೊಂಡಿದ್ದವರಲ್ಲಿ 161 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು, ಉಳಿದವರು ಉತ್ಸಾಹದಿಂದ ಪರೀಕ್ಷೆಯಲ್ಲಿ ಭಾಗಿಯಾಗಿದ್ದರು.

ಪರೀಕ್ಷೆ ಆರಂಭವಾದರೂ ವಿತರಣೆಯಾಗದ ಬಾಡಿ ಕ್ಯಾಮರಾ

ಪರೀಕ್ಷಾ ಅಕ್ರಮ ತಡೆಗಟ್ಟಲು ಲೋಕಸೇವಾ ಆಯೋಗ ಹಲವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದರೂ ಅದನ್ನು ಚಾಚೂ ತಪ್ಪದೆ ಜಾರಿಗೊಳಿಸುವಲ್ಲಿ ಅಧಿಕಾರಿಗಳು ಬೇಜವಾಬ್ದಾರಿ ತೋರಿದ್ದಾರೆ. ಪರೀಕ್ಷಾ ಕೊಠಡಿಯಲ್ಲಿ ಕಾಪಿ ಮಾಡುವುದು ಸೇರಿದಂತೆ ಅಕ್ರಮ ತಡೆಗಟ್ಟಲು ಆಧುನಿಕ ಯಂತ್ರಗಳ ಮೂಲಕ ಲೋಕಸೇವಾ ಆಯೋಗ ಹದ್ದಿನ ಕಣ್ಣಿಟ್ಟಿದೆ. ಈ ಹಿನ್ನೆಲೆ ಪ್ರತಿಯೊಂದು ಪರೀಕ್ಷಾ ಕೊಠಡಿಯ ಮೇಲ್ವಿಚಾರಕರಿಗೆ ಆಯೋಗ ಬಾಡಿ ಕ್ಯಾಮರಾಗಳನ್ನು ನೀಡಿದೆ. ಬಾಡಿ ಕ್ಯಾಮರಾ ಮೂಲಕ ಪರೀಕ್ಷಾ ಕೊಠಡಿಯ ಚಲನವಲನಗಳ ದೃಶ್ಯ ದಾಖಲಾಗುತ್ತದೆ. ಇದರಿಂದ ಅಕ್ರಮ ಎಸಗಲು ಅಭ್ಯರ್ಥಿಗಳು ಹೆದರುತ್ತಾರೆ.

ಪರೀಕ್ಷೆ ಆರಂಭವಾಗುವ ಮುನ್ನ ಪ್ರತಿಯೊಬ್ಬ ಪರೀಕ್ಷಾ ಮೇಲ್ವಿಚಾರಕ ಅದನ್ನು ಧರಿಸಬೇಕು. ಆದರೆ ನಾರಾಯಣ ಶಾಸ್ತ್ರಿ ರಸ್ತೆಯ ಮಹಾರಾಣಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷೆ ಆರಂಭವಾಗಿ ಮುಕ್ಕಾಲು ಗಂಟೆ ಕಳೆದರೂ ಬಾಡಿ ಕ್ಯಾಮರಾಗಳನ್ನು ನೀಡಿರಲಿಲ್ಲ.

ಪರೀಕ್ಷೆ ಆರಂಭವಾದ 15 ನಿಮಿಷದ ನಂತರ ಬಾಡಿ ಕ್ಯಾಮರಾಗಳಿಗೆ ಬ್ಯಾಟರಿ ಅಳವಡಿಸುವ ಪ್ರಕ್ರಿಯೆ ಆರಂಭಿಸಲಾಯಿತು. ಎಲ್ಲಾ ಬಾಡಿ ಕ್ಯಾಮರಾಗಳಿಗೆ ಬ್ಯಾಟರಿ ಅಳವಡಿಸುವ ವೇಳೆ ಅರ್ಧ ಗಂಟೆ ಸಮಯವಾಯಿತು. ತರುವಾಯ ಪರೀಕ್ಷೆ ಆರಂಭವಾದ ಮುಕ್ಕಾಲು ಗಂಟೆ ನಂತರ ಪರೀಕ್ಷಾ ಮೇಲ್ವಿಚಾರಕರಿಗೆ ಬಾಡಿ ಕ್ಯಾಮರಾಗಳನ್ನು ವಿತರಣೆ ಮಾಡಲಾಯಿತು.

ಪರೀಕ್ಷೆಯ ಜವಾಬ್ದಾರಿ ಹೊತ್ತ ಅಧಿಕಾರಿಗಳ ಬೇಜವಾಬ್ದಾರಿಗೆ ಇದು ಸ್ಪಷ್ಟ ನಿದರ್ಶನ. ಪರೀಕ್ಷಾ ಕಾರ್ಯ ಹಾಗೂ ಭದ್ರತೆಯನ್ನು ಎಷ್ಟರ ಮಟ್ಟಿಗೆ ಲಘುವಾಗಿ ಪರಿಗಣಿಸಿದ್ದಾರೆ ಎಂಬುವುದು ಇದರಿಂದ ಸಾಬೀತಾಯಿತು. ಹಾಗಾದರೆ ಪರೀಕ್ಷೆಯ ಭದ್ರತಾ ಕ್ರಮಗಳು ಹೆಸರೇಳಲು ಮಾತ್ರ ಇದೆಯೆ ಎಂಬ ಪ್ರಶ್ನೆ ಎದುರಾಯಿತು.

ಮೊದಲ ಏಕದಿನ: ದ.ಆಫ್ರಿಕಾ ವಿರುದ್ಧ ಭಾರತಕ್ಕೆ ಭರ್ಜರಿ ಜಯ



ಜೋಹಾನ್ಸ್‌ಬರ್ಗ್, ಡಿ.17– ಅರ್ಷದೀಪ್ ಸಿಂಗ್, ಆವೇಶ್ ಖಾನ್ ಅವರ ಮಾರಕ ಬೌಲಿಂಗ್ ದಾಳಿ ಹಾಗೂ ಸಾಯಿ ಸುದರ್ಶನ್, ಶ್ರೇಯಸ್ ಅಯ್ಯರ್ ಅರ್ಧಶತಕಗಳ ನೆರವಿನಿಂದ ಭಾರತ 8 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ 3 ಪಂದ್ಯಗಳ ಏಕದಿನ ಸರಣಿಯಲ್ಲಿ 1–0 ಅಂತರದ ಮುನ್ನಡೆ ಕಾಯ್ದುಕೊಂಡಿದೆ.

ಇಲ್ಲಿನ ವಾಂಡರರ್ಸ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ದಕ್ಷಿಣ ಆಫ್ರಿಕಾ 27.3 ಓವರ್‌ಗಳಲ್ಲಿ 116 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ಟೋನಿ ಡಿ ಜೋರ್ಜಿ 28, ಫೆಹ್ಲುಕ್ವಾಯೊ 33, ನಾಯಕ ಐಡೆನ್ ಮಾರ್ಕ್ರಮ್ 12 ಹಾಗೂ ಶಂಸಿ 11 ರನ್ ಗಳಿಸಿದರು. ಭಾರತದ ಪರ ಅರ್ಷದೀಪ್ ಸಿಂಗ್ 5, ಆವೇಶ್ ಖಾನ್ 4 ಹಾಗೂ ಕುಲದೀಪ್ ಯಾದವ್ ಒಂದು ವಿಕೆಟ್ ಪಡೆದರು.

ದಕ್ಷಿಣ ಆಫ್ರಿಕಾ ನೀಡಿದ ಗುರಿ ಬೆನ್ನತ್ತಿದ ಭಾರತ 16.4 ಓವರ್‌ಗಳಲ್ಲೇ 2 ವಿಕೆಟ್ ನಷ್ಟಕ್ಕೆ 117 ರನ್ ಗಳಿಸಿ ಜಯ ಸಾಧಿಸಿತು. ಭಾರತದ ಪರ ತಾಳ್ಮೆಯ ಆಟವಾಡಿದ ಯುವ ಆರಂಭಿಕ ಸಾಯಿ ಸುದರ್ಶನ್ ಹಾಗೂ ಶ್ರೇಯಸ್ ಅಯ್ಯರ್ ಅರ್ಧಶತಕಗಳ ಕೊಡುಗೆ ನೀಡಿದರು. ಶ್ರೇಯಸ್ ಅಯ್ಯರ್ 45 ಎಸೆತಗಳಲ್ಲಿ 52 ರನ್ (6 ಬೌಂಡರಿ, 1 ಸಿಕ್ಸರ್) ಗಳಿಸಿ ಔಟಾದರೆ, ಸಾಯಿ ಸುದರ್ಶನ್ 43 ಎಸೆತಗಳಲ್ಲಿ 55 ರನ್ (9 ಬೌಂಡರಿ, 43 ಎಸೆತ) ಬಾರಿಸಿ ಅಜೇಯರಾಗುಳಿದರು. ಉಳಿದಂತೆ ಋತುರಾಜ್ ಗಾಯಕ್ವಾಡ್ 5, ತಿಲಕ್ ವರ್ಮಾ 1 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಪರ ಆಂಡಿಲೆ ಫೆಹ್ಲುಕ್ವಾಯೊ, ವಿಯಾನ್ ಮುಲ್ಡರ್ ಒಂದೊಂದು ವಿಕೆಟ್ ಪಡೆದರು. ಅರ್ಷದೀಪ್ ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಕ್ಯಾನ್ಸರ್ ಜಾಗೃತಿಗಾಗಿ ಪಿಂಕ್ ಪೋಷಾಕು: ಸ್ತನ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲು ದಕ್ಷಿಣ ಆಫ್ರಿಕಾ ತಂಡದ ಆಟಗಾರರು ಗುಲಾಬಿ ರಂಗಿನ ಪೋಷಾಕು ಧರಿಸಿ ಪಂದ್ಯ ಆಡಿದರು. ಸ್ತನ ಕ್ಯಾನ್ಸರ್ ಪಿಡುಗು ಹೆಚ್ಚುತ್ತಿದ್ದು, ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಇಂತಹದೊಂದು ಅಭಿಯಾನಕ್ಕೆ ನಮ್ಮ ತಂಡವು ಕೈಜೋಡಿಸಿರುವುದು ಹೆಮ್ಮೆಯ ವಿಷಯ ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ ಸಿಇಓ ಪೊಲೆಟ್ಸಿ ಮೊಸೆಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ವಿಷ್ಣುವರ್ಧನ್ ಅಭಿಮಾನಿಗಳಾದ ಮೈಸೂರಿನ ಪಾರ್ಥಸಾರಥಿ, ಟಿ.ಎಸ್. ಅರುಣ್, ಧನರಾಜ್, ರವಿ, ಪಾಪು, ಚೇತನ್ ಮತ್ತಿತರರು ಬೆಂಗಳೂರಿನಲ್ಲಿ ನಡೆದ ಡಾ.ವಿಷ್ಣುವರ್ಧನ್ ಪುಣ್ಯಭೂಮಿ ಹೋರಾಟದಲ್ಲಿ ಭಾಗವಹಿಸಿ, ಬೆಂಬಲ ಸೂಚಿಸಿದರು.

ಅಂಕ ಗಳಿಸಬೇಕೆಂಬ ಒತ್ತಡದಿಂದ

ಎಷ್ಟೋ ಮಕ್ಕಳು ಆಸಕ್ತ ಕ್ಷೇತ್ರದಲ್ಲಿ ಸಾರ್ಥಕತೆ ಮೆರೆಯಲಾಗುತ್ತಿಲ್ಲ

• ಚಿಂತಕ ನಿತ್ಯಾನಂದ ವಿವೇಕವಂಶಿ ಅಭಿಮತ • ವಿ.ನಾರಾಯಣರಾವ್ ಸ್ಮಾರಕ ನಿಧಿಯಡಿ ಸ್ಪರ್ಧೆಗಳ ಬಹುಮಾನ ವಿತರಣೆ



ಮೈಸೂರಿನ ಅನಾಥಾಲಯದಲ್ಲಿ ಭಾನುವಾರ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಲಾಯಿತು. ಚಿಂತಕ ನಿತ್ಯಾನಂದ ವಿವೇಕವಂಶಿ, ಅನಾಥಾಲಯದ ಜಂಟಿ ಕಾರ್ಯದರ್ಶಿ ವೆಂಕಟೇಶ್ ಪದಕಿ, ಅಧ್ಯಕ್ಷ ಸಿ.ವಿ.ಗೋಪಿನಾಥ್, ಮಹಾರಾಜ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಎಸ್.ಮುರುಳಿ, ದಿನೇಶ್ ಕೋಚಿಂಗ್ ಸೆಂಟರ್ ಮುಖ್ಯಸ್ಥ ಎನ್.ವಿ.ದಿನೇಶ್, ಅನಾಥಾಲಯದ ಕಾರ್ಯದರ್ಶಿ ಹೆಚ್.ಅಶ್ವಥ್ ನಾರಾಯಣ, ಅನಾಥಾಲಯ ಕಮಿಟಿ ಸದಸ್ಯೆ ನಾಗಮಣಿ ಸಂಪತ್ (ಎಡದಿಂದ ನಿಂತವರು) ಅವರು ಚಿತ್ರದಲ್ಲಿದ್ದಾರೆ.

ಮೈಸೂರು,ಡಿ.17(ಪಿಎಂ)–ಅಂಕ ಗಳಿಸಬೇಕೆಂಬ ಒತ್ತಡವೇರುವ ಮೂಲಕ ಎಷ್ಟೋ ಮಕ್ಕಳು ತಮ್ಮ ಆಸಕ್ತಿ ಕ್ಷೇತ್ರದಲ್ಲಿ ಸಾಧಿಸಿ, ಸಾರ್ಥಕತೆ ಕಾಣುವುದನ್ನು ತಪ್ಪಿಸುವ ಸನ್ನಿವೇಶ ನಿರ್ಮಾಣವಾಗಿದೆ ಎಂದು ವಿವೇಕ ವಿದ್ಯಾವಾಹಿನಿ ಟ್ರಸ್ಟ್ ಸಂಸ್ಥಾಪಕ, ವಾಗ್ಮಿ, ಚಿಂತಕ ನಿತ್ಯಾನಂದ ವಿವೇಕವಂಶಿ ಹೇಳಿದರು.

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ದಿ.ಅನಾಥಾಲಯದ ಅನ್ನಪೂರ್ಣ ನಿಲಯದಲ್ಲಿ ಸಾಹಿತ್ಯ ಸಂಘದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಲೋಕ ಸೇವಾನಿರತ ವಿ.ನಾರಾಯಣರಾವ್ ಸ್ಮಾರಕ ನಿಧಿಯಡಿಯ ರಾಜ್ಯ ಮಟ್ಟದ ಅಂತರ ಕಾಲೇಜು ಕನ್ನಡ ಪ್ರಬಂಧ ಸ್ಪರ್ಧೆ, ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆ ಮತ್ತು ಕನ್ನಡ ಚರ್ಚಾ ಸ್ಪರ್ಧೆಯ ಸಮಾರೋಪ ಮತ್ತು ಬಹುಮಾನ ವಿತರಣಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಬಹುತೇಕ ಪೋಷಕರಿಗೆ ತಮ್ಮ ಮಕ್ಕಳು ಕಲೆ, ಸಾಹಿತ್ಯ, ಕ್ರೀಡೆಯಂತಹ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಆಸಕ್ತಿ ಇರುವುದಿಲ್ಲ. ಬದಲಿಗೆ ತಮ್ಮ ಮಕ್ಕಳು ಹೆಚ್ಚು ಅಂಕ ಗಳಿಸಬೇಕೆಂಬುದರಲ್ಲಿ ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಅಲ್ಲದೆ, ಬಹುತೇಕ ಶಿಕ್ಷಣ ಸಂಸ್ಥೆಗಳೂ ಪೋಷಕರು ಬಯಸುವಂತೆ ಪಠ್ಯೇತರ ಚಟುಟವಿಕೆಗಳಿಗಿಂತ ವಿದ್ಯಾರ್ಥಿಗಳು ಅಂಕ ಗಳಿಸಲು ಉತ್ತೇಜನ ನೀಡುವುದಕ್ಕೆ ಆದ್ಯತೆ ನೀಡುತ್ತವೆ ಎಂದು ಬೇಸರ ವ್ಯಕ್ತಪಡಿಸಿದರು.

ಜೀವನದಲ್ಲಿ ಸಾರ್ಥಕ ಭಾವನೆಯ ಕೊರತೆಯೇ ಮನುಷ್ಯನ ದುಃಖಕ್ಕೆ ಕಾರಣ. ಮತ್ತೊಬ್ಬರ ಸಂಕಷ್ಟಕ್ಕೆ ಸ್ಪಂದಿಸಿದರೆ ಅದರಿಂದ ಸಾರ್ಥಕ ಭಾವನೆ ಉಂಟಾಗುತ್ತದೆ. ಈ ಅರ್ಥಪೂರ್ಣ ಅಂಶವನ್ನು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮೀಜಿಯೊಬ್ಬರು ತಮ್ಮ ಪುಸ್ತಕ ಹಾಗೂ ಉಪನ್ಯಾಸಗಳಲ್ಲಿ ಪದೆ ಪದೇ ಉಲ್ಲೇಖಿಸುತ್ತಾರೆ. ಹಣ ಅಂತಸ್ತು ಇಲ್ಲದ ಕಾರಣಕ್ಕೆ ತಮ್ಮಲ್ಲಿ ದುಃಖ ಉಂಟಾಗುತ್ತಿದೆ ಎಂದು ಯೋಚಿಸುವುದೇ ಹೆಚ್ಚು. ಆದರೆ ಅದು ತಪ್ಪು ಎಂದರು.

ಸಂಗೀತಗಾರರು, ಉಪನ್ಯಾಸಕಾರು, ಕ್ರೀಡಾಪಟುಗಳು ಸೇರಿದಂತೆ ಯಾವುದೇ ವೃತ್ತಿಯಲ್ಲಿರುವವರು ತಮ್ಮ ಕಾಯಕದಲ್ಲಿ ಪರಿಪೂರ್ಣತೆ ಅನುಭವಿಸಿದರೆ ಅವರಲ್ಲಿ ಸಾರ್ಥಕ ಭಾವ ಮೂಡುತ್ತದೆ. ಎಲ್ಲಾ ಮಕ್ಕಳು 100ಕ್ಕೆ 100 ಮಾರ್ಕ್ಸ್ ಪಡೆದರೆ ಮನುಷ್ಯ ಮನುಷ್ಯನಲ್ಲಿ ವ್ಯತ್ಯಾಸವೇನು? ಐದು ಬೆರಳುಗಳು ಒಂದೇ ಸಮನಾಗಿದ್ದರೆ ನಮ್ಮ ಮುಷ್ಠಿ ನಿಷ್ಪ್ರಯೋಜಕವಾಗಲಿದೆ. ಅಂತೆಯೇ ನಿಸರ್ಗ ಎಂದರೆ ಅದು ವೈವಿಧ್ಯತೆಯ ಸಾಗರ. ಅಲ್ಲಿ ಏಕರೂಪತೆ ಇದ್ದರೆ ನಾಶವಾಗಲಿದೆ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅನಾಥಾಲಯದ ಅಧ್ಯಕ್ಷರೂ ಆದ ಭಾರತ ಸರ್ಕಾರದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಮಾತನಾಡಿ, ನಾನೂ ಈ ಅನಾಥಾಲಯದ ವಿದ್ಯಾರ್ಥಿಯಾಗಿದ್ದ. ಆ ಸಂದರ್ಭದಲ್ಲೇ ಬದುಕಿನಲ್ಲಿ ಶಿಸ್ತು ಅಗತ್ಯ ಎಂಬ ಮೌಲ್ಯದ ಅರಿವಾಯಿತು. ನಾನು ಬದುಕಿನಲ್ಲಿ ಸಾರ್ಥಕತೆ ಅನುಭವಿಸಲು ಮೂಲ ಕಾರಣ ಈ ಅನಾಥಾಲಯ. ಇದರ ಸ್ಥಾಪಕ ತಾತಯ್ಯನವರು ಹಾಗೂ ಅವರು ಹೊಂದಿದ್ದ ಸಂಪರ್ಕ ಜಾತಿ, ಧರ್ಮ, ಮತ ಎಲ್ಲದ್ದರ ಎಲ್ಲೆಯನ್ನು ಮೀರಿದ್ದು ಎಂದು ಸ್ಮರಿಸಿದರು.

ಇದೇ ವೇಳೆ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಸ್ಮರಣಿಕೆಯೊಂದಿಗೆ ನಗದು ಬಹುಮಾನ ವಿತರಣೆ ಮಾಡಲಾಯಿತು. ಮಹಾರಾಜ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಎಸ್.ಮುರುಳಿ, ದಿನೇಶ್ ಕೋಚಿಂಗ್ ಸೆಂಟರ್ ಮುಖ್ಯಸ್ಥ ಎನ್.ವಿ.ದಿನೇಶ್, ಅನಾಥಾಲಯದ ಜಂಟಿ ಕಾರ್ಯದರ್ಶಿ ವೆಂಕಟೇಶ್ ಪದಕಿ, ಕಾರ್ಯದರ್ಶಿ ಹೆಚ್.ಅಶ್ವಥ್ ನಾರಾಯಣ, ಕಮಿಟಿ ಸದಸ್ಯೆ ನಾಗಮಣಿ ಸಂಪತ್ ಮತ್ತಿತರರು ಹಾಜರಿದ್ದರು.

ಸ್ಪರ್ಧಾ ವಿಜೇತರ ವಿವರ

19ನೇ ವಾರ್ಷಿಕ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ವಿದ್ಯಾವರ್ಧಕ ಕಾನೂನು ಕಾಲೇಜಿನ ಎಸ್.ರವಿ ಪ್ರಥಮ, ವಿದ್ಯಾವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್‌ನ ಎಸ್.ಆರ್.ಹೇಮಶ್ರೀ ದ್ವಿತೀಯ, ಶೇಷಾದ್ರಿಪುರಂ ಇಂಡಿಪೆಂಡೆಂಟ್ ಪಿಯು ಕಾಲೇಜಿನ ವಿ.ಸಾಯಿ ಪ್ರಿಯಾ ತೃತೀಯ, ಎರಡನೇ ವಾರ್ಷಿಕ ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆಯಲ್ಲಿ ಎಸ್‌ಡಿಎಂ ಇಂಡಿಪೆಂಡೆಂಟ್ ಕಾಲೇಜಿನ ಎಸ್.ಕಾರ್ತಿಕ್ ಕಾಮತ್ ಪ್ರಥಮ, ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನ ಧೀಮಂತ್ ಭಟ್ ದ್ವಿತೀಯ, ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ವಿಶ್ವೇಶ್ವರ ಭಾರ್ಗವ ತೃತೀಯ, 28ನೇ ವಾರ್ಷಿಕ ಕನ್ನಡ ಚರ್ಚಾ ಸ್ಪರ್ಧೆಯಲ್ಲಿ ಊಟಿ ರಸ್ತೆ ಜೆಎಸ್‌ಎಸ್ ಕಾಲೇಜಿನ ಆರ್.ವಿ.ಅನನ್ಯ ಪ್ರಥಮ, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಬಿಂದು ಅವಧಾನಿ ದ್ವಿತೀಯ, ಜ್ಞಾನೋದಯ ಪಿಯು ಕಾಲೇಜಿನ ವೈ.ಡಿ.ಚೈತ್ರ ತೃತೀಯ, ಕಾಲೇಜ್ ಆಫ್ ಅಗ್ರಿಕಲ್ಚರ್‌ನ ಜಿ.ಎಂ.ಯಶ್ವಂತ್, ಕನಕಪುರ ದಿವಾನ್ಸ್ ಕಾಲೇಜಿನ ಕೆ.ಸಂತೋಷ್ ಹಾಗೂ ವಿದ್ಯಾವರ್ಧಕ ಕಾನೂನು ಕಾಲೇಜಿನ ಸಿ.ಆರ್.ಜೀವಿತಾ ಸಮಾಧಾನಕರ ಬಹುಮಾನ, ಅನಾಥಾಲಯ ವಿದ್ಯಾರ್ಥಿನಿಲಯ ವಿದ್ಯಾರ್ಥಿಗಳ ಪ್ರಬಂಧ ಸ್ಪರ್ಧೆಯಲ್ಲಿ ಹೆಚ್.ಆರ್.ಮಂಜುನಾಥ್ ಪ್ರಥಮ, ಅಕ್ಷತಾ ಭಟ್ ದ್ವಿತೀಯ, ಹೆಚ್.ಆರ್.ಪೂಜಾ ತೃತೀಯ ಬಹುಮಾನ ಪಡೆದರು.

ಕಾಮಾಕ್ಷಿ ಆಸ್ಪತ್ರೆ ಜಂಟಿ ವ್ಯವಸ್ಥಾಪಕ ಟ್ರಸ್ಟಿ ಅಶೋಕ್ ಶೆಣೈ ಇನ್ನಿಲ್ಲ



ಮೈಸೂರು, ಡಿ.17– ಮೈಸೂರಿನ ಕಾಮಾಕ್ಷಿ ಆಸ್ಪತ್ರೆಯ ಜಂಟಿ ವ್ಯವಸ್ಥಾಪಕ ಟ್ರಸ್ಟಿ ಹಾಗೂ ಗೀತಾ ಶಿಶು ಶಿಕ್ಷಣ ಸಂಘದ ಟ್ರಸ್ಟಿಯೂ ಆಗಿದ್ದ ವಿವಿಪುರಂ ನಿವಾಸಿ ಎಂ.ಅಶೋಕ್ ಶೆಣೈ(61) ಹೃದಯಾಘಾತದಿಂದ ಭಾನುವಾರ ಸಂಜೆ ನಿಧನರಾಗಿದ್ದಾರೆ.

ಮಂಗಳೂರು ಗಣೇಶ್ ಬೀಡಿ ವರ್ಕ್ಸ್ ಪಾಲುದಾರರು ಹಾಗೂ ರಾಷ್ಟ್ರೋತ್ಥಾನ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ದಿವಂಗತ ಆನಂದ್ ರಾವ್ ಅವರ ಪುತ್ರರಾದ ಎಂ.ಅಶೋಕ್ ಶೆಣೈ, ಗೌಡ ಸಾರಸ್ವತ ಬ್ರಾಹ್ಮಣ ಸಭಾದ ಮುಖಂಡರಾಗಿದ್ದು, ಖ್ಯಾತ ಉದ್ಯಮಿಯೂ ಆಗಿದ್ದರು.

ಭಾನುವಾರ ಸಂಜೆ ಕಾಳಿದಾಸ ರಸ್ತೆಯಲ್ಲಿ ವಾಕಿಂಗ್ ಮಾಡುವಾಗ ಕುಸಿದು ಬಿದ್ದ ಅವರನ್ನು ಸಾರ್ವಜನಿಕರು ಚಂದ್ರಕಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಬಳಿಕ ಬೃಂದಾವನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದರಾದರೂ ಅವರನ್ನು ಪರಿಶೀಲಿಸಿದ ವೈದ್ಯರು ನಿಧನರಾಗಿದ್ದಾರೆ ಎಂದು ತಿಳಿಸಿದ್ದಾರೆ.

ಮೃತರು ತಾಯಿ ನಾಗರತ್ನ ರಾವ್, ಪತ್ನಿ ಮಮತ ಶೆಣೈ, ಪುತ್ರಿ ಕೃತಿಕಾ ಶೆಣೈ, ಪುತ್ರ ಅಭಯ್ ಶೆಣೈ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ(ಡಿ.18) ಸಂಜೆ 4 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೈಸೂರು ಜಿಲ್ಲೆಯ ಶ್ರೀ ಕೈವಾರ ಯೋಗಿ ನಾರೇಯಣ ಯತೀಂದ್ರರ ಬಲಿಜ(ಬಣಜಿಗ) ಸಂಘ ಹೊರ ತಂದಿರುವ 2024ನೇ ಸಾಲಿನ ಕ್ಯಾಲೆಂಡರ್ ಅನ್ನು ಉದ್ಯಮಿ ಮೆಹುಲ್ ಜೆ.ಪಟೇಲ್ ಬಿಡುಗಡೆಗೊಳಿಸಿದರು. ಸಂಘದ ಅಧ್ಯಕ್ಷ ಕೃಷ್ಣಪ್ಪ, ಮಾಜಿ ಅಧ್ಯಕ್ಷ ಟಿ.ಕೆ.ಉಮೇಶ್, ಗೌರವ ಅಧ್ಯಕ್ಷ ರೇಣು, ಗೌರವ ಸಲಹೆಗಾರ ಕೆ.ಪಿ.ಪ್ರಕಾಶ್, ಕಾರ್ಯದರ್ಶಿ ಬಿ.ರಾಮು, ಬಿ.ವಿ.ಗೋಪಿ ಮತ್ತು ಸಂಘದ ಪದಾಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ವೃದ್ಧಾಪ್ಯ ಸಂಭ್ರಮವಾಗಿರಬೇಕೆ ಹೊರತು ಶಾಪವಾಗಿರಬಾರದು

ಚಂದನ ವಾಹಿನಿ ನಿರೂಪಕ ಡಾ.ನಾ.ಸೋಮೇಶ್ವರ ಅಭಿಮತ



ಮೈಸೂರು, ಡಿ.17(ಎಂಕೆ)– ವೃದ್ಧಾಪ್ಯ(ಸಂಧ್ಯಾ) ಸಂಭ್ರಮವಾಗಿರಬೇಕೇ ಹೊರತು ಶಾಪವಾಗಿರಬಾರದು ಎಂದು ದೂರದರ್ಶನ ಚಂದನ ವಾಹಿನಿ ನಿರೂಪಕರೂ ಆದ ಲೇಖಕ ಡಾ.ನಾ.ಸೋಮೇಶ್ವರ ಹೇಳಿದರು.

ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋದನಾ ಸಂಸ್ಥೆಯ ಅಮೃತ ಮಹೋತ್ಸವ ಸಭಾಂಗಣದಲ್ಲಿ ಮೈಸೂರು ಮೆಡಿಕಲ್ ಕಾಲೇಜು ಅಲುಮ್ನಿ ಅಸೋಸಿಯೇಶನ್, ಶಾರದಾ ಚಾರಿಟೇಬಲ್ ಟ್ರಸ್ಟ್, ಲಾಯಲ್ ವರ್ಲ್ಡ್ ಹಾಗೂ ಸ್ವರಾಂಜಲಿ ತಂಡದ ವತಿಯಿಂದ ಆಯೋಜಿಸಿದ್ದ 'ಸಂಧ್ಯಾ ಸಂಭ್ರಮ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮನುಷ್ಯನ ವೃದ್ಧಾಪ್ಯ ಆನಂದಮಯವಾಗಿರಬೇಕಾದರೆ ದೈಹಿಕ, ಮಾನಸಿಕ ಹಾಗೂ ಸಾಮಾಜಿಕವಾಗಿ ಸದೃಢರಾಗಿರುವುದು ಅವಶ್ಯವಾಗಿದೆ ಎಂದರು.

ಮನುಷ್ಯನ ಬದುಕು 7 ಹಂತಗಳಲ್ಲಿ ನಡೆಯುತ್ತದೆ ಎಂಬ ಪಕ್ಷಿನೋಟ ಕೊಟ್ಟವರು ವಿಲಿಯಂ ಷೇಕ್ಸ್‌ಪಿಯರ್. ಹಿಂದೂ ಧರ್ಮದಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸವೆಂದು 4 ಹಂತಗಳಲ್ಲಿ ಮನುಷ್ಯನ ಬದುಕನ್ನು ವಿಂಗಡಿಸಲಾಗಿದೆ. ವೃದ್ಧಾಪ್ಯದಲ್ಲಿ ಆರೋಗ್ಯದ ಕಡೆ ಹೆಚ್ಚಿನ ಗಮನ ಕೊಡಬೇಕು ಎಂದ ಅವರು, ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದೇಗೆ ಎಂಬುದನ್ನು ಸವಿವರವಾಗಿ ತಿಳಿಸಿಕೊಟ್ಟರು. ಬಳಿಕ ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಪಾಠ ತಿಳಿಸಿದರೆ, ಸ್ವರಾಂಜಲಿ ತಂಡದ ಗಾಯಕರು ಹತ್ತು ಹಲವು ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿ ನೆರೆದಿದ್ದವರನ್ನು ರಂಜಿಸಿದರು.

ಸನ್ಮಾನ, ಬಹುಮಾನ ವಿತರಣೆ: ಇದೇ ವೇಳೆ ಆರ್ಥಿಕ ಸಂಕಷ್ಟದಲ್ಲಿರುವ 6 ಮಂದಿ ಹಿರಿಯ ನಾಗರಿಕರನ್ನು ಆತ್ಮೀಯವಾಗಿ ಸನ್ಮಾನಿಸಿ, ಗೌರವ ಧನ ನೀಡಲಾಯಿತು. ಹಿರಿಯ ನಾಗರಿಕರಿಗೆ ಏರ್ಪಡಿಸಿದ್ದ 70 ವರ್ಷ ಮೇಲ್ಪಟ್ಟವರ ಗಾಯನ ಸ್ಪರ್ಧೆಯಲ್ಲಿ ಶಾಂತಲಕ್ಷ್ಮಿ ನಾರಾಯಣ್ ಪ್ರಥಮ, ಶಾರದಮ್ಮ ದ್ವಿತೀಯ, ಹೆಚ್.ಎಲ್.ಜಗದೀಶ್ ತೃತೀಯ, ಪ್ರೇಮ್ ಸಾಗರ್ ಸಮಾಧಾನಕರ ಬಹುಮಾನ ಗೆದ್ದರು. 60–70 ವರ್ಷದೊಳಗಿನವರ ಗಾಯನ ಸ್ಪರ್ಧೆಯಲ್ಲಿ ಜಿ.ಎಸ್.ವೆಂಕಟೇಶ್ ಪ್ರಥಮ, ಎಸ್.ಕೆ.ಮೋಹನ್ ಕುಮಾರ್ ದ್ವಿತೀಯ, ರಾಜಶೇಖರ್ ಜವಳಗಿ ತೃತೀಯ, ಎನ್.ಎಸ್.ಭಗವಾನ್, ಶ್ರೀಧರ್ ಮತ್ತು ಮೀನಾಕ್ಷಿ ಚಟ್ನಿ ಅವರಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ರಂಗೋಲಿ ಸ್ಪರ್ಧೆಯಲ್ಲಿ ಸಾವಿತ್ರಿ ಪ್ರಥಮ, ಸರಳ ದ್ವಿತೀಯ, ಶಕುಂತಲ ತೃತೀಯ ಮತ್ತು ಸದಾಶಿವ ಚಟ್ನಿ ಸಮಾಧಾನ ಬಹುಮಾನ ಪಡೆದುಕೊಂಡರು. ಹಾಗೆಯೇ ಫ್ಯಾಷನ್ ಶೋ ಸ್ಪರ್ಧೆಯ ವಿವಿಧ ವಿಭಾಗಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.



ನಕ್ಕರೆ ಅದೇ ಸ್ವರ್ಗ

ಮೇಷ್ಟ್ರು : ಇಂಗ್ಲಿಷ್ ಬಗ್ಗೆ ಏನಾದರೂ Problems ಇದ್ರೆ ಕೇಳಿ ಮಕ್ಕಳೆ...
ಮರಿತಿಮ್ಮ : `I don't no' ಅಂದ್ರೆ ಏನು ಮೇಷ್ಟ್ರೆ?
ಮೇಷ್ಟ್ರು : 'ನನಗೆ ಗೊತ್ತಿಲ್ಲ'
ಮರಿತಿಮ್ಮ : ಇದೆ ನಿಮಗೆ ಗೊತ್ತಿಲ್ಲ ಅಂದ್ರೆ... ಇನ್ನೇನು ಕೇಳೋದು ಮೇಷ್ಟ್ರೆ....!

ಮೈಸೂರು ಮಿತ್ರ

ಸೋಮವಾರ, 18 ಡಿಸೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

'ಸರಳತೆ, ತಾಳ್ಮೆ ಮತ್ತು ಪ್ರೀತಿ ಈ ಮೂರು ನಿಧಿ ಇದ್ದಂತೆ ಇದನ್ನು ಹೊಂದಿದ್ದವ ಅತ್ಯಂತ ಸಿರಿವಂತ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕಾಯುವವನು ಹೆಚ್ಚೋ, ಕಳುವವನು ಹೆಚ್ಚೋ'

ನಿಮ್ಮ ಪತ್ರಗಳು

ಸಂಸತ್ತಿಗೆ ಭದ್ರತೆಯ ಸವಾಲು

ಮಾನ್ಯರೆ,

ಸಂಸತ್ ಮೇಲಿನ ದಾಳಿಯ ಕಹಿ ನೆನಪಿನ ದಿನವೇ ವ್ಯವಸ್ಥಿತವಾಗಿ ಹುಚ್ಚಾಟದ ರೀತಿಯ ದಾಳಿ ನಡೆದಿರುವುದು ವಿಷಾದನೀಯ.

ಮೈಸೂರಿನ ಸಂಸದ ಪ್ರತಾಪ್‌ಸಿಂಹರವರ ಕಚೇರಿಗೆ ಮೂರು ತಿಂಗಳಿಂದಲೂ ಅಲೆದು ಈ ಇಬ್ಬರು ವ್ಯಕ್ತಿಗಳು ಪಾಸ್ ಪಡೆದಿದ್ದರೆಂದು ವರದಿಯಾಗಿದೆ. ಎಂದರೆ ಸಂಸದರ /ಆಪ್ತ ಸಹಾಯಕನ ವಿಶ್ವಾಸಗಳಿಸಿ ವ್ಯವಸ್ಥಿತವಾಗಿ ಪಾಸ್ ಪಡೆದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಪ್ರತಿ ವಿಷಯದಲ್ಲೂ ತಮ್ಮ ವಿರೋಧಿಗಳನ್ನು ಕಟುವಾಗಿ ಟೀಕಿಸುತ್ತಿದ್ದ ಸಂಸದ ಮತ್ತು ಕೇಂದ್ರದ ಆಡಳಿತ ಪಕ್ಷವನ್ನು ಗುರಿಯಾಗಿಸಿಕೊಂಡೆ ಈ ರೀತಿಯ ದಾಳಿ ಮಾಡಲು ಭಾಗಿಯಾದ ಎಲ್ಲರೂ ವ್ಯವಸ್ಥಿತವಾಗಿ ಸಂಚು ಮಾಡಿದ್ದರೆ ಎನ್ನುವ ಬಗ್ಗೆ ತನಿಖೆ ಮಾಡಬೇಕು.

ಇನ್ನು ದಾಳಿಯ ವಿಚಾರ ಮಾಧ್ಯಮ, ಪತ್ರಿಕೆಗಳಲ್ಲಿ ವರದಿಯಾಗಿದ್ದರೂ ಪಾಸ್ ನೀಡಿದ ಅಪಖ್ಯಾತಿಗೆ ಗುರಿಯಾಗಿರುವ ಸಂಸದರು ಎಲ್ಲೂ ಹೇಳಿಕೆ ನೀಡಿದ, ಅಥವಾ ಸಂಸತ್ತಿನಲ್ಲಿ ಕಾಣಿಸಿಕೊಂಡ ವರದಿ ಇಲ್ಲ. ಈ ಬಗ್ಗೆ ಅವರ ಸ್ಪಷ್ಟೀಕರಣದ ಅಗತ್ಯವಿದೆ. ಈ ಘಟನೆಯ ಕಾರಣವಾಗಿ ಇನ್ನು ಮುಂದೆ ಸಂಸತ್ ಕಲಾಪ ವೀಕ್ಷಿಸ ಬಯಸುವ ಸಾರ್ವಜನಿಕರಿಗೆ ಪಾಸ್ ಸಿಗುವುದು ದುಸ್ತರವಾಗಬಹುದು. ಹಾಗೂ ಈ ರೀತಿ ಪಾಸ್ ಬಯಸುವ ಸಾರ್ವಜನಿಕರನ್ನು, ಸಂಸದರು /ಶಾಸಕರು ಅನುಮಾನದಿಂದ ನೋಡುವ, ಪಾಸ್ ಕೊಡಲು ಹಿಂದು-ಮುಂದು ನೋಡು ವಂತಾಗಿದೆ. ಅದೇನೇ ಆದರೂ ಅದೆಷ್ಟೇ ಭದ್ರತೆ ನೀಡಿದರೂ ಲೋಪಗಳು ಇದ್ದೇ ಇರುತ್ತವೆ. ಕಾಯುವವನು ಹೆಚ್ಚೋ, ಕಳುವವನು ಹೆಚ್ಚೋ ಎನ್ನುವ ಗಾದೆಯಂತೆ ಯಾವುದೇ ಭದ್ರತೆ ಇದ್ದರೂ ಅದನ್ನು ಬೇಧಿಸಲು ಹೊಸ ಹೊಸ ಸಂಚುಗಳನ್ನು ಮಾಡುತ್ತಲೇ ಇರುತ್ತಾರೆ ಎನ್ನುವುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

ಇನ್ನು ಈ ಘಟನೆ ಆದಾಗ ಸಂಸತ್ತಿನಲ್ಲಿ ಕೇವಲ 100 ಮಂದಿ ಸಂಸದರು ಇದ್ದರೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. 545 ಸದಸ್ಯ ಬಲದ ಸಂಸತ್ತಿನಲ್ಲಿ ಕಲಾಪದಲ್ಲಿ ಭಾಗವಹಿಸಿದ್ದ ಸಂಸದರ ಸಂಖ್ಯೆಯನ್ನು ನೋಡಿಯೂ ಗಾಬರಿ ಆಯಿತು!

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ವಕೀಲರ ಹೋರಾಟಕ್ಕೆ ಸಂದ ಜಯ

ಮಾನ್ಯರೆ,

ಕರ್ನಾಟಕದ ವಿಧಾನಮಂಡಲದ ಉಭಯ ಸದನಗಳಲ್ಲಿ ವಕೀಲರ ಹಿತ ಸಂರಕ್ಷಣಾ ಕಾಯ್ದೆ ಅಂಗೀಕೃತಗೊಂಡಿರುವುದು ಮೈಸೂರು ವಕೀಲರ ಸಂಘ ಕಳೆದ ಕೆಲವು ದಿನಗಳಿಂದ ನಡೆಸುತ್ತಿದ್ದ ಹೋರಾಟಕ್ಕೆ ಸಂದ ಜಯವಾಗಿದೆ. ರಾಜ್ಯ ಬಾರ್ ಕೌನ್ಸಿಲ್‌ನ ಗೌರವಾನ್ವಿತ ಸದಸ್ಯ ಹಾಗೂ ಹಿರಿಯ ವಕೀಲ ಬಿ.ಆರ್. ಚಂದ್ರಮೌಳಿ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹಾದೇವಸ್ವಾಮಿ, ಉಪಾಧ್ಯಕ್ಷ ಪುಟ್ಟಸಿದ್ದೇಗೌಡ, ಕಾರ್ಯದರ್ಶಿ ಎಸ್.ಉಮೇಶ್ ಸೇರಿದಂತೆ ಹಿರಿಯ ಮತ್ತು ಕಿರಿಯ ಸಮಿತಿ ಸದಸ್ಯರಿಗೆ ಮತ್ತು ಮಹಿಳಾ ಕಾರ್ಯದರ್ಶಿ ಶ್ರೀಮತಿ ಭಾಗ್ಯರವರಿಗೂ ಹೃತ್ಪೂರ್ವಕ ಅಭಿನಂದನೆಗಳು. ಮೈಸೂರು ವಕೀಲರ ಸಂಘದ ಈ ಸಂಘಟಿತ ಹೋರಾಟ ರಾಜ್ಯಾದ್ಯಂತ ಪ್ರಶಂಸೆಗೆ ಪಾತ್ರವಾಗಿದೆ. ಸಂವಿಧಾನದ ಆಶಯಗಳನ್ನು ಸಾಕಾರಗೊಳಿಸಿ, ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ವಕೀಲರ ಮೇಲೆಯೇ ದೌರ್ಜನ್ಯ ಅಥವಾ ಹಲ್ಲೆ ನಡೆಯುತ್ತಿರುವುದು ತೀರಾ ಖಂಡನಾರ್ಹ ವಿಚಾರ. ವಕೀಲರಿಗೆ ಸಂಬಂಧಿಸಿದ ಯಾವುದೇ ಸಮಸ್ಯೆ ಮುಂದೆ ಎದುರಾದರೂ ಇದೇ ರೀತಿಯ ಸಂಘಟಿತ ಹೋರಾಟ ನಡೆಯಲಿ. ವಕೀಲರ ನ್ಯಾಯಬದ್ಧ ಬೇಡಿಕೆಗಳು ಈಡೇರಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಇಂತಹ ಜನಪ್ರತಿನಿಧಿಗಳ ಅಗತ್ಯ ಸಮಾಜಕ್ಕಿದೆ

ಮಾನ್ಯರೆ,

ಇತ್ತೀಚೆಗೆ ರಾಮನಗರ ವ್ಯಾಪ್ತಿಯ ಒಂದು ಗ್ರಾಮದಲ್ಲಿ ಕರ್ನಾಟಕ ಸಾರಿಗೆ ಬಸ್ ಬರದೇ ಪ್ರಯಾಣಿಕರು ಗಂಟೆಗಟ್ಟಲೇ ಕಾಯುತ್ತಿದ್ದು, ಮಹಿಳೆಯೊಬ್ಬರು ಸಾರಿಗೆ ಸಚಿವರಿಗೆ ಮೊಬೈಲ್ ಕರೆ ಮಾಡಿದಾಗ ಕರೆ ಸ್ವೀಕರಿಸಿದ ಸಾರಿಗೆ ಸಚಿವರು ಮಹಿಳೆಯ ಸಮಸ್ಯೆಯನ್ನು ಆಲಿಸಿ ಕ್ಷಿಪ್ರ ಗತಿಯಲ್ಲಿ ಬಸ್ ವ್ಯವಸ್ಥೆ ಮಾಡಿ ಮತ್ತೆ ಆ ಮಹಿಳೆಗೆ ಕರೆ ಮಾಡಿ ಬಸ್ ಬಂದಿದೆಯೇ ಎಂದು ಕೇಳಿರುವುದನ್ನು ಪತ್ರಿಕೆಗಳಲ್ಲಿ ಓದಿದೆವು. ಇಂದಿನ ವ್ಯವಸ್ಥೆಯಲ್ಲಿ ಇಂತಹ ಸಚಿವರು ವಿರಳ. ಎಲ್ಲಾ ಸಚಿವರು ರಾಮಲಿಂಗಾರೆಡ್ಡಿಯವರಂತೆ ಕರ್ತವ್ಯ ನಿರ್ವಹಿಸಿ ಜನಾನುರಾಗಿಯಾಗಲಿ.

–ಜಿ.ಪಿ.ರಾಜೇಶ್, ವಿ.ವಿ.ಪುರಂ, ಮೈಸೂರು.

ಹೊಸ ವರ್ಷ ಆಚರಣೆಗೆ ಇರಲಿ ಹೆಚ್ಚಿನ ಮುಂಜಾಗ್ರತ ಕ್ರಮ

ಮಾನ್ಯರೆ,

2023 ಮುಗಿಯುತ್ತಾ ಬಂತು,ಇನ್ನೇನು 2024ರ ಹೊಸ ವರ್ಷದ ಬರುವಿಕೆಗೆ ಮತ್ತು ಅದರ ಆಚರಣೆಗೆ ಜನರು ತಯಾರಾಗುತ್ತಿದ್ದಾರೆ. ಹೊಸ ವರ್ಷದ ಆಚರಣೆಯ ಸಮಯದಲ್ಲಿ ಬೆಂಗಳೂರು ನಗರ ಸೇರಿದಂತೆ ರಾಜ್ಯ ಮತ್ತು ದೇಶದ ಪ್ರಮುಖ ನಗರಗಳಲ್ಲಿ ಮೋಜು-ಮಸ್ತಿ, ಪಾರ್ಟಿಗಳು ಬಹಳ ಜೋರಾಗಿಯೇ ನಡೆಯುತ್ತವೆ. ಇಂತಹ ಸಂದರ್ಭದಲ್ಲಿಯೇ ವಿದ್ಯಾರ್ಥಿಗಳು, ಐಟಿ ಬಿಟಿ ಉದ್ಯೋಗಿಗಳು ಡ್ರಗ್ಸ್, ಕೊಕೇನ್‌ನಂತಹ ಮಾದಕ ವಸ್ತುಗಳಿಗೆ ಆಹ್ವಾನಿತರಾಗುವುದು ಮತ್ತು ಇವುಗಳನ್ನು ಮಾರಾಟ ಮಾಡುವವರ ಕೈಚಳಕ ಹೆಚ್ಚಾಗುವುದು.

ಹೊಸ ವರ್ಷದ ಆಚರಣೆಯ ವಿಚಾರದಲ್ಲಿ ಪೊಲೀಸರು ಕೆಲ ಕ್ರಮಗಳನ್ನು ಕೈಗೊಂಡಿರುತ್ತಾರೆ. ಅದನ್ನು ಪಾಲಿಸುವಂತೆ ಸೂಚಿಸಿರುತ್ತಾರೆ. ಆದರೆ ಎಲ್ಲೋ ಒಂದು ಕಡೆ ಮಾದಕ ವಸ್ತುಗಳ ಮಾರಾಟಗಾರರು ಇವರ ಕಣ್ಣು ತಪ್ಪಿಸಿ ವಿದ್ಯಾರ್ಥಿಗಳು, ಉದ್ಯೋಗಿಗಳನ್ನು ದಾರಿ ತಪ್ಪಿಸುತ್ತಾರೆ. ಇದರಿಂದ ಇವರುಗಳ ಜೀವನ ಹಾಳು. ಇದೀಗ ಬೆಂಗಳೂರಿನಲ್ಲಿ ಸಿಸಿಬಿ ಪೊಲೀಸರು ಕಾರ್ಯಾಚರಣೆ ನಡೆಸಿ ಹೊಸ ವರ್ಷ ಹಾಗೂ ಕ್ರಿಸ್ಮಸ್ ಸಂಭ್ರಮಕ್ಕಾಗಿ ಶೇಖರಿಸಿ ಇಟ್ಟಿದ್ದ 21 ಕೋಟಿ ರೂ. ಮೌಲ್ಯದ ಡ್ರಗ್ಸ್, ಕೊಕೇನ್‌ನಂತಹ ಮಾದಕ ವಸ್ತುಗಳನ್ನು ನೈಜೀರಿಯನ್ ಪ್ರಜೆ ಲಿಯೋನಾರ್ಡ್ ಒಕ್ವು ಡಿಲಿ ಎಂಬಾತನಿಂದ ವಶಪಡಿಸಿಕೊಂಡಿದ್ದಾರೆ. ಹೀಗಾಗಿ ಎಷ್ಟೇ ಕ್ರಮವಹಿಸಿದ್ದರು ಇಂಥವರಿಂದ ಸಾರ್ವಜನಿಕರು ವ್ಯಸನಕ್ಕೆ ಒಳಗಾಗುತ್ತಿದ್ದಾರೆ,ಇದಕ್ಕಾಗಿ ಇನ್ನೂ ಹೆಚ್ಚಿನ ಕಠಿಣ ಕ್ರಮಗಳನ್ನು ಕೈಗೊಂಡು ಸಂಭ್ರಮಾಚರಣೆಯಲ್ಲಿ ವಿದ್ಯಾರ್ಥಿ ಮತ್ತು ಉದ್ಯೋಗಿಗಳ ಜೀವನ ಹಾಳಾಗದಂತೆ ನೋಡಿಕೊಳ್ಳಬೇಕಾಗಿದೆ.

–ಯಶವಂತ ಹೆಚ್.ಎಸ್, ಪತ್ರಿಕೋದ್ಯಮ ವಿಭಾಗ, ಮಹಾರಾಜ ಕಾಲೇಜು, ಮೈಸೂರು



ಜಿ.ಎಲ್. ತ್ರಿಪುರಾಂತಕ
ಮೊಬೈಲ್ ನಂ.: 96866-77284

ಬೆರಗು

ಅನ್ನ ಹಸಿದ ಹೊಟ್ಟೆ ಸೇರಬೇಕು... ಕಸದ ತೊಟ್ಟಿಯನ್ನಲ್ಲ...!

ಮನುಷ್ಯ ಸೇವಿಸುವ ಆಹಾರ ಎಂದರೆ ವಾಹನಗಳಿಗೆ ತುಂಬಿಸುವ ಇಂಧನದಂತೆ ಅಲ್ಲ. ನಮ್ಮ ದೇಶದಲ್ಲಿ ಆಹಾರವನ್ನು 'ಅನ್ನಂ ಬ್ರಹ್ಮ' ಎನ್ನುತ್ತಾರೆ, ಅಂದರೆ ಅನ್ನವೇ ದೇವರು ಎಂದು. ಏಕೆಂದರೆ ಮನುಷ್ಯನ ಜೀವಕ್ಕೆ ನಿತ್ಯ ಚೈತನ್ಯ ನೀಡುವುದೇ ಅನ್ನ. ಇಂದು ಅನೇಕ ಬರಪೀಡಿತ ಪ್ರದೇಶಗಳಲ್ಲಿ ತುತ್ತು ಅನ್ನಕ್ಕಾಗಿ ಹಾಹಾಕಾರವಾಗುತ್ತಿದ್ದರೆ, ಬೇರೆ ಕಡೆ ಅನ್ನವನ್ನು ಹೊಟ್ಟೆಗೆ ತಿನ್ನುವುದಕ್ಕಿಂತ ಹೆಚ್ಚಾಗಿ ಕಸದ ತೊಟ್ಟಿಗೆ ಸೇರುವಂತೆ ಮಾಡುವ ಅಜ್ಞಾನಿಗಳು, ಅವಿವೇಕಿಗಳು, ಅಧಮರು, ಮೂರ್ಖರನ್ನು ಕಾಣಬಹುದು. ಜೀವಾಮೃತವಾದ ಅನ್ನವನ್ನು ವೃಥಾ ವ್ಯರ್ಥ ಮಾಡುವವರಲ್ಲಿ ಅವಿದ್ಯಾವಂತರಿಗಿಂತ ವಿದ್ಯಾವಂತರ ಸಂಖ್ಯೆಯೇ ಹೆಚ್ಚಿರುವುದು ದುರದೃಷ್ಟಕರ. ಶಿಕ್ಷಣವು ಅನ್ನದ ಮೌಲ್ಯವನ್ನು ತಿಳಿಸುವಲ್ಲಿ ವಿಫಲವಾಗುತ್ತಿದೆ ಅಂತಲೇ ಹೇಳಬಹುದು. ಶಿಕ್ಷಣವು ಕೇವಲ ಅಕ್ಷರ ಜ್ಞಾನ ನೀಡದೆ ಬದುಕಿನ ಪಾಠಗಳಲ್ಲಿ ಒಂದಾದ ತಿನ್ನುವ ಅನ್ನವನ್ನು ಗೌರವಿಸುವುದನ್ನು ಸಹ ಕಲಿಸಿಕೊಡಬೇಕಾಗಿದೆ. ತುತ್ತು ಅನ್ನಕ್ಕಾಗಿ, ಹನಿ ನೀರಿಗಾಗಿ ಹತ್ತಾರು ಕಿಲೋ ಮೀಟರ್ ಅಲೆದಾಡುವ ಹೊಟ್ಟೆ ಪಾಡಿನ ಮಂದಿ ಒಂದು ಕಡೆ ಕಂಡರೆ, ಹಸಿವಿಲ್ಲದಿದ್ದರೂ ಸಮಯವಾಗಿದೆ ಎಂದು ಅರ್ಧ ತಿಂದು, ಅರ್ಧ ಬಿಟ್ಟು ಹೊಟ್ಟೆ ಕರಗಿ ಸಲು ಹತ್ತಾರು ಕಿಲೋಮೀಟರ್ ಅಲೆಯುವ ಮಂದಿ ಮತ್ತೊಂದೆಡೆ ಇರುವುದು ವಿಡಂಬನೆಯೇ ಸರಿ.

ಊಟದ ತಟ್ಟೆ/ಎಲೆಗೆ ಬಡಿಸಿದ ಆಹಾರವನ್ನು ಏನೂ ಬಿಡದಂತೆ ತಿಂದರೆ ಅದು ಮನುಷ್ಯ ಪ್ರಿಸ್ಟೀಜ್‌ಗೆ ಧಕ್ಕೆಯಂತೆ, ಅವರನ್ನು ದರಿದ್ರರಂತೆ ಕಾಣುತ್ತಾರೆ ಎಂಬುದು ದೊಡ್ಡ ಜನರ ಅಂಬೋಣ. ಆದರೆ ತಟ್ಟೆ/ಎಲೆಯಲ್ಲಿ ಅನ್ನ ಬಿಟ್ಟವರಿಗೆ ವಿವೇಕದ ದಾರಿದ್ರ್ಯವಿದೆ. ಹಸಿವಿನ ದಾರಿದ್ರ್ಯವನ್ನು ನೀಗಿಸಬಹುದು, ಆದರೆ ವಿವೇಕದ ದಾರಿದ್ರ್ಯವನ್ನು ನೀಗಿಸುವುದು ಅಷ್ಟು ಸುಲಭದ ಮಾತಲ್ಲ. ಹಣಕೊಟ್ಟು ದಿನಸಿ ಕೊಂಡಾಕ್ಷಣ ಅದನ್ನು ವ್ಯರ್ಥ ಮಾಡುವ ಹಕ್ಕು ತಮಗಿದೆ ಎಂದು ತಿಳಿದಿರುವುದು ಅಜ್ಞಾನದ ಪರಮಾವಧಿ. ಅನೇಕ ಸಭೆ ಸಮಾರಂಭಗಳಲ್ಲಿ ವಿಶೇಷ ಭಕ್ಷ್ಯಭೋಜನದಲ್ಲಿ ಶೇ.70-80 ಬಂಧುಗಳ ಹೊಟ್ಟೆ ಸೇರಿದರೆ ಉಳಿದ ಶೇ.20-30 ಹಸಿದವರ ಹೊಟ್ಟೆಯನ್ನೂ ಸೇರದೆ ಕಸದ ತೊಟ್ಟಿ ಸೇರುತ್ತಿರುವುದು ನೋವಿನ ಸಂಗತಿ. ದೊಡ್ಡ ವಿಡಂಬನೆ ಎಂದರೆ ಹೊಟ್ಟೆ ತುಂಬಿದ ಜನ ಟೇಬಲ್‌ನಲ್ಲಿ ಅರ್ಧಂಬರ್ಧ ತಿಂದರೆ ಹಸಿದ ಜನ ಕಸದ ತೊಟ್ಟಿಯಲ್ಲಿ ಉಳಿದ ಅನ್ನತಿನ್ನಲು ಹಾತೊರೆಯುತ್ತಿರುವುದು.

ಮನುಷ್ಯನಿಗೆ ಅನೇಕ ರೀತಿಯ ಅಹಂಕಾರವಿರುತ್ತದೆ. ಆದರೆ ಅನ್ನದ ವಿಷಯದಲ್ಲೂ ಅಹಂಕಾರವಿರುವುದು ಮಾತ್ರ ಖಂಡನೀಯ. ನನ್ನ ದುಡ್ಡು, ನನ್ನ ಅನ್ನ, ನನ್ನ ಇಷ್ಟ ನಾನು ತಿಂದಾದರೂ ತಿನ್ನುತ್ತೇನೆ, ರಸ್ತೆಗೆ ಬೇಕಾದರೂ ಬಿಸಾಕುತ್ತೇನೆ ಎಂಬ ಅಹಂಕಾರ ಅನೇಕರಿಗೆ ಇರುತ್ತದೆ. 'ಆಹಾರ ನಿಮ್ಮದೇ ಇರಬಹುದು, ಆದರೆ ಸಂಪನ್ಮೂಲ ದೇಶಕ್ಕೆ ಸೇರಿದ್ದು' ಎಂಬ ಮಾತನ್ನು ಜ್ಞಾನಿಯೊಬ್ಬರು ಅರ್ಥಪೂರ್ಣವಾಗಿ ಹೇಳಿದ್ದಾರೆ. ಆಹಾರದ ಮೌಲ್ಯ ಅರಿಯಬೇಕಾದುದು ಪ್ರತಿಯೊಬ್ಬರ ಹೊಣೆಯಾಗಬೇಕು. ದವಸಧಾನ್ಯಗಳನ್ನು ಬೆಳೆಯಲು ಅನ್ನದಾತನಾದ ರೈತ ಎಷ್ಟು ಶ್ರಮ, ಸಮಯ ವ್ಯಯ ಮಾಡುತ್ತಾನೆ, ಎಷ್ಟು ಬೆವರು ಸುರಿಸಿರುತ್ತಾನೆ, ಎಷ್ಟೋ ದಿನ ನಿದ್ರೆಯಿಲ್ಲದೆ ರಾತ್ರಿ ವೇಳೆಯೂ ಬೆಳೆಗಳಿಗೆ ನೀರುಣಿಸಿರುತ್ತಾನೆ, ಪ್ರಾಣಿ ಪಕ್ಷಿಗಳಿಂದ ಬೆಳೆ ಕಾಪಾಡಿರುತ್ತಾನೆ, ಅಷ್ಟೇ ಅಲ್ಲದೆ ಕಷ್ಟಪಟ್ಟು ಮಾರುಕಟ್ಟೆ ಮುಟ್ಟಿಸುತ್ತಾನೆ. ಅದನ್ನು ಸಗಟು ವ್ಯಾಪಾರಿಗಳು ಖರೀದಿಸಿ ಚಿಲ್ಲರೆ ವ್ಯಾಪಾರಿಗಳಿಗೆ ಒದಗಿಸುತ್ತಾರೆ. ಅವರಿಂದ ಗ್ರಾಹಕರು ಖರೀದಿ ಮಾಡಿ ಮನೆಗೆ ತರುತ್ತಾರೆ. ಮನೆಗೆ ತಂದ ದಿನಸಿಯಲ್ಲಿ ಅಮೂಲ್ಯವಾದ ಆಹಾರ ತಯಾರಾಗುತ್ತದೆ. ತಯಾರು ಮಾಡುವ ಕೈಗಳಿಗೂ ಪರಿಶ್ರಮವಿರುತ್ತದೆ. ಮಕ್ಕಳಿಗೆ ಬಾಲ್ಯದಲ್ಲಿಯೇ ಅನ್ನದ ಮೌಲ್ಯವನ್ನು ತಿಳಿಸುವುದು ಅಗತ್ಯವಿದೆ. ಒಂದೊಂದು ಅಗಳಿನ ಹಿಂದಿನ ಪರಿಶ್ರಮವನ್ನು ಹೇಳಬೇಕು, ಸಾಧ್ಯವಾದರೆ ಅವರನ್ನು ಹೊಲಗದ್ದೆಗಳಿಗೆ ಕರೆದುಕೊಂಡು ಹೋಗಿ ತೋರಿಸಬೇಕು. ಆಗ ಅವರಿಗೆ ಅನ್ನದ ಮಹತ್ವ ಅರಿವಾಗುತ್ತದೆ. ಇಲ್ಲವಾದಲ್ಲಿ ಅವರಿಗೆ ಅನ್ನ ಎಂದರೆ ಮತ್ತೊಂದು ಉತ್ಪನ್ನದ ರೀತಿಯೇ ಗೋಚರಿಸುತ್ತದೆ.



> "ಮನುಷ್ಯನಿಗೆ ಅನೇಕ ರೀತಿಯ ಅಹಂಕಾರವಿರುತ್ತದೆ. ಆದರೆ ಅನ್ನದ ವಿಷಯದಲ್ಲೂ ಅಹಂಕಾರವಿರುವುದು ಮಾತ್ರ ಖಂಡನೀಯ. ನನ್ನ ದುಡ್ಡು, ನನ್ನ ಅನ್ನ, ನನ್ನ ಇಷ್ಟ ನಾನು ತಿಂದಾದರೂ ತಿನ್ನುತ್ತೇನೆ, ರಸ್ತೆಗೆ ಬೇಕಾದರೂ ಬಿಸಾಕುತ್ತೇನೆ ಎಂಬ ಅಹಂಕಾರ ಅನೇಕರಿಗೆ ಇರುತ್ತದೆ. 'ಆಹಾರ ನಿಮ್ಮದೇ ಇರಬಹುದು, ಆದರೆ ಸಂಪನ್ಮೂಲ ದೇಶಕ್ಕೆ ಸೇರಿದ್ದು' ಎಂಬ ಮಾತನ್ನು ಜ್ಞಾನಿಯೊಬ್ಬರು ಅರ್ಥಪೂರ್ಣವಾಗಿ ಹೇಳಿದ್ದಾರೆ. ಆಹಾರದ ಮೌಲ್ಯ ಅರಿಯಬೇಕಾದುದು ಪ್ರತಿಯೊಬ್ಬರ ಹೊಣೆಯಾಗಬೇಕು. ದವಸ ಧಾನ್ಯಗಳನ್ನು ಬೆಳೆಯಲು ಅನ್ನದಾತನಾದ ರೈತ ಎಷ್ಟು ಶ್ರಮ, ಸಮಯ ವ್ಯಯ ಮಾಡುತ್ತಾನೆ, ಎಷ್ಟು ಬೆವರು ಸುರಿಸಿರುತ್ತಾನೆ, ಎಷ್ಟೋ ದಿನ ನಿದ್ರೆಯಿಲ್ಲದೆ ರಾತ್ರಿ ವೇಳೆಯೂ ಬೆಳೆಗಳಿಗೆ ನೀರುಣಿಸಿರುತ್ತಾನೆ, ಪ್ರಾಣಿಪಕ್ಷಿಗಳಿಂದ ಬೆಳೆ ಕಾಪಾಡಿರುತ್ತಾನೆ, ಅಷ್ಟೇ ಅಲ್ಲದೆ ಕಷ್ಟಪಟ್ಟು ಮಾರುಕಟ್ಟೆ ಮುಟ್ಟಿಸುತ್ತಾನೆ. ಇವರ ಶ್ರಮ ಅರಿತವರು ಅನ್ನವನ್ನು ವ್ಯರ್ಥ ಮಾಡಲು ಬಿಡುವುದಿಲ್ಲ.

ಇತ್ತೀಚೆಗೆ ಮದುವೆ ಸಮಾರಂಭವೊಂದರಲ್ಲಿ ರಾತ್ರಿ ಆರತಕ್ಷತೆ ಊಟಕ್ಕೆ ಭರ್ಜರಿ ಭೋಜನ ವ್ಯವಸ್ಥೆ ಮಾಡಿದ್ದರು. ಎರಡೆರಡು ಸಿಹಿತಿಂಡಿ, ತರಹೇವಾರಿ ಪಲ್ಯಗಳು, ದೋಸೆ.... ಹೀಗೆ ಅನೇಕ ಭಕ್ಷ್ಯಗಳು ಇದ್ದವು. ಊಟಕ್ಕೆ ನಮ್ಮ ಸರದಿ ಕಾಯುವಾಗ ನೋಡಿದ ಒಂದು ದೃಶ್ಯ ನಿಜಕ್ಕೂ ಕಣ್ಣಲ್ಲಿ ನೀರು ತರಿಸಿತು. ಯುವ ದಂಪತಿಗಳಿಬ್ಬರು ತಮ್ಮ ಇಬ್ಬರು ಚಿಕ್ಕ ಮಕ್ಕಳ ಜೊತೆ ಒಂದು ಟೇಬಲ್‌ನಲ್ಲಿ ಕುಳಿತಿದ್ದು, ಹೆತ್ತವರು ಊಟದಲ್ಲಿ ಶೇ.80 ತಿಂದು ಮುಗಿಸಿದ್ದರೆ ಮಕ್ಕಳು ಎಲೆಯಲ್ಲಿ ಶೇ.10ರಷ್ಟೂ ಆಹಾರವನ್ನು ತಿಂದಿರಲಿಲ್ಲ. ಮಕ್ಕಳು ಕೊನೆಯಲ್ಲಿ ಕೊಟ್ಟ ಐಸ್‌ಕ್ರೀಂ ಬಿಟ್ಟರೆ ಬೇರೇನನ್ನೂ ತಿನ್ನಲಿಲ್ಲ. ಅವರಿಗೆ ಇಟ್ಟಿದ್ದ ಅರ್ಧ ಲೀಟರ್ ಕುಡಿಯುವ ನೀರಿನ ಬಾಟಲಿಯಲ್ಲಿ ಶೇ.10 ಕುಡಿದಿರಲಿಲ್ಲ. ಪೋಷಕರು ಮಕ್ಕಳಿಗೆ ತಿನಿಸುವ ಅಥವಾ ತಿನ್ನಿ ಎಂದು ಹೇಳುವ ವ್ಯವದಾನ ಹೊಂದಿರಲಿಲ್ಲ. ಎಲೆಯಲ್ಲಿ ಉಳಿದ ಆಹಾರ, ನೀರಿನ ಬಾಟಲಿ ಎಲ್ಲವೂ ಕಸದ ತೊಟ್ಟಿ ಸೇರಿದವು. ಒಂದು ಊಟಕ್ಕೆ ಕನಿಷ್ಠ 150 ರೂಪಾಯಿಗಳಾದರು ತಯಾರಿಕ ವೆಚ್ಚ ಆಗಿರುತ್ತದೆ. ಒಂದು ಲೀಟರ್ ಶುದ್ಧ ಕುಡಿಯುವ ನೀರನ್ನು ತಯಾರಿಸಲು ಎರಡು ಲೀಟರ್ ನೀರು ಅನುಪಯುಕ್ತವಾಗಿರುತ್ತದೆ. ಇದಾವುದರ ಅರಿವಿಲ್ಲದೆ, ಮದುವೆ ಮನೆಯವರು ಕೊಟ್ಟ ತಾಂಬೂಲ ತೆಗೆದುಕೊಂಡು, ವಧುವರರ ಅಕ್ಕಪಕ್ಕ ನಿಂತು ಹಲ್ಲು ಕಿಸಿದು ಫೋಟೋ ತೆಗೆಯಿಸಿಕೊಂಡು ಹೊರಟೇ ಬಿಟ್ಟರು ದಂಪತಿಗಳು. ಈ ದೃಶ್ಯ ಹಲವು ಚಿಂತನೆಗೆ ಒರೆ ಹಚ್ಚಿತು. ಅನ್ನ ಬೆಳೆದ ರೈತನ ಬೆವರಿಗೆ ಬೆಲೆಯಿಲ್ಲವೇ? ಕೊಂಡು ತಂದ ಮದುವೆ ಮನೆಯವರ ದುಡ್ಡಿಗೆ ಬೆಲೆಯಿಲ್ಲ, ಕಷ್ಟಪಟ್ಟು ರುಚಿಕಟ್ಟಾಗಿ ಅಡುಗೆ ಮಾಡಿದ ಬಾಣಸಿಗರ ಶ್ರಮ ಹಾಗೂ ಕಾಳಜಿಗೆ ಬೆಲೆ ಇಲ್ಲ, ಬಡಿಸಿದ ಹುಡುಗರ ಸಡಗರಕ್ಕೆ ಬೆಲೆ ಇಲ್ಲ, ಮಕ್ಕಳು ತಿನ್ನುವುದಿಲ್ಲ ಎಂದು ಗೊತ್ತಿದ್ದರೂ ಬಡಿಸುವವರೆಗೆ ಸುಮ್ಮನೆ ಕುಳಿತಿದ್ದ ಪೋಷಕರಿಗೆ ಬುದ್ಧಿ ಇಲ್ಲ ಅನಿಸಿತು, ಶಿಕ್ಷಣ ಏನನ್ನು ಕಲಿಸುತ್ತಿದೆ ಎಂಬ ದೊಡ್ಡ ಪ್ರಶ್ನೆ ಮೂಡಿತು !

ಕೆಲವರು ಸಮಾರಂಭಗಳಲ್ಲಿ ಎಲೆ ಮೇಲೆ ಬಡಿಸಿದ ಸಿಹಿತಿಂಡಿಯನ್ನು ತಿನ್ನಲಾಗದ ಪಕ್ಷದಲ್ಲಿ ಒಂದು ಕವರ್/ಬಾಕ್ಸ್‌ಗೆ ಹಾಕಿಕೊಂಡು ಮನೆಗೆ ತೆಗೆದುಕೊಂಡು ಹೋಗುವ ಅಭ್ಯಾಸ ಹೊಂದಿರುತ್ತಾರೆ. ಅವರನ್ನು ಅನೇಕರು ವಿಚಿತ್ರವಾಗಿ ನೋಡುತ್ತಾರೆ. ಅವರಿಗೆ ಮ್ಯಾನರ್ಸ್ ಇಲ್ಲ ಎಂಬುದು ಅವರ ಕಣ್ಣಿನಲ್ಲಿ ವ್ಯಕ್ತವಾಗುವ ಭಾವ. ಆ ಮಹನೀಯರು/ಮಹಿಳೆಯರು ಸಿಹಿತಿಂಡಿಯನ್ನು ತಿನ್ನದೇ ಎಲೆಯಲ್ಲಿಯೇ ಬಿಟ್ಟಿರುತ್ತಾರೆ. ಒಂದು ರುಚಿಯಾದ ದುಬಾರಿ ತಿನಿಸು ನೇರ ಕಸದ ತೊಟ್ಟಿಗೆ ಸೇರುವ ಬದಲು ಮನೆಗೆ ಸೇರಿ ಯಾರೋ ಇಷ್ಟವಾದವರ ಹೊಟ್ಟೆ ಸೇರುತ್ತದೆ ಎಂದರೆ ಅದೊಂದು ಅಭಿನಂದನಾರ್ಹ ಕಾರ್ಯ. ಸಿಹಿ ತೆಗೆದುಕೊಂಡು ಹೋಗುವವರಿಗೆ ನಾಚಿಕೆಯಾಗಬೇಕಿಲ್ಲ. ಅದನ್ನು ಎಲೆಯಲ್ಲಿಯೇ ಬಿಡುವವರಿಗೆ ನಾಚಿಕೆಯಾಗಬೇಕು? ಅವರ ವಿದ್ಯೆಗೆ ನಾಚಿಕೆಯಾಗಬೇಕು. ಎಲೆಯಲ್ಲಿ ಸ್ವೀಟ್ ಬಿಡುವುದು ಯಾವ ದೊಡ್ಡ ಮ್ಯಾನರ್ಸ್? ಭಗವಂತನೇ ಬಲ್ಲ !

ಸ್ವೀಟ್ ಆಗಲಿ ಅಥವಾ ಏನೇ ಆಹಾರವಾಗಲಿ ತಾವು ತಿನ್ನುವುದಿಲ್ಲ ಎಂದು ತಿಳಿದ ಮೇಲೆ ಅದನ್ನು ಎಲೆಗೆ ಬಡಿಸಿಕೊಳ್ಳದೇ ಹೋದ ಪಕ್ಷದಲ್ಲಿ ಅದು ಉಳಿಯುತ್ತದೆ. ಅದನ್ನು ಅನಾಥಾಶ್ರಮಕ್ಕೆ ಅಥವಾ ಬೀದಿಬದಿ ಭಿಕ್ಷುಕರಿಗೆ ತಲುಪಿಸುವ ಸತ್ಕಾರ್ಯ ಮಾಡುವ ಸೇವಾ ಮನೋಭಾವದ ಜನ ಅನೇಕರಿದ್ದಾರೆ. ಮೈಸೂರಿನಲ್ಲಿ ಶ್ರೀ ರಾಜೇಂದ್ರ ಎಂಬುವವರು ಅಕ್ಷಯ-ಆಹಾರ ಫೌಂಡೇಶನ್ ಸ್ಥಾಪಿಸಿ, ಸಮಾರಂಭಗಳಲ್ಲಿ ಉಳಿದ ಅಮೂಲ್ಯವಾದ ಆಹಾರವನ್ನು ಹಸಿದವರಿಗೆ ಸಕಾಲದಲ್ಲಿ ಮುಟ್ಟಿಸುವ ದೊಡ್ಡ ಸೇವೆಯನ್ನು ಯಾವುದೇ ಪ್ರಚಾರ ಬಯಸದೆ ಮಾಡುತ್ತಿದ್ದಾರೆ. ಅವರು ನಿಜವಾಗಿ ರೈತನ ಶ್ರಮವನ್ನು ಅರಿತು ವ್ಯರ್ಥವಾಗಲು ಬಿಡದೆ ಅಗತ್ಯವಿರುವವರಿಗೆ ಮುಟ್ಟಿಸುತ್ತಾರೆ. ಅಂಥವರ ಸಂಖ್ಯೆ ಹೆಚ್ಚಾಗಲಿ ಎಂದು ಹಾರೈಸೋಣ.

ಎಷ್ಟೋ ಜನ ಮನೆಯಲ್ಲಿ ಉಳಿದ ಆಹಾರವನ್ನು ಭಿಕ್ಷುಕರಿಗೆ ನೀಡಲು ಸಾಧ್ಯವಾಗದಿದ್ದಲ್ಲಿ ಕನಿಷ್ಠ ಪಕ್ಷ ಬೀದಿನಾಯಿಗಳಿಗಾದರೂ ಹಾಕುವ ಮನೋಭಾವ ಹೊಂದಿರುತ್ತಾರೆ. ಆದರೆ ಮತ್ತೆ ಕೆಲವರದು ವಿಶೇಷ ಬುದ್ಧಿ. ಆಹಾರ ಕೆಡುವವರೆಗೂ ಇಟ್ಟುಕೊಳ್ಳುವುದು, ತಾವು ಮತ್ತೆ ತಿನ್ನುವುದಿಲ್ಲ ಎಂದು ತಿಳಿದಿದ್ದರೂ ಇಟ್ಟುಕೊಳ್ಳುವುದು, ಅದು ಹಳಸಿದ ನಂತರ ನಾಯಿಗಳಿಗೆ ನೀಡಲು ಮುಂದಾಗುವುದು. ಇವರು ಇಡುವ ಆಹಾರವನ್ನು ನಾಯಿಗಳು ಮೂಸಿ ನೋಡುವುದೂ ಇಲ್ಲ. ನಾಯಿಗೆ ಅನ್ನ ಹಾಕುವುದಾದರೆ ನಮಗೆ ತಿನ್ನಲು ಯೋಗ್ಯವಾಗಿದ್ದರೆ ಮಾತ್ರ ಹಾಕಬೇಕು. ಹಸಿದ ನಾಯಿಗೆ ಹಳಸಿದ ಅನ್ನ ಹಾಕುವುದಕ್ಕಿಂತ ಪಾಪದ ಕಾರ್ಯ ಮತ್ತೊಂದಿಲ್ಲ. ಇನ್ನೂ ವಿಭಿನ್ನ ವ್ಯಕ್ತಿತ್ವದ ಜನ ಇರುತ್ತಾರೆ. ಅವರಿಗೆ ನಾಯಿಗೆ ಹಾಕುವಷ್ಟು ದೊಡ್ಡ ಮನಸ್ಸು ಇರದು. ನೇರ ಕಸದ ತೊಟ್ಟಿಗೆ ಹಾಕಿಬಿಡುವ ದುರ್ಬುದ್ಧಿ ಹೊಂದಿರುತ್ತಾರೆ. ಇವರನ್ನು ಯಾವ ದೃಷ್ಟಿಯಲ್ಲಿ ವಿದ್ಯಾವಂತರು ಎಂದು ಕರೆಯಬೇಕೋ ತಿಳಿಯದು !

ಮನೆ, ಹೋಟೆಲ್, ಸಮಾರಂಭ ಎಲ್ಲಿಯೇ ಆಗಿರಲಿ ತಿನ್ನುವ ಅನ್ನವನ್ನು ಗೌರವಿಸಬೇಕು. ಬೇಕಾದಷ್ಟು ಬಡಿಸಿಕೊಳ್ಳುವುದು ಧರ್ಮ, ಬಿಸಾಕುವುದು ಅಧರ್ಮ. ಕೆಲವು ದೇಶಗಳ ರೆಸ್ಟೊರೆಂಟ್‌ಗಳಲ್ಲಿ ತಟ್ಟೆಯಲ್ಲಿ ಆಹಾರ ಬಿಟ್ಟು ವ್ಯರ್ಥವಾಗುವಂತೆ ಮಾಡಿದರೆ ದಂಡ ಹಾಕುವ ಕಠಿಣ ಕಾನೂನು ಇದೆ. ನಮ್ಮ ದೇಶದಲ್ಲಿ ಇದು ಜಾರಿಯಾದರೆ ಸರ್ಕಾರಕ್ಕೆ ಅದರಿಂದಲೇ ಕೋಟ್ಯಾಂತರ ಆದಾಯ ಬರಬಹುದೇನೋ? ಅನ್ನ ಎಂದರೆ ಎಲ್ಲರಿಗೂ ಒಂದೇ ಅರ್ಥವಿಲ್ಲ, ಒಂದೇ ಬೆಲೆಯಿಲ್ಲ, ಪ್ರತಿಯೊಬ್ಬರಿಗೂ ಅನ್ನ ಬೇರೆ ಬೇರೆಯಾಗಿ ಕಾಣುತ್ತದೆ. ಬಡವನ ಅನ್ನಕ್ಕೂ ಸಿರಿವಂತನ ಅನ್ನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ದವಸಧಾನ್ಯ ಬೆಳೆವ ರೈತ ಅನ್ನ ವ್ಯರ್ಥ ಮಾಡಲು ಬಯಸುವುದಿಲ್ಲ, ಅವನಿಗೆ ಅದರ ಹಿಂದಿನ ಪರಿಶ್ರಮದ ಅರಿವಿರುತ್ತದೆ. ಇಂದು ಅಕ್ಕಿಯಿಂದ ಹಿಡಿದು ಬೇಳೆಕಾಳುಗಳ ಬೆಲೆ ಗಗನಮುಖಿಯಾಗಿದೆ. ವ್ಯರ್ಥ ಮಾಡುವ ಮುನ್ನ ಹಲವು ಬಾರಿ ಯೋಚಿಸಿ, ಮಕ್ಕಳಿಗೆ ಈ ಕುರಿತು ಅರಿವು ಹಾಗೂ ಹೆಚ್ಚು ಜಾಗೃತಿ ಮೂಡಿಸಬೇಕಾದ ಅನಿವಾರ್ಯತೆ ಇದೆ. ಎಚ್ಚರಿಕೆ, ಮುಂದೆ 'ಹಣ ನೀಡಿದರೆ ಬಂದೂಕುಗಳು ಸಿಗುತ್ತವೆ, ದವಸ ಧಾನ್ಯಗಳು ಸಿಗುವುದಿಲ್ಲ' ಎಂದು ಕೃಷಿ ತಜ್ಞ ಡಾ.ಸ್ವಾಮಿನಾಥನ್ ಅವರು ಎಂದೋ ಹೇಳಿದ ಮಾತು ಸತ್ಯವಾಗುವ ಕಾಲ ಸನ್ನಿಹಿತವಾಗಿದೆ. ಏನಂತೀರಿ?

ಪದ ತಾಂಬೂಲ :

ಚಿನ್ನಕ್ಕಿಂತ ಅನ್ನಕ್ಕೆ ಬೆಲೆ ಕೊಡಬೇಕು,
ಚಿನ್ನವಿಲ್ಲದೆ ಬದುಕಬಹುದು,
ಅನ್ನವಿಲ್ಲದೆ ಬದುಕಲಾಗದು

ಮೈಸೂರು ವಿವಿ ಕುಲಪತಿ, ಕುಲಸಚಿವರು ಡಾ.ಎಂ.ಮೀರಾ ಬೆಂಬಲಕ್ಕೆ ನಿಲ್ಲಬೇಕು

ಮೈಸೂರು ಸಿಟಿ ಪೆನ್ಷನರ್ಸ್ ಅಸೋಸಿಯೇಷನ್ ಅಧ್ಯಕ್ಷ ಕೆ.ಸಿ.ಬಿದ್ದಪ್ಪ

ಮೈಸೂರು,ಡಿ.17(ಪಿಎಂ)– ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿವಿ ಅಭಿವೃದ್ಧಿ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ.ಎಂ.ಮೀರಾರವರ ವಿರುದ್ಧ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ ಘಟನೆ ನಿಜಕ್ಕೂ ಆಘಾತಕಾರಿ. ಡಾ.ಎಂ.ಮೀರಾ ಅವರು ಪ್ರಾಮಾಣಿಕರಾಗಿದ್ದು, ಅವರ ಬೆಂಬಲಕ್ಕೆ ವಿವಿಯ ಕುಲಪತಿಗಳು, ಕುಲಸಚಿವರು ನಿಲ್ಲಬೇಕೆಂದು ಮೈಸೂರು ಸಿಟಿ ಪೆನ್ಷನರ್ಸ್ ಅಸೋಸಿಯೇಷನ್ ಅಧ್ಯಕ್ಷರೂ ಆದ ಐಟಿಸಿ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ (ನಿವೃತ್ತ) ಕೆ.ಸಿ.ಬಿದ್ದಪ್ಪ ಮನವಿ ಮಾಡಿದ್ದಾರೆ.

ಈ ಸಂಬಂಧ ಪ್ರಕಟಣೆ ನೀಡಿರುವ ಅವರು, ಡಾ. ಮೀರಾ ಅವರು ಸಮರ್ಥ ಮತ್ತು ಸಹಾನುಭೂತಿಯುಳ್ಳ ಪ್ರಾಧ್ಯಾಪಕರು. ಉನ್ನತ ಮಟ್ಟದ ಶೈಕ್ಷಣಿಕ ಸಮಗ್ರತೆ ಹೊಂದಿರುವ ಅವರು ವಿದ್ಯಾರ್ಥಿಗಳೊಂದಿಗೆ ಅಸಭ್ಯವಾಗಿ ವರ್ತಿಸುವ ವ್ಯಕ್ತಿತ್ವದವರಲ್ಲ ಎಂದಿದ್ದಾರೆ.

ವೇಳಾಪಟ್ಟಿಯ ಸಿದ್ಧಪಡಿಸಿಲ್ಲ, ವಿಭಾಗದಲ್ಲಿ ಶೌಚಾಲಯಗಳ ಕೊರತೆ, ಒಂದು ನಿರ್ದಿಷ್ಟ ಸಮುದಾಯದ ವಿದ್ಯಾರ್ಥಿಗಳನ್ನು ನಿಂದಿಸಿದ್ದಾರೆಂದು ಆರೋಪಿಸಿ ವಿಭಾಗದ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ಡಾ. ಮೀರಾ ಅವರ ವಿರುದ್ಧ ಪ್ರತಿಭಟನೆ ನಡೆಸಿರುವ ಬಗ್ಗೆ 'ಮೈಸೂರು ಮಿತ್ರ'ನ ಡಿ.12ರ ಸಂಚಿಕೆಯಲ್ಲಿ ಪ್ರಕಟವಾದ ಸುದ್ದಿ ಓದಿ ಗಾಬರಿ ಉಂಟಾಯಿತು.

ಡಾ.ಮೀರಾ ಅವರು ವಿದ್ಯಾರ್ಥಿಗಳ ಸಮೂಹ ಮತ್ತು ಸಂಶೋಧನಾ ವಿದ್ಯಾರ್ಥಿಗಳೊಂದಿಗೆ ಇದ್ದು ಅವರ ಶೈಕ್ಷಣಿಕ ವಿಚಾರದಲ್ಲಿನ ಅನುಮಾನಗಳನ್ನು ಬಗೆಹರಿಸುವುದನ್ನು ನಾನು ಕಂಡಿದ್ದೇನೆ. ಅವರ ಮಾರ್ಗದರ್ಶನದಲ್ಲಿ ಈಗಾಗಲೇ ಇಬ್ಬರು ಪಿಹೆಚ್‌ಡಿ ಪದವಿ ಪಡೆದಿದ್ದಾರೆ. ಪ್ರಸ್ತುತ ನಾಲ್ವರು ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಇವರಲ್ಲಿ ಇಬ್ಬರು ಎಸ್‌ಸಿ-ಎಸ್‌ಟಿ ಸಮುದಾಯದವರು (ಒಬ್ಬ ಸಂಶೋಧನಾ ವಿದ್ಯಾರ್ಥಿ ಬೆಟ್ಟ ಕುರುಬ ಸಮುದಾಯದವರು). ಈ ಎಲ್ಲಾ ಸಂಶೋಧನಾ ವಿದ್ಯಾರ್ಥಿಗಳು ಡಾ.ಎಂ.ಮೀರಾ ಅವರು ಪ್ರೋತ್ಸಾಹ ನೀಡುತ್ತಿರುವುದಾಗಿ ಅವರನ್ನು ಶ್ಲಾಘಿಸಿದ್ದಾರೆ.

ನನ್ನ ಮಗಳು ತನ್ನ ಪಿಹೆಚ್‌ಡಿ ಮಹಾಪ್ರಬಂಧ ಅಂತಿಮಗೊಳಿಸುವ ಸಂದರ್ಭದಲ್ಲಿ ಡಾ.ಮೀರಾ ಅವರು ರಾತ್ರಿ 10ರಿಂದ ಬೆಳಗಿನ ಜಾವದವರೆಗೆ ಕಾನ್‌ಕಾಲ್ ಮೂಲಕ ಮಾರ್ಗದರ್ಶನ ನೀಡುತ್ತಿದ್ದರು. ಒಬ್ಬ ಮಾರ್ಗದರ್ಶಕರು ತಮ್ಮ ಮನೆ ಕೆಲಸಗಳನ್ನು ಪೂರ್ಣಗೊಳಿಸಿದ ನಂತರದಲ್ಲಿ ತನ್ನ ಪಿಹೆಚ್‌ಡಿ ವಿದ್ಯಾರ್ಥಿಯೊಂದಿಗೆ ಗಂಟೆಗಳ ಕಾಲ ಹೇಗೆ ಮಾರ್ಗದರ್ಶನ ಮಾಡುತ್ತಾರೆಂದರೆ ನಿಜಕ್ಕೂ ಅಚ್ಚರಿ ಎಂದು ಬಿದ್ದಪ್ಪ ಹೇಳಿದ್ದಾರೆ.

ನಾನು ಸುಮಾರು 50 ವರ್ಷಗಳ ಹಿಂದೆ ಮೈಸೂರು ವಿವಿಯಲ್ಲಿ ಅಧ್ಯಯನ ಮಾಡಿದ್ದೇನೆ. ವಿವಿಯನ್ನು ದೇಶದ ಉನ್ನತ ವಿವಿಗಳಲ್ಲಿ ಒಂದೆಂದು ಪರಿಗಣಿಸಿದ್ದ ಸಂದರ್ಭವದು. ಅಂದು ವಿವಿಯ ಕುಲಪತಿಗಳಿಂದ ಹಿಡಿದು ಉಪನ್ಯಾಸಕರವರೆಗೆ ವಿವಿಯ ಶೈಕ್ಷಣಿಕ ಉತ್ಕೃಷ್ಟತೆಗೆ ಉಳಿಸಲು ಶ್ರಮಿಸುವುದು ಅವರ ಏಕೈಕ ಉದ್ದೇಶವಾಗಿತ್ತು. ಅಲ್ಲದೆ, ಅಂದಿನ ವಿದ್ಯಾರ್ಥಿ ಸಮುದಾಯವೂ ಇದಕ್ಕೆ ಪೂರಕವಾಗಿತ್ತು. ಡಾ.ಮೀರಾ ಅವರು ಈ ಪರಂಪರೆಗೆ ಸೇರಿದವರು ಎಂದು ಅವರು ತಿಳಿಸಿದ್ದಾರೆ.

ಪ್ರತಾಪ್ ಸಿಂಹರನ್ನು ಯಾಕೆ ವಿಚಾರಣೆ ಮಾಡಬೇಕು

ಸಂಸದ ಉಮೇಶ್ ಜಾದವ್

ಕಲಬುರುಗಿ, ಡಿ.17– ಮೈಸೂರು-ಕೊಡಗು ಸಂಸದ ಪ್ರತಾಪ್ ಸಿಂಹ ಅವರನ್ನು ಏಕೆ ವಿಚಾರಣೆ ನಡೆಸಬೇಕು ಎಂದು ಸಂಸದ ಉಮೇಶ್ ಜಾದವ್ ಪ್ರಶ್ನಿಸಿದ್ದಾರೆ.

ಸಂಸತ್ ಕಲಾಪದ ವೇಳೆ ಯುವಕರಿಬ್ಬರು ಆತಂಕ ಸೃಷ್ಟಿಸಿದ ಘಟನೆ ಸಂಬಂಧ ಪ್ರತಿಕ್ರಿಯಿಸಿದ ಅವರು, ಇಂತಹ ಘಟನೆಗಳು ಹಿಂದೆಯೂ ಸಾಕಷ್ಟು ನಡೆದಿವೆ. ಭದ್ರತಾ ವೈಫಲ್ಯದಿಂದ ಈ ಘಟನೆ ನಡೆದಿರುವುದು ವಿಷಾಧನೀಯ. ಆದರೆ ಇದನ್ನು ರಾಜಕೀಯವಾಗಿ ಯಾರೂ ಬಳಸಿಕೊಳ್ಳಬಾರದು ಎಂದು ವಿನಂತಿ ಮಾಡುತ್ತೇನೆ ಎಂದರು.

ಈ ಘಟನೆ ಸಂಬಂಧ ಪ್ರತಾಪ್ ಸಿಂಹ ಅವರನ್ನು ಏಕೆ ವಿಚಾರಣೆ ಮಾಡಬೇಕು. ಕ್ಷೇತ್ರದಿಂದ ಒಬ್ಬ ಹುಡುಗ ಆತನ ತಂದೆ ಪರಿಚಯ ಹೇಳಿ ಪಾಸ್ ಕೇಳಿದ್ದಕ್ಕೆ ಅವರು ಕೊಟ್ಟಿದ್ದಾರೆ. ಭದ್ರತಾ ಸಿಬ್ಬಂದಿ ಸೆಕ್ಯೂರಿಟಿ ಚೆಕ್ ಮಾಡಬೇಕಿತ್ತು ಎಂದಿರುವ ಅವರು, ಯಾವುದೋ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಕಾರಣದಿಂದ ಪ್ರತಾಪ್‌ಸಿಂಹ ಮೇಲೆ ದಾಳಿ ಮಾಡುವುದು ಸರಿಯಲ್ಲ ಎಂದಿದ್ದಾರೆ.

ಪ್ರತಾಪ್ ಸಿಂಹ ಒಬ್ಬ ಯಂಗ್, ಡೈನಾಮಿಕ್, ಹಾನೆಸ್ಟ್ ಎಂಪಿ. ಅವರು ಕ್ಷೇತ್ರದ ಯುವಕನಿಗೆ ಪಾಸ್ ಕೊಟ್ಟಿದ್ದರಲ್ಲಿ ತಪ್ಪಿಲ್ಲ. ಭದ್ರತಾ ವೈಫಲ್ಯದಿಂದ ಈ ಘಟನೆ ನಡೆದಿದ್ದು, ತಪ್ಪಿತಸ್ಥರನ್ನು ಅವಮಾನತು ಮಾಡಲಾಗಿದೆ. ಇದನ್ನು ರಾಜಕೀಯಗೊಳಿಸಬಾರದು ಎಂದರು.



ಪ್ರತಾಪ್ ಸಿಂಹ



ಉಮೇಶ್ ಜಾದವ್

ಘಟನೆ ನಡೆದಾಗ ಎಂಪಿಗಳು ಇಲಿಗಳಂತೆ ಓಡಾಡಿದರು ಎಂದು ಕೆಲವರು ಕರ್ನಾಟಕ ಅಸೆಂಬ್ಲಿಯಲ್ಲಿ ಮಾತನಾಡಿದ್ದಾರೆ. ನಾವು ರಾಜಕೀಯಕ್ಕೆ ಬರುವಾಗ ಎಲ್ಲದಕ್ಕೂ ಸಿದ್ಧರಾಗಿ ಬಂದಿರುತ್ತೇವೆ. ಇದು ಹೂವಿನ ಹಾಸಿಗೆಯಲ್ಲ ಮುಳ್ಳಿನ ಹಾಸಿಗೆ. ಬಿಜೆಪಿ ಆಡಳಿತದ ಒಂಬತ್ತೂವರೆ ವರ್ಷದಲ್ಲಿ ಯಾವುದೇ ಘಟನೆ ನಡೆದಿರಲಿಲ್ಲ. 3 ರಾಜ್ಯದಲ್ಲಿ ಸೋತಿರುವ ಪ್ರತಿಪಕ್ಷದವರಿಗೆ ಮುಂದೆಯೂ ಸೋಲುವ ಲಕ್ಷಣ ತಿಳಿದಿದೆ. ಅದಕ್ಕಾಗಿ ಹತಾಶರಾಗಿ ಹೀಗೆ ಮಾತನಾಡುತ್ತಿದ್ದಾರೆ ಎಂದು ಹೇಳಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶೀಘ್ರದಲ್ಲೇ ಪತ್ರಿಕಾ ವಿತರಕರಿಗೆ ಜಾಗ

ಶಾಸಕ ಕೆ.ಹರೀಶ್ ಗೌಡ ಭರವಸೆ



ಮೈಸೂರು, ಡಿ.17(ಎಸ್‌ಬಿಡಿ)- ಪತ್ರಿಕಾ ವಿತರಕರ ಕಾರ್ಯ ನಿರ್ವಹಣೆಗೆ ಸೂಕ್ತ ಜಾಗ ಕಲ್ಪಿಸಬೇಕೆಂಬ ಬಹುವರ್ಷಗಳ ಬೇಡಿಕೆಯನ್ನು ಶೀಘ್ರದಲ್ಲೇ ಈಡೇರಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಚಾಮರಾಜ ಕ್ಷೇತ್ರದ ಶಾಸಕ ಕೆಹರೀಶ್ ಗೌಡ ಭರವಸೆ ನೀಡಿದರು.

ಮೈಸೂರು ಜಿಲ್ಲಾ ಅಧಿಕೃತ ಪತ್ರಿಕಾ ಪ್ರತಿನಿಧಿಗಳ ಸಂಘದ ವತಿಯಿಂದ ನಗರದ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು.

ನಗರದಲ್ಲಿ ಪತ್ರಿಕಾ ವಿತರಕರ ಕಾರ್ಯ ನಿರ್ವಹಣೆಗೆ ಸೂಕ್ತ ಜಾಗ ಬೇಕೆಂಬ ಬೇಡಿಕೆಯಿದೆ. ಸೂಕ್ತ ಜಾಗ ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ನಾವೂ ಪ್ರಯತ್ನಿಸುತ್ತಿದ್ದು, ಶೀರ್ಘದಲ್ಲಿಯೇ ಕಾರ್ಯಗತವಾಗಲಿದೆ. ನಗರದಲ್ಲಿ ಸಾವಿರಕ್ಕಿಂತ ಹೆಚ್ಚು ಪತ್ರಿಕಾ ವಿತರಕರಿದ್ದು, ಎಲ್ಲರ ಅಭ್ಯುದಯಕ್ಕಾಗಿ ಸಹಕಾರ ಸಂಘ ಸ್ಥಾಪನೆಗೆ ಮುಂದಾಗಬೇಕು. ಜೊತೆಗೆ ಸರ್ಕಾರದ ಸೌಲಭ್ಯಗಳನ್ನೂ ದೊರಕಿಸಿಕೊಡಬೇಕು. ಈ ನಿಟ್ಟಿನಲ್ಲಿ ಪತ್ರಕರ್ತರ ಸಂಘ ಸಹಕರಿಸಬೇಕು ಎಂದರು.


ಬಳಿಕ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಮಾತನಾಡಿ, ನಮ್ಮ ಬದುಕಿಗೂ ಪತ್ರಿಕೆಗೂ ಅವಿನಾಭಾವ ಸಂಬಂಧವಿದೆ. ಮನುಷ್ಯರ ಜೀವನದ ದಿನನಿತ್ಯ ದಾಖಲೆಗಳನ್ನು ಎಲ್ಲೆಡೆ ತಲುಪಿಸುವ ಮಹತ್ವದ ಕೆಲಸವನ್ನು ಪತ್ರಿಕಾ ವಿತರಕರು ಮಾಡುತ್ತಿದ್ದಾರೆ. ಅವರ ಶ್ರಮ ಹಾಗೂ ಸಮಯ ಪಾಲನೆ ಪ್ರಶಂಶನೀಯ ಎಂದು ಹೇಳಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮಾತನಾಡಿ, ತಮ್ಮ ಸಂಘ ಹಮ್ಮಿಕೊಳ್ಳಲಿರುವ ನೂತನ ಪತ್ರಿಕಾ ಭವನ ಹಾಗೂ ತರಬೇತಿ ಕೇಂದ್ರದ ಶಂಕುಸ್ಥಾಪನೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪಾಲ್ಗೊಳ್ಳುತ್ತಿದ್ದು, ಈ ವೇಳೆ ಪತ್ರಿಕಾ ವಿತರಕರ ಸಂಘದ ಪ್ರತಿನಿಧಿಗಳು ಪಾಲ್ಗೊಂಡು ತಮ್ಮ ಸಮಸ್ಯೆಯನ್ನು ಅವರ ಗಮನಕ್ಕೆ ತರಬೇಕೆಂದು ಸಲಹೆ ನೀಡಿದರು.

ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಕೆ.ಶಂಭುಲಿಂಗ ಮಾತನಾಡಿ, ಪತ್ರಿಕಾ ವಿತರಕರನ್ನು ಮುನ್ನೆಲೆಗೆ ತರುವ ನಿಟ್ಟಿನಲ್ಲಿ ತಮ್ಮ ಒಕ್ಕೂಟ ಅವಿರತವಾಗಿ ಪ್ರಯತ್ನಿಸುತ್ತಿದೆ. ರಾಜ್ಯ ಸರ್ಕಾರ ಪತ್ರಿಕಾ ವಿತರಕರಿಗೆ ವಿಮಾ ಸೌಲಭ್ಯಕ್ಕೆ ಅಧಿಕೃತವಾಗಿ ಚಾಲನೆ ನೀಡಿದೆ. ಇದಲ್ಲದೆ ಮುಂದಿನ ಬಜೆಟ್‌ನಲ್ಲಿ ಪತ್ರಿಕಾ ವಿತರಕರ ಸೌಲಭ್ಯಕ್ಕಾಗಿ ಕ್ಷೇಮ ನಿಧಿ ಆರಂಭಿಸುವುದಾಗಿ ಸಿಎಂ ಸಿದ್ದರಾಮಯ್ಯನವರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದ ಪತ್ರಿಕಾ ವಿತರಕರ ಮಕ್ಕಳನ್ನು ಅಭಿನಂದಿಸಲಾಯಿತು. ಅಲ್ಲದೆ ಅನಾರೋಗ್ಯದಿಂದ ಬಳಲುತ್ತಿರುವ ಪತ್ರಿಕಾ ವಿತರಕರೊಬ್ಬರಿಗೆ ಆರ್ಥಿಕ ನೆರವು ನೀಡಲಾಯಿತು. ಜಿಲ್ಲಾ ಅಧಿಕೃತ ಪತ್ರಿಕಾ ಪ್ರತಿನಿಧಿಗಳ ಸಂಘದ ಅಧ್ಯಕ್ಷ ಪಿ.ಸುರೇಶ್, ಉಪಾಧ್ಯಕ್ಷ ಕೆಎನ್.ವೆಂಕಟೇಶ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

ಲೇಖಕ ಕೆ. ರಘುಶೆಟ್ಟಿ ಅವರ 'ಪ್ರಾಚ್ಯ-ಪ್ರಚಲಿತ' ಕೃತಿ ಬಿಡುಗಡೆ



ಮೈಸೂರು,ಡಿ.17(ಎಸ್‌ಪಿಎನ್)-ನಗರದ ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನ ಕನ್ನಡ ಸಂಘದ ವಾರ್ಷಿಕೋತ್ಸವದಲ್ಲಿ ಲೇಖಕ ಕೆ.ರಘುಶೆಟ್ಟಿ ರಚಿತ ಸಣ್ಣ ಕಥೆಗಳು ಮತ್ತು ಲೇಖನ ಸಂಗ್ರಹದ 'ಪ್ರಾಚ್ಯ-ಪ್ರಚಲಿತ' ಪುಸ್ತಕವನ್ನು ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್ ಭಾನುವಾರ ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿದ ಅವರು, ಕೆ.ರಘುಶೆಟ್ಟಿ ಅವರು ಗುಜರಾತಿನ ಏಕತಾ ಪ್ರತಿಮೆ ಕುರಿತು, ಮಾಜಿ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್.ಶೇಷನ್ ಅವರೊಂದಿಗೆ ಹುಡುಗನೊಂದಿಗೆ ನಡೆಸಿದ ಸಂಭಾಷಣೆ ಮತ್ತು ಪ್ರವಾಸ ಕಥನ ಬರೆದು ಗಮನ ಸೆಳೆದಿದ್ದಾರೆ. ಅಲ್ಲದೆ, ಸಾಮಾಜಿಕ ಕಳಕಳಿ ಇರುವ ಲೇಖನಗಳು ಓದುಗರನ್ನು ಸೆಳೆಯುತ್ತವೆ ಎಂದು ತಿಳಿಸಿದರು.

ಜಂಬದ ಪಕ್ಷಿ, ಕೋಣಾರ್ಕ್ ದೇವಾಲಯ, ರಾಮಪ್ಯಾರಿ ಗುರ್ಜರ್, ಗೋವಳನ ಪ್ರಾಣಿದಯೆ, ಆಸ್ತಿಯ ಹಿಂದೆ ಹೋಗಬೇಡಿ, ಇಬ್ಬರ ಜಗಳ ಮೂರನೇಯವನಿಗೆ ಆದಾಯ!, ಮಿತ್ರರನ್ನು ಅತಿಯಾಗಿ ಅವಲಂಬಿಸಬೇಡಿ, ವೈರಿಗಳನ್ನು ಹೇಗೆ ಸ್ನೇಹಿತರಾಗಿಸಿಕೊಳ್ಳುವುದು?, ಅಸಾಮಾನ್ಯ ಮಹಿಳೆ-ಶರ್ಮಿಷ್ಠೆ ಮಹಾಭಾರತ ಪಾತ್ರಗಳು ಮತ್ತು ಸಂದೇಶ, ಆಚಾರ್ಯ ಭೀಷ್ಮರ ಜೀವನದ ಕೊನೆಯ ಕ್ಷಣಗಳು, ಸುಮ್ಮನೆ ಏಕೆ ಚಿಂತೆ ಮಾಡುವಿರಿ?, ಸಂತೋಷ ಎಲ್ಲಿದೆ?, ಶಿವಾಜಿ ಮಹಾರಾಜರ ಯುದ್ಧತಂತ್ರ ಮತ್ತು ಆರ್ಟ್ ಆಫ್ ವಾರ್, ಕರ್ಣ ಸೇರಿದಂತೆ ಇತರೆ ಲೇಖನಗಳು ಸೊಗಸಾಗಿ ಮೂಡಿಬಂದಿದ್ದು, ಈ ಪುಸ್ತಕ ಎಲ್ಲಾ ವಯಸ್ಸಿನವರು ಓದುವಂತಹದ್ದು ಎಂದು ತಿಳಿಸಿದರು. ಈ ವೇಳೆ ಲೇಖಕ ಕೆ.ರಘುಶೆಟ್ಟಿ, ನಿವೃತ್ತ ತಹಸೀಲ್ದಾರ್ ಡಾ.ವಿ.ರಂಗನಾಥ್ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ರೋಟರಿ (ಪಶ್ಚಿಮ) ಮೈಸೂರು ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಇತರೆ ಸದಸ್ಯರಿದ್ದರು.

ಲೋಕಸಭೆ ಟಿಕೆಟ್ ಆಕಾಂಕ್ಷಿ ನಾನಲ್ಲ, ಹೈಕಮಾಂಡ್ ಸೂಚಿಸಿದರೆ ಸ್ಪರ್ಧೆ ಮಾಡುವೆ

ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್



ಹುಬ್ಬಳ್ಳಿ, ಡಿ.17- ಮುಂಬರುವ ಲೋಕಸಭಾ ಚುನಾವಣೆಗೆ ಧಾರವಾಡ ಕ್ಷೇತ್ರದಿಂದ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಸ್ಪರ್ಧೆ ಮಾಡಲಿದ್ದಾರೆಯೇ ಎಂಬ ವದಂತಿ ಇತ್ತೀಚೆಗೆ ಸದ್ದು ಮಾಡಿತ್ತು. ಮಾಜಿ ಸಿಎಂ ಜಗದೀಶ್ ಶೆಟ್ಟರ್ ಅವರ 68ನೇ ಜನ್ಮದಿನ ಹಿನ್ನೆಲೆಯಲ್ಲಿ ಹುಬ್ಬಳ್ಳಿಯಲ್ಲಿರುವ ಅವರ ನಿವಾಸಕ್ಕೆ ಆಗಮಿಸಿದ ಸಿಎಂ ಸಿದ್ದರಾಮಯ್ಯ ಅವರು ಶೆಟ್ಟರ್ ಮತ್ತು ಅವರ ಕುಟುಂಬಸ್ಥರ ಜೊತೆ ಕೆಲಕಾಲ ಮಾತನಾಡಿದರು. ಬಳಿಕ ಮಾಧ್ಯಮದವರೊಂದಿಗೆ ಮಾತನಾಡುವ ವೇಳೆ ಸಿಎಂ ಸಿದ್ದರಾಮಯ್ಯ ಜಗದೀಶ್ ಶೆಟ್ಟರ್ ಟಿಕೆಟ್ ಆಕಾಂಕ್ಷಿಯಾಗಿದ್ದಾರೆ ಎಂದರು. ಕೂಡಲೇ ಅದಕ್ಕೆ ಪ್ರತಿಕ್ರಿಯಿಸಿದ ಜಗದೀಶ್ ಶೆಟ್ಟರ್, ನಾನು ಲೋಕಸಭೆ ಟಿಕೆಟ್ ಆಕಾಂಕ್ಷಿ ಯಲ್ಲ. ಪಕ್ಷವೂ ನನ್ನನ್ನು ಸ್ಪರ್ಧಿಸುವಂತೆ ಹೇಳಿಲ್ಲ. ಮುಂದೆ ಹೇಳಿದರೆ ನೋಡೋಣ. ಲೋಕಸಭಾ ಚುನಾವಣೆಗೆ ಟಿಕೆಟ್ ಆಕಾಂಕ್ಷಿಗಳ ಬಗ್ಗೆ ಚರ್ಚೆಯು ಜನವರಿ ನಂತರ ಶುರುವಾಗುತ್ತದೆ. ಪಕ್ಷ ಬಯಸಿದರೆ ಸ್ಪರ್ಧಿಸಲು ಸಿದ್ಧ ಎಂದು ಹೇಳಿದರು. ಸಿಎಂ ಸಿದ್ದರಾಮಯ್ಯ ಅವರು ಹುಟ್ಟುಹಬ್ಬದ ಶುಭ ಕೋರಿದ್ದಾರೆ. ರಾಜಕೀಯ ಚರ್ಚೆ ಏನು ಆಗಿಲ್ಲ. ಸಹಜವಾಗಿಯೇ ಪ್ರದೀಪ್ ಶೆಟ್ಟರ್ ಕೂಡ ಮನೆಗೆ ಬಂದಿದ್ದು ಸಿದ್ದರಾಮಯ್ಯ ನವರು ನಮ್ಮ ರಾಜಕೀಯ ಜೀವನದ ಒಡನಾಟವನ್ನು ಈ ವೇಳೆ ನೆನಪಿಸಿಕೊಂಡರು ಎಂದು ಶೆಟ್ಟರ್ ಹೇಳಿದರು. ಹುಬ್ಬಳ್ಳಿಗೆ ಕಾರ್ಯಕ್ರಮ ನಿಮಿತ್ತ ಬಂದಿರುವಾಗ ಜಗದೀಶ್ ಶೆಟ್ಟರ್ ಬೆಳಗಿನ ಉಪಹಾರಕ್ಕೆ ನಮ್ಮ ಮನೆಗೆ ಬನ್ನಿ ಎಂದು ಕರೆದರು. ಇಲ್ಲಿಗೆ ಬಂದ ಮೇಲೆ ಅವರ ಹುಟ್ಟುಹಬ್ಬ ಎಂದು ಗೊತ್ತಾಯಿತು. ಹಿಂದೆ ಅವರು ಬಿಜೆಪಿಯಲ್ಲಿದ್ದಾಗಲೂ ಬಂದಿದ್ದೆ. ಎಲ್ಲಾದರೂ ತಿಂಡಿ ತಿನ್ನಬೇಕಲ್ಲ, ಅದಕ್ಕೆ ಶೆಟ್ಟರ್ ಮನೆಗೆ ಬಂದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ನಾಳೆ ಆಶಾ ಕಾರ್ಯಕರ್ತೆಯರ ಸಮಾವೇಶ, ತರಬೇತಿ

ಮೈಸೂರು, ಡಿ.17- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಮತ್ತು ವೃದ್ಧಾರೋಗ್ಯ ವಿಭಾಗ, ಜೆ.ಎಸ್.ಎಸ್. ಆಸ್ಪತ್ರೆ, ಮೈಸೂರು ಇವರ ಸಂಯುಕ್ತಾಶ್ರ ಯದಲ್ಲಿ ಮೈಸೂರು ಜಿಲ್ಲೆಯ ಆಶಾ ಕಾರ್ಯಕರ್ತೆಯರ ಸಮಾವೇಶ ಮತ್ತು ತರಬೇತಿಯನ್ನು ಡಿ.19ರಂದು ಮಂಗಳವಾರ ಬೆಳಿಗ್ಗೆ 10.30ಕ್ಕೆ ನಗರದ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿಯವರು ನೆರವೇರಿಸಲಿದ್ದು, ಮುಖ್ಯ ಅತಿಥಿಯಾಗಿ ಮೈಸೂರು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿಯವರು ಆಗಮಿಸಲಿದ್ದಾರೆ. ಎಂದು ಸಮರ್ಪಿತ ಸಹೋದರ ಬಿಕೆ ರಾಮಚಂದ್ರರಾವ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಗ್ಪುರದ ಸ್ಫೋಟಕ ತಯಾರಿಕಾ ಕಂಪನಿಯಲ್ಲಿ ಸ್ಫೋಟ: 9 ಮಂದಿ ಸಾವು

ನಾಗ್ಪುರ, ಡಿ.17- ಸೋಲಾರ್ ಇಂಡಸ್ಟ್ರೀಸ್ ಘಟಕದಲ್ಲಿ ಭಾರೀ ಸ್ಫೋಟ ಸಂಭವಿಸಿದ್ದು 9 ಮಂದಿ ಸಾವನ್ನಪ್ಪಿರುವ ದಾರುಣ ಘಟನೆ ನಾಗ್ಪುರದ ಬಜಾರ್‌ಗಾಂವ್‌ನಲ್ಲಿ ನಡೆದಿದೆ. ಸ್ಫೋಟದ ತೀವ್ರತೆಗೆ ಸ್ಥಳದಲ್ಲೇ 9 ಮಂದಿ ಸಾವನ್ನಪ್ಪಿದರೆ ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಸ್ಫೋಟದ ನಂತರ ಸ್ಥಾವರದಲ್ಲಿ ಕಾಲ್ತುಳಿತ ಸಂಭವಿಸಿದೆ. ಅಪಘಾತದ ಬಗ್ಗೆ ಮಾಹಿತಿ ಸಿಕ್ಕ ಕೂಡಲೇ ರಕ್ಷಣಾ ತಂಡ ಸ್ಥಳಕ್ಕೆ ಆಗಮಿಸಿ ಗಾಯಾಳುಗಳನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದೆ.

ನಾಗ್ಪುರದ ಬಜಾರ್‌ಗಾಂವ್‌ನಲ್ಲಿರುವ ಸೋಲಾರ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯಲ್ಲಿ ಭಾರೀ ಸ್ಫೋಟವು ಭೀತಿಯನ್ನು ಸೃಷ್ಟಿಸಿದೆ. ಸ್ಫೋಟದ ವೇಳೆ ಕಾರ್ಮಿಕರು ಸ್ಥಾವರದಲ್ಲಿ ಕೆಲಸ ಮಾಡುತ್ತಿದ್ದರು.

ಸಿಕ್ಕಿರುವ ಮಾಹಿತಿ ಪ್ರಕಾರ, ಕಾರ್ಮಿಕರು ಕಲ್ಲಿದ್ದಲು ಸ್ಫೋಟಕ್ಕೆ ಗನ್ ಪೌಡರ್ ಪ್ಯಾಕ್ ಮಾಡುತ್ತಿದ್ದರು. ಈ ವೇಳೆ ಅವಘಡ ಸಂಭವಿಸಿದೆ. ಪೊಲೀಸ್ ತಂಡ ಮತ್ತು ರಕ್ಷಣಾ ಕಾರ್ಯಾಚರಣೆ ತಂಡ ಸ್ಥಳಕ್ಕೆ ಧಾವಿಸಿದ್ದು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದೆ.

ಕಾರ್ಖಾನೆ ಸ್ಫೋಟದಲ್ಲಿ ಗಾಯಗೊಂಡಿರುವ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದೆ. ಗಾಯಗೊಂಡವರೆಲ್ಲರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸಂಸ್ಥೆಯು ದೇಶದ ರಕ್ಷಣಾ ಇಲಾಖೆಗೆ ಸ್ಫೋಟಕಗಳು ಮತ್ತು ಇತರ ರಕ್ಷಣಾ ಸಂಬಂಧಿತ ವಸ್ತುಗಳನ್ನು ಪೂರೈಸಲು ಕೆಲಸ ಮಾಡುತ್ತದೆ.

ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಘಟನೆಯನ್ನು ದುರದೃಷ್ಟಕರ ಎಂದು ಹೇಳಿದ್ದು, 9 ಜನರ ಸಾವಿಗೆ ಸಂತಾಪ ಸೂಚಿಸಿದ್ದಾರೆ.

ಮೃತರ ಕುಟುಂಬಗಳಿಗೆ ರಾಜ್ಯ ಸರ್ಕಾರ 5 ಲಕ್ಷ ರೂಪಾಯಿ ಪರಿಹಾರ ನೀಡಲಿದ್ದು, ಮುಖ್ಯಮಂತ್ರಿ ಏಕನಾಥ್ ಶಿಂಧೆ ಅವರು ನಿರ್ಧಾರವನ್ನು ಅನುಮೋದಿಸಿದ್ದಾರೆ ಎಂದು ಅವರು ಹೇಳಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821-2496522/23

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್, ಕೂರ್ಗಳ್ಳಿ, ಹೂಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವುಳ್ಳ ಸೆಕ್ಯೂರಿಟಿ ಸೂಪರ್ ವೈಸರ್‌ಗಳು ಮತ್ತು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ಸಂಬಳ : S/Sup-18500/- S/Guard-17500/- ವಯೋಮಿತಿ 50 ವರ್ಷದ ಒಳಗೆ ESI ಮತ್ತು PF ಸೌಲಭ್ಯವಿರುತ್ತದೆ
9880727819,7006635122

V-GUARD 10 ವರ್ಷಗಳ ವ್ಯಾರಂಟಿ Solar Water Heater SALES & SERVICE BAJAJ FINSERV
SUNZONE SOLAR SYSTEM VM Double Road, Kuvempunagar, Mysuru
9845175443

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas 9379699229

MICROWAVE OVEN SERVICES
Indian / Imported Call for Microwave Oven Repair
Mob: 9900237315, 9845963421, 08214266495

100% TEAK WOOD FACTORY FINISH DOORS @ DEPOT RATES
10 YEARS WARRANTY www.ssbuildmart.com 9901291267 9845426862

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
Mob: 8880558064

ಕೆಲಸಕ್ಕೆ ಬೇಕಾಗಿದ್ದಾರೆ
ಹುಡುಗಿಯರು ವಯೋಮಿತಿ 18-30 ವಿದ್ಯಾರ್ಹತೆ ಪಿಯುಸಿ ಯಾವುದೇ ಡಿಗ್ರಿ ಸೆರಾಕೇರ್ ಮೈಸೂರು ಹೆಲ್ತ್ ಸೆಂಟರ್ ನ್ಯೂ ಕಾಂತರಾಜ ಅರಸು ರಸ್ತೆ ಕೆ.ಜಿ.ಕೊಪ್ಪಲು, ಮೈಸೂರು
8296366894 7996011692

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ಜಾಗ ಮಾರಾಟಕ್ಕಿದೆ
ಮುಡಾ ಅನುಮೋದಿತ ಉತ್ತರಾಭಿಮುಖವಾಗಿ 15300 ಚ.ಅಡಿ, 30 ಅಡಿ ರಸ್ತೆಯಲ್ಲಿ 80 ಅಡಿ ರಸ್ತೆಗೆ ಪ್ರಸ್ತಾಪಿಸಲಾಗಿದೆ, ಸುವರ್ಣನಗರ ಬಳಿ, ಬೋಗಾದಿ-ಗದ್ದಿಗೆ ರಸ್ತೆ ಯಿಂದ ಆದಿತ್ಯ ವೃತ್ತಕ್ಕೆ ಸಂಪರ್ಕ ಕಲ್ಪಿಸಲಾಗಿದೆ. ಸಿಟಿಯಿಂದ 9 ಕಿ.ಮೀ. ಬ್ಯಾಂಕ್ ಲೋನ್ ಸೌಲಭ್ಯವಿದೆ. ಕರೆ ಮಾಡಿ.
Mob: 79751 34287

ಶ್ರೀ ಗೌರಿಶಂಕರ ಟ್ರಾವೆಲ್ಸ್
21-1-24 (1 ದಿನ) - ಘಾಟಿಸುಬ್ರಮಣ್ಯ, ಇಶಾಫೌಂಢೇಶನ್, 26-1-24 (4ದಿನ)- ಭೀಮಾಶಂಕರ, ಶಿರಡಿ, ತ್ರಯ್ಯಂಬಕೇಶ್ವರ, ಎಲ್ಲೋರ, ಘೃಷ್ಣೇಶ್ವರ ಇತ್ಯಾದಿ, 11-4-24 (6 ದಿನ) - ಅಯೋಧ್ಯ, ಕಾಶಿ, ಗಯಾ ಇತ್ಯಾದಿ (ವಿಮಾನ, ಎ.ಸಿ.ಬಸ್, ಊಟ, ರೂಂ)
9620002114

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು. ಬಂದ ಆದಾಯದಲ್ಲಿ 50-50. ಈ ರೀತಿ ಬ್ಯುಸಿನೆಸ್ ಪ್ಲ್ಯಾನ್ ಇರುವವರು ಕೂಡಲೇ ಸಂಪರ್ಕಿಸಿ
9901080314

ಬೋಳು ತಲೆಯ ಸಮಸ್ಯೆಯೇ?
SMART HAIR FIXING # 574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

WANTED
Female RECEPTIONIST / ACCOUNTANT for a showroom SALARY Rs. 20000/-
Ph.9380142144

Star Solar Renewable Energy
JUST 19,499/- Easy EMI 200 Ltr 5/15 Years Guaranty
Old system Exchange offer available Manufacturing: Belawadi Industrial Sub,Mysore
9945616293 / 9449966293

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ. ಸಂಬಳ+ಓಟಿ 15,200/- to 86,000/-
9740733021, 9535028750

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿ ಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ.
97318 91409

WANTED
Telecallers (Females) SSLC and PUC Salary - 7000+Incentives upto 12,000 Timings - 9.30 Am to 6pm M.R. Associates HDFC Life Advisors Office Saraswatipuram, Mysore
9900844455

ಮನೆಯಿಂದಲೇ ಕೆಲಸ
ಗೃಹಿಣಿಯರಿಗೆ ವಯಸ್ಸಾದವರು, ವಿದ್ಯಾರ್ಥಿಗಳು, ವಯಸ್ಸಿನ ಮಿತಿ ಇಲ್ಲ. ಪೆನ್ಸಿಲ್ ಪ್ಯಾಕಿಂಗ್, ಜ್ಯೂವೆಲ್ಲರಿ ಪ್ಯಾಕಿಂಗ್, ಮೆಹಂದಿ ಪ್ಯಾಕಿಂಗ್, ಕವರ್ ಪ್ಯಾಕಿಂಗ್ Flower ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಗಳಿಸಿ ತಿಂಗಳಿಗೆ 20000/- ದಿಂದ 30000ವರೆಗೆ
8147197339

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಮ್ಮ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ತಿಳಿಸಲಾಗುತ್ತದೆ.

HOUSE FOR SALE
1800 Sqft., Ittigegud, Mysuru
Call: 7676322338

ಪೈಲ್ಸ್, ಫಿಸ್ಟುಲಾ, ಫಿಶರ್, ಸೋರಿಯಾಸಿಸ್, ಸಂಧಿವಾತ, ಡಯಾಬಿಟಿಕ್ ಅಲ್ಸರ್, ವೆರಿಕೋಸ್‌ವೇನ್ ಸಮಸ್ಯೆಗಳಿಗೆ ಖಚಿತ ಪರಿಹಾರ
ಸುಶ್ರುತ ಕ್ಷಾರಸೂತ್ರ & ಪಂಚಕರ್ಮ ಸೆಂಟರ್ #555, ದಿವಾನ್ಸ್ ರೋಡ್, ಚಾಮರಾಜ ಮೊಹಲ್ಲಾ, ಮೈಸೂರು-1
9449972788

ಮನೆ ಬಾಡಿಗೆಗಿದೆ
30x50 West facing, North door, ಮೊದಲನೇ ಮಹಡಿ, 2BHK, ಡೈನಿಂಗ್ ಹಾಲ್, ಪೂಜಾ ರೂಂ ಸೌಲಭ್ಯವುಳ್ಳ ಮನೆ ರಾಮಮಂದಿರ ಮುಖ್ಯರಸ್ತೆ, ಜಯನಗರ, ಮೈಸೂರು. (ಸಸ್ಯಹಾರಿಗಳಿಗೆ ಮಾತ್ರ). 15,000 ಬಾಡಿಗೆ.
8892323823, 7975757858

FOR SALE
1) 30x40, 30x50 near Defence Apartment, Kote Road, 60 feet road. (2) 6, 10, 20 guntas farm land @ KRS backwater. (3) 30x40 Narasipura Road. (4) S/Commercial 40x60 Satagalli. (5) 40x70 house Vidyaranyapuram. (6) 30x40 Jnanabharathi Layout, JP Nagar. 30x45 N, Kuvempunagar. New and old house city surrounding.
PRAKRUTHI PROPERTIES
9538690359, 9035990359

ನಿವೇಶನ ಬೇಕಾಗಿದೆ
ಮೈಸೂರಿನ ಲಾಲ್ ಬಹದ್ದೂರ್ ಶಾಸ್ತ್ರಿನಗರ, ಶಾಂತವೇರಿ ಗೋಪಾಲಗೌಡ ನಗರದಲ್ಲಿ ಉತ್ತರ ಅಥವಾ ಪೂರ್ವ ದಿಕ್ಕಿನ 20x30 ಅಥವಾ 30x40 ಅಡಿ ಅಳತೆಯ ನಿವೇಶನ ಬೇಕಾಗಿದೆ. ಮಾರಾಟ ಮಾಡುವವರು ಸಂಪರ್ಕಿಸಿ: ಸತ್ಯ
9164759650,9342125527

PLOT FOR SALE MUDA APPROVED
Nirmaan Nagar, Mosambayanahalli Road, Near Kalpavruksha Raghvendra swamy Temple, T.Narasipura Road, Mysore. Dimension: 1200 sqft, Rs. 2000 Per sqft (Negotiable)
9916939424

ಮನೆ ಮಾರಾಟಕ್ಕಿದೆ
ದಟ್ಟಗಳ್ಳಿ 3ನೇ ಹಂತ (ಕನಕದಾಸನಗರ) 20x30 N/F (ಉತ್ತರದಿಕ್ಕು) Ground Floor 2 BHK First Floor 2 BHK ಬೆಲೆ: 66 ಲಕ್ಷ ನೆಗೋಷಿಯೆಬಲ್ ಮಧ್ಯವರ್ತಿಗಳಿಗೆ ಅವಕಾಶವಿಲ್ಲ
9945428296

SITES FOR SALE
60X40ft East Facing at Ahad City Mysuru. 6 km from satellite bus stand towards Mahadevapura Road, Beautiful layout Gaited community UGD Electricity water multiple gardens Tar roads,
9901231117

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ಯುವಕ/ಯುವತಿಯರು, ಮಹಿಳೆಯರು, ವಿಧವೆ/ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೆ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ ಉಚಿತ ಊಟ ವಸತಿಯೊಂದಿಗೆ 16000 ರಿಂದ 20000ವರೆಗೆ
6366141518,9845010281

ಬೇಕಾಗಿದ್ದಾರೆ
ಮೇಟಗಳ್ಳಿ, ಹೆಬ್ಬಾಳು ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ. B.Sc, Computer Science (Female) & ITI Fitters (male) ಸಂಬಳ: 11,500 to 18,000. ESI & PF ಸೌಲಭ್ಯ ಇರುತ್ತದೆ.
8951869646 9902645646

ಬೇಕಾಗಿದ್ದಾರೆ
1) ಮಹಿಳಾ ಹೌಸ್ ಕೀಪರ್ 20 ಮಂದಿ (ಮೇಟಗಳ್ಳಿ ಸುತ್ತಮುತ್ತ) 2) ಸೆಕ್ಯೂರಿಟಿ ಗಾರ್ಡ್‌ಗಳು (ವಿದ್ಯಾವಂತ ಅನುಭವಿಗಳು)
9686422400 9611236261

ಮನೆ ವಾಟರ್ ಪ್ರೂಫ್
Painting, ಮನೆ Renovation, 2D, 3D Plan ಸಂಪರ್ಕಿಸಿ: ಶಿವು
8660845597

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಕಂಪನಿಗೆ, ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ. Any Qualification 7th, 10th, PUC, ITI, Any Degree, Pass/Fail ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ ಸಂಬಳ: 15000-35000 (ESI+PF+OT) ಸೇರಿ
9743889239 9164052361

ಬೇಕಾಗಿದ್ದಾರೆ
ಮೈಸೂರಿನ ಸೇವಾ ಸಂಸ್ಥೆಯೊಂದಕ್ಕೆ ಹಸು ಕೆಲಸ ಮತ್ತು ಮನೆ ಕೆಲಸಕ್ಕೆ ಧೂಮಪಾನ ಮತ್ತು ಮದ್ಯಪಾನ ಚಟವಿರದ ಸಂಸಾರವೊಂದು ಬೇಕಾಗಿದೆ. ವೇತನ ರೂ. 25000/- + ಊಟ, ವಸತಿ
9341369901,9538499901 8088586087

ತಕ್ಷಣ ಬೇಕಾಗಿದ್ದಾರೆ
ಗಂಗೋತ್ರಿ, ಬೋಗಾದಿ, ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಸಂಬಳ : 18000/-(26 Days) ವಯೋಮಿತಿ : 50 ವರ್ಷದ ಒಳಗೆ ESI ಮತ್ತು PF ಸೌಲಭ್ಯ ಇರುತ್ತದೆ
9620667819 9880727819

ಬಾಡಿಗೆಗೆ
ಸಿದ್ದಪ್ಪಚೌಕ, ಜಗದಾಂಬ ಶಾಲೆ ಹತ್ತಿರ, Ground Floorನಲ್ಲಿ 625 ಚದರ ಅಡಿಯಷ್ಟು ಸ್ಥಳಾವಕಾಶವಿರುತ್ತದೆ. Tuition Coaching Centre Office, Clinic, Godown ಇದಕ್ಕೆ ಸೂಕ್ತವಾಗಿರುತ್ತದೆ.
8147220614

ಜಮೀನು ಮಾರಾಟಕ್ಕಿದೆ
ಚಾಮರಾಜನಗರ ತಾಲ್ಲೂಕು ಕಾವುದವಾಡಿಯ ಮುಖ್ಯ ರಸ್ತೆಯಲ್ಲಿ 4 ಎಕರೆ ಜಮೀನು ಮಾರಾಟಕ್ಕಿದೆ.
9945656731

ತಕ್ಷಣವೇ ಬೇಕಾಗಿದ್ದಾರೆ
ಮೈಸೂರಿನ ಕಂಪನಿಗಳಿಗೆ ಕೆಲಸ ಮಾಡಲು ಐಟಿಐ (ITI) ಫಿಟ್ಟರ್, ಟರ್ನರ್‌ಗಳು, ಸೆಕ್ಯೂರಿ ಗಾರ್ಡುಗಳು ಮತ್ತು ಹೆಲ್ಪರ್ ಕೆಲಸಕ್ಕೆ ಹುಡುಗರು, ಹುಡುಗಿಯರು ಟೈಲರುಗಳು ಬೇಕಾಗಿದ್ದಾರೆ.
7795285485 8105249880

ಕಳೆದಿದೆ
ಸತೀಶ್ ಜೆ.ಎ. ದಿ.01-02-2023ರಂದು ಬನ್ನಿಮಂಟಪ ಮನೆಯ ಹತ್ತಿರ ನಂ.202, 1ನೇ ಹಂತ, EWS ಹುಡ್ಕೋ ಬಡಾವಣೆ ಬನ್ನಿಮಂಟಪ ಸ್ವತ್ತಿಗೆ ಸಂಬಂಧಿಸಿದ ಮಂಜೂರಾತಿ ಪತ್ರ ಹಾಗೂ ಸ್ವಾಧೀನ ಪತ್ರದ ದಾಖಲಾತಿಗಳು ಕಳೆದು ಹೋಗಿರುತ್ತದೆ. ಸಿಕ್ಕದವರು ಸಂಪರ್ಕಿಸಿ
9741434160

SITE FOR SALE
30x40 East Facing in BMICAPA & RERA Approved layout near kesare 5 minutes from Bangalore-Mysore Express Road with all Facilities Brokers Excuse
9483013656

WANTED
Sales Assistant for filling Petrol Diesel & Gas for Vehicles at Petrol Bunk at Mysore City Cashier Plus Helper Preference PUC & Above Salary as per Qualification
9901120389 9844002226

WE REQUIRED
Emplyees for our Hotel Jobs South Indian assistant Cook - 3Nos. Chinese Cook - 1 No. Supplier- 2 Nos. Dish Washer - 2Nos. Namasthe Ahaar, Surya Bakery Main Road, Water tank Circle, Vijayanagar 2nd Stage, Mysore
8660712416

ಕೆಲಸಕ್ಕೆ ಬೇಕಾಗಿದ್ದಾರೆ
ಪಾರ್ಟ್ ಟೈಮ್ ಅಥವಾ ಫುಲ್ ಟೈಮ್ ಆಗಿ ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ನಗರಗಳಲ್ಲಿ ಸರ್ವೆ ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ: ಪಾರ್ಟ್ ಟೈಮ್ - 9000 ಫುಲ್ ಟೈಮ್-18000
9731051975

HOUSE FOR SALE
40X63, Subramanya Nagara Jnanaganga L/o, Muda Approved Near Harividyalaya School Bogadi, Mysuru
9482883566

ತಕ್ಷಣ ಬೇಕಾಗಿದ್ದಾರೆ
Telecalling ಕೆಲಸಕ್ಕೆ ಹುಡುಗಿಯರು ತಕ್ಷಣ ಬೇಕಾಗಿದ್ದಾರೆ (Fixed Salary, No Target)
9606084390 9606084387

WANTED RECEPTIONIST
ROYAL LOOK SALON PROFESSIONAL UNISEX JP NAGAR & DATTAGALLI MANDATORY: KANNADA | ENGLISH | HINDI
M : 90362 06233

ವಿಠಲ್ ರೆಕಾರ್ಡ್ಸ್ ಪ್ರೈವೇಟ್ ಲಿಮಿಟೆಡ್
ಖಾಲಿ ಹುದ್ದೆ: 150+ ಸಂಬಳ 10,000 ಮೂಲ ಭತ್ಯೆ +5000 ಪ್ರೋತ್ಸಾಹ ಧನ. ಸಂದರ್ಶನದ ಸಮಯ: 9.30 ರಿಂದ 5.30. ವಿಳಾಸ: #42, JCK ಇಂಡಸ್ಟ್ರಿಯಲ್ ಪಾರ್ಕ್, ಮೇಟಗಳ್ಳಿ ಪೋಸ್ಟ್, ಪ್ರೀತಿ ಗ್ರ್ಯಾನೈಟ್ ಹತ್ತಿರ, ಕೆ.ಆರ್.ಎಸ್. ರಸ್ತೆ, ಮೈಸೂರು-570 016. ಕರೆ ಮಾಡಿ:
Mob: 8867064586

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮಂಡ್ಯದಲ್ಲೇ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಬರ, ಕಾವೇರಿ ಹೋರಾಟ, ಜಿಲ್ಲಾಧ್ಯಕ್ಷರ ತೀವ್ರ ಅನಾರೋಗ್ಯ ಸಿದ್ಧತೆಗೆ ಹಿನ್ನಡೆ: ಜೋಷಿ



ಸಲಹಾ ಸಮಿತಿ ರಚನೆ

ಅಧ್ಯಕ್ಷ ರವಿಕುಮಾರ್ ಅನಾರೋಗ್ಯಕ್ಕೀಡಾಗಿರುವುದರಿಂದ ಸಮ್ಮೇಳನ ನಡೆಸುವ ಸಲುವಾಗಿ ಸಲಹಾ ಸಮಿತಿ ರಚಿಸಲು ನಿರ್ಧರಿಸಿದ್ದು, ಆ ಸಲಹಾ ಸಮಿತಿ ನೇತೃತ್ವದಲ್ಲೇ ಸಮ್ಮೇಳನ ನಡೆಯಲಿದೆ. ಯಾರ ಮನಸ್ಸಿಗೂ ನೋವಾಗದ ರೀತಿ ಮತ್ತು ರವಿಕುಮಾರ್ ಅವರನ್ನು ಗೌರವದಿಂದ ನಡೆಸಿಕೊಂಡು ಸಮ್ಮೇಳನ ನಡೆಸುತ್ತೇವೆ. ಮಂಡ್ಯದಲ್ಲಿ ಸಮ್ಮೇಳನ ನಡೆಯುವುದಿಲ್ಲ ಎಂಬ ಊಹಾಪೋಹಗಳಿಗೆ ಕಿವಿಕೊಡಬೇಡಿ.

– **ಡಾ.ಮಹೇಶ್ ಜೋಷಿ,**
ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ.

ಮಂಡ್ಯ, ಡಿ.17– ಮುಂಬರುವ 2024ರಲ್ಲಿ ಈಗಾಗಲೇ ನಿಗದಿಗೊಂಡಿರುವಂತೆ ಮಂಡ್ಯ ಜಿಲ್ಲೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದ್ದು, ಜಿಲ್ಲೆಯಿಂದ ಸಮ್ಮೇಳನ ಸ್ಥಳಾಂತರ ಅಥವಾ ರದ್ದುಗೊಳಿಸುವ ಪ್ರಶ್ನೆಯೇ ಇಲ್ಲ ಎಂದು ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ.ಮಹೇಶ್ ಜೋಷಿ ಸ್ಪಷ್ಟಪಡಿಸಿದರು.

ನಗರದ ರೈತ ಸಭಾಂಗಣದಲ್ಲಿ ಭಾನುವಾರ ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆಯೋಜನೆಗೆ ಸಾಹಿತಿಗಳು, ಸಂಘಟಕರು, ಸಾಹಿತ್ಯಾಸಕ್ತರ ಅಭಿಪ್ರಾಯ ಸಂಗ್ರಹಣೆಗೆ ಕರೆದಿದ್ದ ಸಭೆಯ ಬಳಿಕ ಮಾತನಾಡಿದ ಅವರು, ಈ ಹಿಂದೆ ಹಾವೇರಿಯಲ್ಲಿ ನಡೆದ ಸಮ್ಮೇಳನದಲ್ಲಿ ಮುಂದಿನ ಸಮ್ಮೇಳನ ಮಂಡ್ಯ ಜಿಲ್ಲೆಯಲ್ಲಿ ನಡೆಸಬೇಕೆಂದು ನಿರ್ಣಯವಾಗಿತ್ತು. ಎಲ್ಲವೂ ಅಂದುಕೊಂಡಂತೆ ನಡೆದಿದ್ದರೆ ಇದೇ ವರ್ಷ 2023ರ ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಸಮ್ಮೇಳನ ನಡೆಯಬೇಕಿತ್ತು. ಆದರೆ ಅದು ಸಾಧ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸಮ್ಮೇಳನ ಮುಂದೂಡಿಕೆಗೆ ರಾಜ್ಯದಲ್ಲಿ ತಾಂಡವವಾಡುತ್ತಿರುವ ಬರ, ಮಂಡ್ಯದಲ್ಲಿ ನಡೆಯುತ್ತಿರುವ ಕಾವೇರಿ ಹೋರಾಟ ಹಾಗೂ ಪ್ರಮುಖವಾಗಿ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಸಿ.ಕೆ.ರವಿಕುಮಾರ್ ಅವರು ತೀವ್ರ ಅನಾರೋಗ್ಯದಿಂದ ಹಾಸಿಗೆ ಹಿಡಿದಿರುವುದು ಸಮ್ಮೇಳನಕ್ಕೆ ಭಾರಿ ಹಿನ್ನಡೆ ತಂದೊಡ್ಡಿದೆ ಎಂದು ಹೇಳಿದರು.

ಸಮ್ಮೇಳನ ಮಂಡ್ಯದಲ್ಲಿ ನಡೆಯಲಿದೆ ಎಂದು ಘೋಷಣೆಯಾದ ಬಳಿಕ ಕ್ರಿಯಾಶೀಲವಾಗಿ ಕಾರ್ಯ ನಿರ್ವಹಿಸುತ್ತಿದ್ದ ರವಿಕುಮಾರ್ ತೀವ್ರ ಅನಾರೋಗ್ಯದಿಂದ ಕಳೆದ 6 ತಿಂಗಳಿಂದ ಹಾಸಿಗೆ ಹಿಡಿದಿದ್ದು, ಎದ್ದು ಓಡಾಡುವ ಪರಿಸ್ಥಿತಿಯಲ್ಲಿಲ್ಲ. ಹಾಗಾಗಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ. ಈ ನಿಟ್ಟಿನಲ್ಲಿ ಸಮ್ಮೇಳನದ ಚಟುವಟಿಕೆಗಳು ನಡೆಯಬೇಕೆಂಬ ಉದ್ದೇಶದಿಂದ ಖುದ್ದು ನಾನೇ ಆಗಮಿಸಿ ಸಭೆ ನಡೆಸಿದ್ದೇನೆ. ಸಾಹಿತಿಗಳು, ಸಂಘಟಕರು, ಸಾಹಿತ್ಯಾಸಕ್ತರಿಂದ ಸಲಹೆ ಸ್ವೀಕರಿಸಿದ್ದೇನೆ ಎಂದರು.

ಸಮ್ಮೇಳನ ಹಿನ್ನೆಲೆಯಲ್ಲಿ ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರೊಂದಿಗೆ ಚರ್ಚಿಸಿದ್ದು, ಬೆಳಗಾವಿ ಅಧಿವೇಶನದ ಬಳಿಕ ಸಿಎಂ ಜೊತೆ ಮಾತನಾಡೋಣ ಎಂದಿದ್ದಾರೆ. ಈ ನಿಟ್ಟಿನಲ್ಲಿ ಶೀಘ್ರ ಸಿಎಂ ಮತ್ತು ಸಚಿವರ ಜೊತೆಗೆ ಸಭೆ ನಡೆಸಿ ದಿನಾಂಕ ನಿಗದಿಗೊಳಿಸಲಿದ್ದೇವೆ ಎಂದರು.

ಇದೇ ವೇಳೆ ಸಾಹಿತ್ಯಾಸಕ್ತರು ದಿನಾಂಕ ಮತ್ತು ಇದೇ ತಿಂಗಳಲ್ಲಿ ಸಮ್ಮೇಳನ ನಡೆಸಲಿ ಎಂದು ಅಧ್ಯಕ್ಷರಿಗೆ ಸಲಹೆ ನೀಡಿದರು. ಜೊತೆಗೆ ಸಮ್ಮೇಳನ ನಡೆಸಬೇಕಾದ ಜಾಗ, ಆಯೋಜನೆ ಹೇಗಿರಬೇಕು. ಜಿಲ್ಲಾಧ್ಯಕ್ಷರ ಅನುಪಸ್ಥಿತಿಯಲ್ಲಿ ಯಾರ್‍ಯಾರಿಗೆ ಯಾವ್ಯಾವ ಜವಾಬ್ದಾರಿ ಕೊಡಬೇಕೆಂಬ ಬಗ್ಗೆ ಹಾಗೂ ಇನ್ನಿತರ ವಿಚಾರಗಳ ಬಗ್ಗೆ ಸತತ ಒಂದು ಗಂಟೆಗೂ ಹೆಚ್ಚು ಕಾಲ ಸುದೀರ್ಘ ಚರ್ಚೆ ನಡೆಯಿತು.

ಈ ಸಂದರ್ಭ ಕೇಂದ್ರ ಕಸಾಪ ಗೌರವ ಕಾರ್ಯದರ್ಶಿಗಳಾದ ಪದ್ಮಿನಿ ನಾಗರಾಜ್, ರಾಮಲಿಂಗಶೆಟ್ಟಿ, ಗೌರವ ಕೋಶಾಧ್ಯಕ್ಷ ಪಟೇಲ್ ಪಾಂಡು, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷರಾದ ಜಿ.ಟಿ.ವೀರಪ್ಪ, ಮೀರಾ ಶಿವಲಿಂಗಯ್ಯ, ಎಂ.ವಿ.ಧರಣೇಂದ್ರಯ್ಯ, ಜಿಲ್ಲಾ ಕಸಾಪ ಪದಾಧಿಕಾರಿಗಳಾದ ಎಂ.ಬಿ.ರಮೇಶ್, ಧನಂಜಯ, ಕೃಷ್ಣೇಗೌಡ, ಭಾಸ್ಕರ್, ಶ್ರೀಧರ್, ಅಂಜನಾ ಶ್ರೀಕಾಂತ್, ಪೂರ್ಣಚಂದ್ರ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

ಪ್ರತಿಯೊಬ್ಬರೂ ಕನ್ನಡ ಭಾಷೆ ಬಳಸಿ, ಉಳಿಸಿ

ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್



ಪಾಂಡವಪುರ, ಡಿ.17– ಪ್ರಸ್ತುತ ಕನ್ನಡ ಭಾಷೆ ಬಳಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಹೀಗಾಗಿ ಪ್ರತಿಯೊಬ್ಬರೂ ಕನ್ನಡ ಬಳಸಿದರೇ ಮಾತ್ರ ಕನ್ನಡ ಭಾಷೆ ಉಳಿಸಲು ಸಾಧ್ಯ ಎಂದು ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ಮಂಡ್ಯ ಜಿಲ್ಲೆ ಆಡಳಿತಾತ್ಮಕ ನ್ಯಾಯಾಧೀಶ ಕೃಷ್ಣ ಎಸ್.ದೀಕ್ಷಿತ್ ತಿಳಿಸಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿ ವಕೀಲರ ಸಂಘದಿಂದ ನಡೆದ ವಕೀಲರ ದಿನಾಚರಣೆ, ಅಭಿನಂದನಾ ಸಮಾರಂಭ, ಕನ್ನಡ ಹಬ್ಬ ಹಾಗೂ ರಕ್ತದಾನ ಶಿಬಿರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರೂ ಕನ್ನಡ ಭಾಷೆ ಪ್ರೀತಿಸಬೇಕು. ಯಾವುದೇ ಹಿಂಜರಿಕೆ ಇಲ್ಲದೇ ಎಲ್ಲಾ ಕಡೆ ಕನ್ನಡ ಭಾಷೆ ಬಳಸಬೇಕು. ಶ್ರೀಸಾಮಾನ್ಯರು ಕನ್ನಡ ಭಾಷೆ ಬಳಸಿದರೆ ಮಾತ್ರ ಕನ್ನಡ ಭಾಷೆ ಉಳಿಯಲು ಸಾಧ್ಯ. ಜೊತೆಗೆ ತಿಂಗಳು, ವಾರಕ್ಕೊಮ್ಮೆಯಾದರೂ ತಮ್ಮ ಮನೆಗಳಲ್ಲಿ ಒಂದು ದಿನ ಸಂಪೂರ್ಣವಾಗಿ ಅನ್ಯಭಾಷೆ ಬಳಕೆಬಿಟ್ಟು ಕನ್ನಡ ಮಾತನಾಡುವುದನ್ನು ರೂಢಿಸಿಕೊಳ್ಳುವಂತಾಗಬೇಕು ಎಂದರು.

ಕನ್ನಡ ಭಾಷೆ ಶ್ರೀಮಂತ ಭಾಷೆ, ಹಲವಾರು ಮಹಾನ್ ಕವಿ, ಸಾಹಿತಿ, ಚಿಂತಕರಿಗೆ ಜನ್ಮ ನೀಡಿದೆ. ಹಲವು ವೈವಿಧ್ಯ ಹೊಂದಿದೆ. ಒಂದು ಕಾಲದಲ್ಲಿ ಚಿನ್ನ, ಮುತ್ತು ರತ್ನಗಳ ರಾಶಿಯನ್ನು ಬೀದಿಯಲ್ಲಿ ಅಳೆದು ಮಾರಾಟ ಮಾಡುತ್ತಿದ್ದ ಬಂಗಾರದ ನಾಡು ಎಂದು ಬಣ್ಣಿಸಿದರು.

ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ಮಾತನಾಡಿ, ಪ್ರಪಂಚದ ಶ್ರೇಷ್ಠ ಭಾಷೆಗಳ ಪೈಕಿ ಕನ್ನಡವೂ ಒಂದಾಗಿದೆ. ಕನ್ನಡ ಸಾಹಿತ್ಯದಿಂದ ಮಾತ್ರ ಕನ್ನಡ ಬೆಳೆಯುವುದಿಲ್ಲ. ಎಲ್ಲಾ ವೃತ್ತಿಗಳು ಬೆಳೆದು ಶ್ರೀಮಂತಗೊಂಡರೆ ಭಾಷೆಯೂ ಶ್ರೀಮಂತಗೊಳ್ಳುತ್ತವೆ ಎಂದರು.

ಕನ್ನಡ ಭಾಷಾ ಶ್ರೀಮಂತಿಕೆ ಅದ್ಭುತವಾಗಿದೆ. ವಿದ್ಯಾವಂತರಿಗಿಂತ ಗೊತ್ತೊಗೊತ್ತಿಲ್ಲದೆ ಅವಿದ್ಯಾವಂತರೇ ಕನ್ನಡ ಭಾಷೆ ಕಟ್ಟಿ ಬೆಳೆಸಿದ್ದಾರೆ. ಪ್ರಪಂಚದ ದೊಡ್ಡ ದೊಡ್ಡ ಕವಿ, ಸಾಹಿತಿಗಳ ಸಾಲಿನಲ್ಲಿ ಕನ್ನಡದ ಕವಿಗಳು ಸಹ ನಿಲ್ಲುತ್ತಾರೆ. ನಮ್ಮಲ್ಲಿರುವ ಶಿಲ್ಪಕಲೆ, ವಾಸ್ತುಶಿಲ್ಪ, ಸಂಸ್ಕೃತಿ, ಸಂಸ್ಕಾರ, ದೇವಾಲಯಗಳು ಬೇರೆ ದೇಶಗಳಲ್ಲಿ ನೋಡಲು ಸಾಧ್ಯವಿಲ್ಲ ಎಂದರು.

ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಮಾತನಾಡಿ, ಇದೇ ತಾಲೂಕಿನ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಮೂರ್ತಿ ಇ.ಎಸ್.ವೆಂಕಟರಾಮಯ್ಯ ಅವರು ನಾನು ಇರುವ ತನಕ ನನ್ನ ತವರಿಗೆ ನ್ಯಾಯಾಲಯ ನೀಡುವುದಿಲ್ಲ. ನನ್ನ ಜನ ವ್ಯಾಜ್ಯ ಮುಕ್ತರಾಗಿ ಬದುಕಬೇಕೆಂದಿದ್ದರು. ಅದರಂತೆ ನಡೆದುಕೊಂಡರು. ಮನೆ ಬಾಗಿಲಿಗೆ ನ್ಯಾಯಾಲಯ ಹೋಗಬೇಕೆಂದಾಗ ತಾಲೂಕಿಗೆ ನ್ಯಾಯಾಲಯ ಮಂಜೂರಾಯಿತು ಎಂದರು.

ಪ್ರಸ್ತುತ ಕರ್ನಾಟಕದಲ್ಲಿ ಶೇ.50ಷ್ಟು ಕ್ರಿಮಿನಲ್ ಪ್ರಕರಣಗಳಿದ್ದರೆ, ಪಕ್ಕದ ಕೇರಳದಲ್ಲಿ ಶೇ.60ರಷ್ಟು ಹಾಗೂ ಮಧ್ಯಪ್ರದೇಶದಲ್ಲಿ ಶೇ.80ರಷ್ಟು ಕ್ರಿಮಿನಲ್ ಪ್ರಕರಣ ಕಾಣಬಹುದಾಗಿದೆ ಎಂದರು.

ಹೈಕೋರ್ಟ್ ನ್ಯಾಯಮೂರ್ತಿಗಳಾದ ಬಿ.ಎಂ.ಶ್ಯಾಂಪ್ರಸಾದ್, ಇ.ಎಸ್. ಇಂದ್ರೇಶ್ ಮಾತನಾಡಿದರು. ಜಿಲ್ಲಾ ಸತ್ರ ನ್ಯಾಯಾಧೀಶೆ ಬಿ.ಜಿ.ರಮಾ, ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ವಿಶಾಲರಘು, ವಕೀಲರ ಸಂಘದ ಅಧ್ಯಕ್ಷ ಕೆ.ಕಾಳೇಗೌಡ, ಪ್ರಧಾನ ಕಾರ್ಯದರ್ಶಿ ಕೆ.ಎನ್.ನಾಗರಾಜು ಸೇರಿದಂತೆ ವಕೀಲರ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಇಂದು ಚಿನಕುರಳಿಯಲ್ಲಿ ಷಷ್ಠಿ ಜಾತ್ರೆ



ಚಿನಕುರಳಿ, ಡಿ.17– ಗ್ರಾಮದ ಹುಣಸೇಕಟ್ಟೆ ಮೈದಾನದಲ್ಲಿ ಡಿ.18ರಂದು ಶ್ರೀ ಸುಬ್ರಹ್ಮಣ್ಯ ಸ್ವಾಮಿಯವರ 26ನೇ ವರ್ಷದ ಷಷ್ಠಿಜಾತ್ರೆ ಹಾಗೂ ವಿಶೇಷ ಪೂಜೆ ನಡೆಯಲಿದೆ. ಇದೇ ವೇಳೆ ಬೆಳಗ್ಗೆ 8 ರಿಂದ ಮಧ್ಯಾಹ್ನ 3ಗಂಟೆ ವರೆಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಮ ಸಮಾಜಕ್ಕೆ ನಟರು, ರಾಜಕಾರಣಿಗಳು, ಕ್ರಿಕೆಟಿಗರು ಆದರ್ಶ ವ್ಯಕ್ತಿಗಳಲ್ಲ



ಮಂಡ್ಯ, ಡಿ.17– ಇಂದಿನ ಯುವ ಪೀಳಿಗೆ, ಸಮ ಸಮಾಜ ನಿರ್ಮಾಣಕ್ಕೆ ಸಿನಿಮಾ ನಟರು, ಕ್ರಿಕೆಟಿಗರು, ರಾಜಕಾರಣಿಗಳು, ಶ್ರೀಮಂತ ಉದ್ಯಮಿಗಳು ಆದರ್ಶ ಹಾಗೂ ಮಾದರಿ ವ್ಯಕ್ತಿಗಳು ಎಂದುಕೊಂಡಿದ್ದರೇ ಅದು ಶುದ್ಧ ಸುಳ್ಳು. ಪ್ರಸ್ತುತ ಸಮ ಸಮಾಜ ನಿರ್ಮಾಣಕ್ಕೆ ಬುದ್ಧ, ಬಸವ, ಅಂಬೇಡ್ಕರ್, ಫುಲೆ, ಪೆರಿಯಾರ್, ನಾಲ್ವಡಿ, ಕುವೆಂಪು ಅವರ ಸಿದ್ಧಾಂತಗಳೇ ಮಾದರಿ ಎಂದು ನಟ ಹಾಗೂ ಪ್ರಗತಿಪರ ಹೋರಾಟಗಾರ ಚೇತನ್ ಅಹಿಂಸ ಅಭಿಪ್ರಾಯಪಟ್ಟರು.

ಭಾನುವಾರ ನಗರದ ಪೇಟೆಬೀದಿಯಲ್ಲಿರುವ ಕೃಷ್ಣ ಕಾಂಪ್ಲೆಕ್ಸ್ ಸಭಾಂಗಣದಲ್ಲಿ ಮಹಾನಾಯಕ ಭೀಮ್‌ರಾವ್ ಫೌಂಡೇಷನ್ ಜಿಲ್ಲಾ ಶಾಖೆ ಆಯೋಜಿಸಿದ್ದ ಎಂಬಿಆರ್‌ಎಫ್ ನೀಟ್ ಅಕಾಡೆಮಿ ಉದ್ಘಾಟನಾ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಾದರಿ ವ್ಯಕ್ತಿಗಳ ಸಂದೇಶಗಳು ಸಮಾಜಕ್ಕೆ ಬೇಕಾಗಿವೆ. ವಿಚಾರಧಾರೆಗಳಲ್ಲಿ ಜನರು ಸಾಗಬೇಕಿದ್ದು, ಸಮಸಮಾಜ ನಿರ್ಮಾಣವಾಗಬೇಕಿದೆ. ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಸಮಾನತೆ ಕಾಣಬೇಕಿದೆ ಎಂದರು.

ಇತಿಹಾಸದಲ್ಲಿರುವ ತಪ್ಪುಗಳನ್ನು ತಿದ್ದಿ ವೈಜ್ಞಾನಿಕವಾಗಿ ಇತಿಹಾಸ ನೋಡಬೇಕು. ಆದಿವಾಸಿಗಳಿಗೆ, ಬಡವರಿಗೆ, ಮಹಿಳೆಯರಿಗೆ, ಅಲ್ಪಸಂಖ್ಯಾತರಿಗೆ ಎಲ್ಲಾ ಸೌಲಭ್ಯಗಳು ಸಿಗಬೇಕಿವೆ. ಆದರೆ, ಶ್ರೀಮಂತರೇ ಶ್ರೀಮಂತರಾಗುತ್ತಿದ್ದಾರೆ. ಮಕ್ಕಳು ಮೊಮ್ಮಕ್ಕಳೇ ಬೆಳೆಯುತ್ತಿದ್ದಾರೆ. ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ನ್ಯಾಯ ವ್ಯವಸ್ಥೆಯಲ್ಲಿ ಸರಿಪಡಿಸಬೇಕು ಎಂದರು. ಮೌಢ್ಯತೆಯಿಂದ ಬೆಳೆಯದೆ ವೈಜ್ಞಾನಿಕವಾಗಿ ಬೆಳೆದರೆ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬಹುದು. ವೈಜ್ಞಾನಿಕ ಚಿಂತನೆಗಳು ನಮ್ಮನ್ನು ಬೆಳಕಿನೆಡೆಗೆ ಕರೆದೊಯ್ಯುತ್ತದೆ ಎಂದು ಸಲಹೆ ನೀಡಿದರು.

ಚಾಮರಾಜನಗರದ ನಳಂದ ವಿಶ್ವವಿದ್ಯಾಲಯದ ಬಂತೆ ಭೋದಿದತ್ತ ಭಂತೇಜಿ ಮಾತನಾಡಿ, ಪ್ರಸ್ತುತ ದಿನಗಳಲ್ಲಿ ಜನತೆ ಮತ್ತು ವಿದ್ಯಾರ್ಥಿಗಳು ವೈಜ್ಞಾನಿಕ ಮನೋಭಾವದೆಡೆಗೆ ಸಾಗಬೇಕಿದೆ. ಜಗತ್ತಿಗೆ ಭಗವಾನ್ ಬುದ್ದರು ನೀಡಿದ ಸಂದೇಶ ಮತ್ತು ಭೋದಿಸತ್ವ, ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳು ವೈಜ್ಞಾನಿಕ ಮನೋಭಾವದೆಡೆಗೆ ಸಾಗುವಂತೆ ಮಾಡುತ್ತವೆ. ಅಂದಿನ ಕಾಲದಲ್ಲೇ ಬುದ್ಧರು ಹೇಳಿದ ಸಂದೇಶ, ಉಪದೇಶಗಳು, ವಿಜ್ಞಾನ ಲೋಕಕ್ಕೆ ಮತ್ತು ಸಂಶೋಧನೆಗೆ ಸಹಕಾರಿಯಾಗಿವೆ. ಸಾಕಷ್ಟು ವಿಚಾರಗಳು ಭೌತ ವಿಜ್ಞಾನಕ್ಕೆ ತಾಳೆಯಾಗುತ್ತಿವೆ ಎಂದರು.

ಜಾತಿಯಿಂದ ಅಸ್ಪೃಶ್ಯತೆ ಬಂದಿಲ್ಲ ಗುಣದಿಂದ ಬಂದಿದೆ. ನಿಮ್ಮ ನಂಬಿಕೆಗಳು ಯಾವುದೇ ಇರಲಿ, ಮೌಢ್ಯತೆಯಿಂದ ಹೊರ ಬಂದು ಮನೋವಿಕಾಸಕ್ಕೆ ಅವಕಾಶ ಪಡೆದುಕೊಳ್ಳಿ. ಪ್ರಪಂಚದಲ್ಲಿರುವ ಪ್ರಕೃತಿಯ ನಿಯಮಗಳು ಸೃಷ್ಟಿಯನ್ನು ಮಾಡುತ್ತಿವೆ. ನಾಶವನ್ನೂ ಮಾಡುತ್ತಿವೆ. ಪ್ರಪಂಚವು ಕುಗ್ಗುತ್ತದೆ ಹಿಗ್ಗುತ್ತದೆ ಎನ್ನುವುದು ಸತ್ಯ ಎಂದರು.

ಇಲ್ಲಿ ನೀಟ್ ತರಬೇತಿ ಪಡೆಯುವ 10 ವಿದ್ಯಾರ್ಥಿಗಳ ವೆಚ್ಚವನ್ನು ವಾರ್ಷಿಕವಾಗಿ ನಳಂದ ವಿಶ್ವವಿದ್ಯಾಲಯ ಭರಿಸುತ್ತದೆ. ನೀವೇ ಆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಿ. ಅಕಾಡೆಮಿ ಉತ್ತಮವಾಗಿ ಬೆಳೆಯಲಿ. ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ತಜ್ಞ ಎ.ಎಚ್. ಸಾಗರ್, ಮಹಾನಾಯಕ ಭೀಮ್‌ರಾವ್ ಫೌಂಡೇಷನ್ ರಾಜ್ಯಾಧ್ಯಕ್ಷ ಡಾ.ಜಿ. ನಾರಾಯಣಸ್ವಾಮಿ, ಜಿಲ್ಲಾಧ್ಯಕ್ಷ ಚಂದ್ರಲಿಂಗು, ರಾಜ್ಯ ಕಾರ್ಯದರ್ಶಿ ಸಿ.ಚೌಡಯ್ಯ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಲುವಯ್ಯ, ಕಸಾಪ ನಗರಾಧ್ಯಕ್ಷೆ ಸುಜಾತಕೃಷ್ಣ, ಚಂದ್ರಶೇಖರಯ್ಯ, ಸೀತಾರಾಮು, ಡಾ.ಶ್ರೀನಿವಾಸ್‌ಮೂರ್ತಿ, ವಿಶ್ವನಾಥ್ ಮತ್ತಿತರರಿದ್ದರು.

ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಹರಟೆ ಕಾರ್ಯಕ್ರಮ ಸಹಕಾರಿ

ಸಾಹಿತಿ ಸುಧಾ ಬರಗೂರು ಅಭಿಪ್ರಾಯ



ಕೆ.ಆರ್.ಪೇಟೆ, ಡಿ.17– ವಿದ್ಯಾರ್ಥಿಗಳು ಹಾಗೂ ಯುವಕರ ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಹರಟೆ ಕಾರ್ಯಕ್ರಮ ಸಹಕಾರಿ ಎಂದು ಜಾಣರ ಜಗಲಿ ಹರಟೆ ಖ್ಯಾತಿಯ ಸಾಹಿತಿ ಸುಧಾ ಬರಗೂರು ಅಭಿಪ್ರಾಯಪಟ್ಟರು.

ಪಟ್ಟಣದ ಬಿಜಿಎಸ್ ಶಾಲೆಯಲ್ಲಿ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರ 80ನೇ ಜಯಂತ್ಯುತ್ಸವ ಹಾಗೂ 11ನೇ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಿದ್ದ ಚಿಣ್ಣರ ಜಾಣರ ಜಗಲಿ ಕಾರ್ಯಕ್ರಮದ ನೇತೃತ್ವ ವಹಿಸಿ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಮಾತಿನ ಜುಗಲ್‌ಬಂದಿ ನಡೆಸಿದರು.

ವಿದ್ಯಾರ್ಥಿಗಳು ಪಠ್ಯಕ್ಕೆ ನೀಡುವಷ್ಟು ಮಹತ್ವವನ್ನು ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೂ ನೀಡಬೇಕು. ವಿದ್ಯಾರ್ಥಿಗಳ ಸಾಧನೆಗೆ ಅಂಕ ಗಳಿಕೆಯೊಂದೇ ಮಾನದಂಡವಲ್ಲ. ವಿದ್ಯಾರ್ಥಿಗಳು ಪಾಠ–ಪ್ರವಚನದ ಅಭ್ಯಾಸದೊಂದಿಗೆ ನಿಜ ಜೀವನದಲ್ಲಿಯೂ ಮುನ್ನಡೆದು ಸಾಧನೆ ಮಾಡಬೇಕಾದರೆ ಲೋಕ ಜ್ಞಾನ ಹಾಗೂ ವ್ಯವಹಾರ ಜ್ಞಾನದಲ್ಲಿಯೂ ತಿಳುವಳಿಕೆ ಹೊಂದಿರಬೇಕು. ಲೋಕಜ್ಞಾನ ಹೆಚ್ಚಿಸಿ ವ್ಯಕ್ತಿತ್ವ ಉತ್ತಮಗೊಳಿಸಿ, ಸಂಸ್ಕಾರಯುತ ಶಿಸ್ತುಬದ್ಧ ಜೀವನ ನಡೆಸಲು ಜಾಣರ ಜಗಲಿ ಕಾರ್ಯಕ್ರಮ ಉತ್ತಮ ವೇದಿಕೆಯಾಗಿದೆ. ನಮ್ಮ ಸಂಸ್ಕೃತಿ ಹಾಗೂ ಪರಂಪರೆ ಬಗ್ಗೆ ಬೆಳಕು ಚೆಲ್ಲಲು ನಾವು ವಿಚಾರವಂತರಾಗಬೇಕು. ವಿಚಾರವಂತಿಕೆ ಬೆಳೆಸಿಕೊಳ್ಳಲು ಶಿಕ್ಷಣ ಜ್ಞಾನದ ಬೆಳಕಿನ ಶಕ್ತಿಬೇಕು. ಈ ದಿಕ್ಕಿನಲ್ಲಿ ಸಮಾಜ ಸೇವಕ ಮಲ್ಲಿಕಾರ್ಜುನ ಅವರ ಪ್ರಾಯೋಜಕತ್ವದಲ್ಲಿ ಚಿಣ್ಣರ ಜಾಣರ ಜಗಲಿ ಕಾರ್ಯಕ್ರಮ ಆಯೋಜಿಸಿ ಕೃಷಿ ಚಟುವಟಿಕೆಗಳ ಮಹತ್ವದ ಬಗ್ಗೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಸಮಾಜ ಸೇವಕ, ಆರ್‌ಟಿಓ ಮಲ್ಲಿಕಾರ್ಜುನ್ ಮಾತನಾಡಿ, ಮಕ್ಕಳಲ್ಲಿ ಮಾತನಾಡುವ ಕಲೆ ಹೆಚ್ಚಿಸಲು, ಲೋಕ ಜ್ಞಾನದ ಬಗ್ಗೆ ಜಾಗೃತಿ ಮೂಡಿಸಲು ಚಿಣ್ಣರ ಜಾಣರ ಜಗಲಿ ಎಂಬ ವಿನೂತನ ಹರಟೆ ಕಾರ್ಯಕ್ರಮ ರೂಪಿಸಲಾಗಿದೆ. ಮಕ್ಕಳು ಉತ್ತಮ ಸಾಂಸ್ಕೃತಿಕ ಜೀವನಕ್ಕೆ ಆಧುನಿಕತೆಯ ಸ್ಪರ್ಶ ಬೇಕು ಎಂಬ ವಿಷಯದ ಬಗ್ಗೆ ಪರ ವಿರೋಧವಾಗಿ ಚರ್ಚೆ ಮಾಡಿದ್ದಾರೆ. ಇದನ್ನು ಗಮನಿಸಿದರೆ ಗ್ರಾಮೀಣ ಪ್ರದೇಶದಲ್ಲಿಯೂ ಪ್ರತಿಭೆಗಳಿಗೆ ಕೊರತೆ ಇಲ್ಲ ಎಂಬ ಸತ್ಯ ಅನಾವರಣವಾಗಿದೆ. ಮಕ್ಕಳು ಕಲಿಕೆಯ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳ ಕಲಿಕೆಗೂ ಒತ್ತು ನೀಡಿ ತಮ್ಮ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಹೇಮಗಿರಿ ಶಾಖಾ ಮಠದ ಕಾರ್ಯದರ್ಶಿ ಡಾ.ಜೆಎನ್. ರಾಮಕೃಷ್ಣೇಗೌಡ ಮಾತನಾಡಿದರು. ಕಾರ್ಯಕ್ರಮಕ್ಕೂ ಮುನ್ನಾ, ಇತ್ತೀಚೆಗೆ ನಿಧನರಾದ ನಟಿ ಲೀಲಾವತಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಸಂತಾಪ ಸೂಚಿಸಲಾಯಿತು. ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಮುಖಂಡರಾದ ಬಿ.ನಂಜಪ್ಪ, ಪಾಪೇಗೌಡ, ಎಸ್.ಸಿ.ವಿಜಯಕುಮಾರ್, ರಾಮಪ್ಪ, ಕೋಟೆ ಭೈರವೇಶ್ವರ ವ್ಯಾಪಾರಸ್ಥರ ಪತ್ತಿನ ಸಹಕಾರ ಸಂಘದ ಅಧ್ಯಕ್ಷೆ ಮಂಜುಳಾ, ತಾಲೂಕು ಕಸಾಪ ಮಾಜಿ ಅಧ್ಯಕ್ಷ ಹರಿಚರಣತಿಲಕ್, ಕೆ.ಆರ್.ನೀಲಕಂಠ, ಗ್ರಾಪಂ ಸದಸ್ಯ ಶ್ರೀನಿವಾಸ್, ರೈತ ಮುಖಂಡ ಶಂಕರ್, ತಾಲೂಕು ಔಷಧಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಬಿ.ಜಿ.ಚನ್ನೇಗೌಡ, ರಾಮದಾಸ್, ಸಂಪಗಿ, ದಲಿತ ಮುಖಂಡ ರಂಗಪ್ಪ ಸೇರಿದಂತೆ ಪೋಷಕರು ಹಾಗೂ ಸಾರ್ವಜನಿಕರಿದ್ದರು.

ಗುರುವಿಲಾಸ್ ಕೊಲೆ ಪ್ರಕರಣ: ಇಬ್ಬರು ಆರೋಪಿಗಳ ಬಂಧನ

ಮಂಡ್ಯ, ಡಿ.17– ನಗರದ ಫ್ಯಾಕ್ಟರಿ ವೃತ್ತದ ಬಾರ್ ಅಂಡ್ ರೆಸ್ಟೋರೆಂಟ್ ಬಳಿ ಇತ್ತೀಚೆಗೆ ನಡೆದ ಯುವಕ ಗುರುವಿಲಾಸ್ ಕೊಲೆ ಪ್ರಕರಣ ಬೇಧಿಸಿರುವ ಮಂಡ್ಯ ಪೂರ್ವ ಠಾಣೆ ಪೊಲೀಸರು ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮದ್ದೂರು ತಾಲೂಕಿನ ಕಡಿಲುವಾಗಿಲು ಗ್ರಾಮದ ಶಿವಕುಮಾರ್ ಹಾಗೂ ಮಂಡ್ಯ ನಗರದ ಗುತ್ತಲು ಕಾಲೋನಿಯ ರಾಘವೇಂದ್ರ ಬಂಧಿತ ಆರೋಪಿಗಳು.

ವಿವರ: ಡಿ.14ರಂದು ಸಂಜೆ ಮಂಡ್ಯ ನಗರದ ಫ್ಯಾಕ್ಟರಿ ವೃತ್ತದಲ್ಲಿರುವ ಸಿದ್ಧಾರ್ಥ ಕೋಸ್ಟಲ್ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಆರೋಪಿಗಳಾದ ಶಿವಕುಮಾರ್ ಹಾಗೂ ರಾಘವೇಂದ್ರ ಕುಡಿಯುತ್ತಾ ಕುಳಿತ್ತಿದ್ದರು. ಈ ವೇಳೆ ಅಲ್ಲಿಗೆ ಆಗಮಿಸಿದ ಗುರು ವಿಲಾಸ್‌ನನ್ನು ಶಿವಕುಮಾರ್ ತಮ್ಮ ಜೊತೆಯಲ್ಲೇ ಕುಡಿಯುವಂತೆ ಕರೆದಿದ್ದ. ನಂತರ ಮೂವರು ಒಟ್ಟಿಗೆ ಕುಡಿಯುತ್ತಿದ್ದರು. ಈ ವೇಳೆ ಯಾವುದೋ ವಿಚಾರಕ್ಕೆ ಸಂಬಂಧಿಸಿದಂತೆ ಗುರುವಿಲಾಸ್ ಹಾಗೂ ಶಿವಕುಮಾರ್ ನಡುವೆ ಜಗಳ ಆರಂಭವಾಗಿದ್ದು, ಗುರುವಿಲಾಸ್, ಶಿವಕುಮಾರ್ ಹಾಗೂ ರಾಘವೇಂದ್ರನನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದ. ಈ ದೃಶ್ಯವನ್ನು ಬಾರಿನಲ್ಲಿ ಎಲ್ಲರೂ ನೋಡುತ್ತಿದ್ದರಿಂದ ಶಿವಕುಮಾರ್‌ಗೆ ಅವಮಾನವಾಗಿತ್ತು. ಇದರಿಂದ ಕುಪಿತಗೊಂಡ ಶಿವಕುಮಾರ್ ಮತ್ತು ರಾಘವೇಂದ್ರ ಇಬ್ಬರು ಸೇರಿ, ಗುರುವಿಲಾಸ್‌ನನ್ನು ಕೊಲೆ ಮಾಡುವ ನಿರ್ಧಾರಕ್ಕೆ ಬಂದು, ಸಮೀಪದ ಅಂಗಡಿಯೊಂದಕ್ಕೆ ತೆರಳಿ ಚಾಕುವನ್ನು ಖರೀದಿಸಿ ಗುರುವಿಲಾಸ್ ಕತ್ತು ಕೊಯ್ದು ಕೊಲೆ ಮಾಡಿ ಪರಾರಿಯಾಗಿದ್ದರು. ಈ ಸಂಬಂಧ ಮಂಡ್ಯ ಪೂರ್ವ ಠಾಣೆಯಲ್ಲಿ ದೂರು ದಾಖಲಾಗಿತ್ತು. ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಂಡಿದ್ದ ಪೊಲೀಸರು ಮೈಸೂರಿನಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಸಿಪಿಐ ಜಾಯ್ ಅಂಥೋಣಿ, ಎಸ್‌ಐ ಅಯ್ಯನಗೌಡ, ರವಿಕುಮಾರ್, ಮಹೇಶ್, ಎಎಸ್‌ಐ ಲಿಂಗರಾಜು, ಸಿಬ್ಬಂದಿಯವರಾದ ಲೋಕೇಶ್, ಮಹೇಶ್, ಆನಂದ್, ಶ್ರೀನಿವಾಸ, ಮಂಜುನಾಥ, ಅನಿಲ್, ಮಂಜು, ಲೋಕೇಶ್ ಮತ್ತು ರವಿಕಿರಣ್ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಶ್ಲಾಘಿಸಿ, ಪ್ರಶಂಸಿಸಿದ್ದಾರೆ.

ಸುತ್ತೂರು ಶ್ರೀ ಕ್ಷೇತ್ರದಲ್ಲಿ ಡಾ. ರಾಜೇಂದ್ರ ಶ್ರೀಗಳವರ ಪುಣ್ಯಾರಾಧನೆ, ಸುತ್ತೂರು ಜಾತ್ರಾ ಮಹೋತ್ಸವ ಸಭೆ





ಸುತ್ತೂರು, ಡಿ.17– ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 37ನೆಯ ಪುಣ್ಯಾರಾಧನೆಯ ಅಂಗವಾಗಿ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ ಹಾಗೂ ರಾಜೇಂದ್ರ ಶ್ರೀಗಳವರ ಗದ್ದುಗೆಗಳ ಬಳಿ ರುದ್ರಾಭಿಷೇಕ, ಅಷ್ಟೋತ್ತರ ಪ್ರಾಕಾರೋತ್ಸವಗಳು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿದವು.

2024ರ ಫೆಬ್ರವರಿ 6 ರಿಂದ 11 ರವರೆಗೆ ಶ್ರೀ ಕ್ಷೇತ್ರದಲ್ಲಿ ಜರುಗುವ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ದಾಸೋಹ, ಸಾಂಸ್ಕೃತಿಕ ಕಾರ್ಯಕ್ರಮಗಳು, ಸಭಾಗೃಹ ಎಲ್ಲ ಮಂಟಪಗಳ ಭೂಮಿ ಪೂಜೆಯನ್ನು ನೆರವೇರಿಸಲಾಯಿತು.

ಜಾತ್ರಾ ಪೂರ್ವಭಾವಿ ಸಭೆ ವಿವಿಧ ಸಮಿತಿಗಳ ಸಂಚಾಲಕರು, ಸುತ್ತಮುತ್ತಲ ಗ್ರಾಮಗಳ ಮುಖಂಡರು ಹಾಗೂ ಗ್ರಾಮಸ್ಥರ ಉಪಸ್ಥಿತಿಯಲ್ಲಿ ಜಾತ್ರಾಮಹೋತ್ಸವದ ಪೂರ್ವಭಾವಿ ಸಮಾಲೋಚನಾ ಸಭೆ ನಡೆಯಿತು. ಈ ಸಂದರ್ಭದಲ್ಲಿ ವಾಟಾಳು, ಬೆಟ್ಟದಪುರ, ಹೊಸಮಠ, ಚಿಕ್ಕತುಪ್ಪೂರು, ದಂಡಿಕೆರೆ, ಹುಲಿಯೂರುದುರ್ಗ, ಮಾದಹಳ್ಳಿ, ಕುದೇರು, ಚುಂಚನಹಳ್ಳಿ, ನವಿಲೂರು, ಕುದೇರುಮಠ, ಕುಂದೂರು, ಮಾಡ್ರಳ್ಳಿ, ಮಾದಾಪುರ, ಹರವೆ, ಸಾಲೂರುಮಠ, ಪಡುಗೂರು, ಕಾಮಗೆರೆ, ನೀಲಕಂಠಸ್ವಾಮಿಮಠ, ನಂಜನಗೂಡು, ರಾಗಿಬೊಮ್ಮನಹಳ್ಳಿ, ಕಸುವಿನಹಳ್ಳಿ, ಗೌಡಳ್ಳಿ, ಕುರುಬೂರು, ಮುಡುಕುನಪುರ, ನರಗ್ಯಾತನಹಳ್ಳಿ, ಚಂದ್ರವನ ಆಶ್ರಮದ ಶ್ರೀಗಳುಗಳು ಹರಗುರು ಚರಮೂರ್ತಿಗಳು, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧಿಕಾರಿಗಳು ಹಾಗೂ ಭಕ್ತಾದಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ 2024ನೇ ವರ್ಷದ ಗೋಡೆ ಮತ್ತು ಪಾಕೆಟ್ ಕ್ಯಾಲೆಂಡರ್‌ಗಳನ್ನು ಬಿಡುಗಡೆಗೊಳಿಸಲಾಯಿತು.

ಪ್ರೊ ಸುಬ್ಬಪ್ಪನವರು ಸ್ವಾಗತಿಸಿದರು. ಸಿ.ವಿ. ಬಸವರಾಜು ವಂದನೆ ಸಲ್ಲಿಸಿದರು. ಹೆಚ್.ಎಲ್.ಪ್ರಕಾಶ್ ಕಾರ್ಯಕ್ರಮ ನಿರೂಪಿಸಿದರು. ಸುತ್ತೂರು ಶಾಲೆಯ ಮಕ್ಕಳು ಪ್ರಾರ್ಥನೆ ಸಲ್ಲಿಸಿದರು.

ಸರಿಯಾಗಿ ಚಿಕಿತ್ಸೆ ಮೂಲಕ ಕುಷ್ಠ ರೋಗ ಗುಣಪಡಿಸಬಹುದು



ತಿ.ನರಸೀಪುರ.ಡಿ.17– ಸ್ಪರ್ಶದ ಅನುಭವವಾಗದ ತಿಳಿ ಬಿಳಿ, ತಾಮ್ರ ಬಣ್ಣದ ಮಚ್ಚೆಯೇ ಕುಷ್ಠ ರೋಗವಾಗಿರಬಹುದಾಗಿದ್ದು, ದೇಹದ ಮೇಲೆ ಯಾವುದೇ ರೀತಿಯ ಮಚ್ಚೆಗಳು ಕಾಣಿಸಿದಲ್ಲಿ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತೆರಳಿ ಚಿಕಿತ್ಸೆ ಪಡೆಯಬೇಕು ಎಂದು ಜಿಲ್ಲಾ ಕುಷ್ಠ ರೋಗ ನಿರ್ಮೂಲನಾಧಿಕಾರಿ ಡಾ.ಬೃಂದಾ ಸಲಹೆ ನೀಡಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಸಭಾಂಗಣದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಜಿಲ್ಲಾ ಕುಷ್ಠರೋಗ ನಿರ್ಮೂಲನಾ ವಿಭಾಗ ಸಹಯೋಗದಡಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಕುಷ್ಠರೋಗ ಭಾದಿತರಿಗೆ ಉಚಿತ ಔಷಧ ಹಾಗು ಮತ್ತಿತರೆ ಪರಿಕರಗಳನ್ನು ವಿತರಿಸಿ ಅವರು ಮಾತನಾಡಿದರು.

ಕುಷ್ಠರೋಗವು ಮೈಕ್ರೋ ಬ್ಯಾಕ್ಟೀರಿಯಾ ಲೇಪ್ರೇ ಎಂಬ ಬ್ಯಾಕ್ಟೀರಿಯಾದಿಂದ ಹರಡುವ ಸಾಂಕ್ರಾಮಿಕ ರೋಗವಾಗಿದೆ. ಇದನ್ನು ಸಂಪೂರ್ಣವಾಗಿ ಸರಿಯಾಗಿ ಚಿಕಿತ್ಸೆಯ ಮೂಲಕ ಗುಣಪಡಿಸಬಹುದಾಗಿದ್ದು, ಚಿಕಿತ್ಸೆ ಪಡೆಯದ ರೋಗಿಗಳು ಕೆಮ್ಮುವ ಮೂಲಕ ಹರಡುವ ಉಗುಳಿನಿಂದ ಇತರರಿಗೂ ರೋಗ ಹರಡುವ ಸಾಧ್ಯತೆಯೂ ಹೆಚ್ಚಾಗಿರುತ್ತದೆ. ಈ ರೋಗವು ದೀರ್ಘಕಾಲದ ಸಾಂಕ್ರಾಮಿಕ ರೋಗವಾಗಿದ್ದು, ಇದು ಪ್ರಧಾನವಾಗಿ ಚರ್ಮ ಮತ್ತು ಬಾಹ್ಯ ನರಗಳ ಮೇಲೆ ಪರಿಣಾಮ ಬೀರುತ್ತದೆ. ಚಿಕಿತ್ಸೆ ನೀಡದೆ ಬಿಟ್ಟರೆ, ರೋಗವು ಪ್ರಗತಿಪರ ಮತ್ತು ಶಾಶ್ವತ ಅಂಗವೈಕಲ್ಯಕ್ಕೆ ಕಾರಣವಾಗಬಹುದು ಎಂದು ಅವರು ವಿವರಿಸಿದರು.

ಕುಷ್ಠ ರೋಗವನ್ನು ಆರಂಭದಲ್ಲೇ ಪತ್ತೆಹಚ್ಚಿ ಚಿಕಿತ್ಸೆ ನೀಡಿದರೆ ವಿಕಲಚೇತನರಾಗುವ ಸಾಧ್ಯತೆಯನ್ನು ತಡೆಗಟ್ಟಲು ಸಾಧ್ಯವಿದೆ. ಇದೇ ಸಂದರ್ಭ ಯಾವುದೇ ಹಂತದಲ್ಲೂ ಪತ್ತೆಯಾದರೂ ಚಿಕಿತ್ಸೆಯಿಂದ ಅದನ್ನು ಪೂರ್ಣವಾಗಿಯೂ ಗುಣಪಡಿಸಲು ಸಾಧ್ಯವಿದೆ ಎಂದು ಅವರು ತಿಳಿಸಿದರು. ಇದೇ ವೇಳೆ ಕುಷ್ಠ ರೋಗ ಬಾಧಿತರಿಗೆ ಅವರು ಬಳಸಬಹುದಾದ ಪಾದರಕ್ಷೆ, ಔಷಧ ಮತ್ತಿತರೆ ಪರಿಕರಗಳನ್ನು ವಿತರಿಸಲಾಯಿತು.

ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ಎಂ.ಕೆ.ರವಿಕುಮಾರ್, ಆಡಳಿತಾಧಿಕಾರಿ ಡಾ.ಜಗನ್ನಾಥ್, ಫಿಜಿಯೋಥೆರಪಿ ವಿಭಾಗದ ಶೃತಿ, ಚರ್ಮರೋಗ ತಜ್ಞ ಪದ್ಮರಾಜು, ಡಾ.ರಾಮಚಂದ್ರ, ಆರೋಗ್ಯ ನಿರೀಕ್ಷಣಾಧಿಕಾರಿ ರಾಜಣ್ಣ, ಸುಮಂತ್ ಸೇರಿದಂತೆ ಆಶಾ ಹಾಗು ಅಂಗನವಾಡಿ ಕಾರ್ಯ ಕರ್ತರು ಹಾಜರಿದ್ದರು.

ಮೈಸೂರು ಮಿತ್ರ ಸೋಮವಾರ 18 ಡಿಸೆಂಬರ್ 2023

ಇ-ಬುಕ್ ಮಾದರಿಯಲ್ಲಿ ಕೃತಿಗಳು ಹೊರಬರಲಿ

● ಶಾಸಕ ಮಂತರ್‌ಗೌಡ ಅಭಿಮತ ● ಕೂಡ್ಲೂರು ಹಳ್ಳಿಮನೆಯಲ್ಲಿ ಹುತ್ತರಿ ಕವಿಗೋಷ್ಠಿ

ಕಾರಣೀಭೂತರಾದವರನ್ನು ಸ್ಮರಿಸಬೇಕು

ಇತಿಹಾಸವನ್ನು ಮುಂದಿನ ಪೀಳಿಗೆಗೆ ಪಸರಿಸುವ ಕಾರ್ಯ ಆಗಬೇಕಿದೆ. ಸುವರ್ಣ ಕರ್ನಾಟಕ ಸಂಭ್ರಮಕ್ಕೆ ಕಾರಣೀಭೂತರಾದವರನ್ನು ಸ್ಮರಿಸುವ ಅಗತ್ಯವಿದೆ. ಈ ಸಂಬಂಧ ಅಭಿವೃದ್ಧಿ ಹಾದಿಯ ಇತಿಹಾಸದ ಗ್ರಂಥ ರಚಿಸಿ ಲೋಕಾರ್ಪಣೆಗೊಳಿಸಲಾಗುವುದು. ಸಾಹಿತಿಗಳು, ಹಾಡುಗಾರರು, ಕೃತಿಕಾರರನ್ನು ಗುರುತಿಸಿ ಪ್ರೋತ್ಸಾಹಿಸುವ ಅಗತ್ಯವಿದೆ ಎಂದು ಕನ್ನಡ ಸಿರಿ ಸ್ನೇಹ ಬಳಗದ ಲೋಕೇಶ್ ಸಾಗರ್ ತಿಳಿಸಿದರು. ಕಿಗ್ಗಾಲು ಗಿರೀಶ್ ರಚಿತ ನಗುವೆಂಗ ಟಾನಿಕ್ ಕೃತಿ ಬಿಡುಗಡೆ ಮಾಡಿದ ವಿ.ಪಿ.ಶಶಿಧರ್ ಮಾತನಾಡಿ, ಎಲ್ಲರನ್ನೂ ಒಗ್ಗೂಡಿಸಿ, ಮನುಷ್ಯ ಪ್ರೀತಿಯನ್ನು ಸಮಾಜಕ್ಕೆ ಉಣಬಡಿಸುವ ಅಗತ್ಯತೆ ಜಗತ್ತಿಗೆ ಅನಿವಾರ್ಯವಾಗಿದೆ. ನಮ್ಮತನ ಕಾಪಾಡಿ ಇತರನ್ನು ಗೌರವಿಸುವ ಕೆಲಸ ಇಂತಹ ಕಾರ್ಯಕ್ರಮಗಳ ಮೂಲಕ ನೆರವೇರಬೇಕಿದೆ ಎಂದರು.




ಕುಶಾಲನಗರ, ಡಿ.17–ಸಾಹಿತಿಗಳ ಕೃತಿಗಳನ್ನು ಇ-ಬುಕ್ ಮಾದರಿಯಲ್ಲಿ ಹೊರತರುವುದರಿಂದ ಮೊಬೈಲ್, ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಲಭ್ಯವಾಗಲು ಸಹಕಾರಿಯಾಗಲಿದೆ ಎಂದು ಶಾಸಕ ಡಾ.ಮಂತರ್‌ಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ಕೂಡ್ಲೂರು ಹಳ್ಳಿಮನೆ ಆವರಣದಲ್ಲಿ ಭಾನುವಾರ ಕರ್ನಾಟಕ ಸುವರ್ಣ ಸಂಭ್ರಮದ ಅಂಗವಾಗಿ ಕನ್ನಡ ಸಿರಿ ಸ್ನೇಹ ಬಳಗ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಹುತ್ತರಿ ಕವಿಗೋಷ್ಠಿ, ವಿಚಾರಗೋಷ್ಠಿ ಹಾಗೂ ಕೃತಿ ಬಿಡುಗಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸುವರ್ಣ ಕರ್ನಾಟಕ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಹಮ್ಮಿಕೊಂಡಿರುವ ಈ ಕಾರ್ಯಕ್ರಮ ಅತ್ಯಂತ ಮಹತ್ವಪೂರ್ಣವಾಗಿದೆ. ನದಿ, ಪರಿಸರ ಸಂರಕ್ಷಣೆಗೆ ಪೂರಕವಾದ ಸಾಹಿತ್ಯಗಳು ಇನ್ನಷ್ಟು ಹೊರಹೊಮ್ಮಬೇಕಿದೆ ಎಂದರು. ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದವರನ್ನು ಮರೆಯಬಾರದು. ಈ ಹಿನ್ನೆಲೆಯಲ್ಲಿ ಕುಶಾಲನಗರದಿಂದ ಮುಖ್ಯಮಂತ್ರಿಯಾಗಿ ಆಗಿದ್ದ ಗುಂಡೂರಾವ್ ಅವರ ಹೆಸರಿನಲ್ಲಿ ಕೊಡಗಿಗೆ ಮಂಜೂರಾಗಿರುವ ಏರ್‌ಸ್ಟ್ರಿಪ್ ಉದ್ಘಾಟಿಸಲು ಚಿಂತನೆ ಹೊಂದಲಾಗಿದೆ. ಸಾಹಿತಿಗಳ ಕೃತಿಗಳನ್ನು ಇ-ಬುಕ್ ಮಾದರಿಯಲ್ಲಿ ಹೊರತರುವುದರಿಂದ ಮೊಬೈಲ್, ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಲಭ್ಯವಾಗಲು ಸಹಕಾರಿಯಾಗಲಿದೆ. ಮುಂದಿನ ದಿನಗಳಲ್ಲಿ ಇಂತಹ ಪ್ರಯತ್ನಗಳು ನಡೆಯಲಿ. ಇದಕ್ಕೆ ಅಗತ್ಯ ಸಹಕಾರ ಒದಗಿಸುವುದಾಗಿ ತಿಳಿಸಿದರು.

ಕೊಡಗಿನ ಹಬ್ಬಗಳಲ್ಲಿ ಕೃಷಿಯೊಂದಿಗಿನ ಕಲೆಗಳು ಕುರಿತು ವಿಚಾರ ಮಂಡಿಸಿದ ಹಿರಿಯ ಪತ್ರಕರ್ತ ಐತಿಚಂಡ ರಮೇಶ್ ಉತ್ತಪ್ಪ, ಕೊಡಗಿನ ಸಂಸ್ಕೃತಿ, ಆಚಾರ ವಿಚಾರ, ಕಲೆಗಳ ಹಿಂದೆ ಇರುವ ವಿಜ್ಞಾನವನ್ನು ನಾವು ಅರಿತುಕೊಳ್ಳುವ ಅಗತ್ಯವಿದೆ. ಕೊಡಗಿನ ಕೃಷಿಯಲ್ಲಿ ಜಾನಪದದ ಒಳನೋಟ ಇದೆ. ಕೊಡಗಿನ ಪದ್ಧತಿ, ನಡೆ, ಕಲೆಗಳಲ್ಲಿ ಪ್ರಕೃತಿಯ ಪಾಠ ಅಡಗಿದೆ. ಕಲೆಯೆಂದರೆ ಕೇವಲ ಪ್ರದರ್ಶನಕ್ಕೆ ಸೀಮಿತವಾದುದಲ್ಲ. ಕೃಷಿ ಪದ್ಧತಿ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹಿರಿಯರು ವೈಜ್ಞಾನಿಕತೆ, ಪ್ರಕೃತಿಯ ಪಾಠ ಕಟ್ಟಿಕೊಟ್ಟಿದ್ದಾರೆ. ಅದನ್ನು ಇಂದು ಮರೆತಿರುವ ಕಾರಣ ದುರಂತಗಳು ಸಂಭವಿಸುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಮಡಿಕೇರಿ ಮಹಿಳಾ ಕಾಲೇಜು ಪ್ರಾಧ್ಯಾಪಕಿ ಕೋರನ ಸರಸ್ವತಿ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕವಿಗಳು ಕವನ ವಾಚಿಸಿದರು. ಕಾಂಗ್ರೆಸ್ ಮುಖಂಡ, ಉದ್ಯಮಿ ಕೆ.ಕೆ. ಮಂಜುನಾಥ್ ಕುಮಾರ್, ಬಳಗದ ಪ್ರಮುಖರಾದ ಫಿಲಿಪ್ ವಾಸ್, ಸಿ.ಟಿ.ಸೋಮಶೇಖರ್, ಸಾಹಿತಿಗಳಾದ ಕಿಗ್ಗಾಲು ಗಿರೀಶ್, ಮಾಲಾದೇವಿ, ಜಗದೀಶ್ ಜೋಡುಬೀಟಿ, ಸಂಗೀತ ರವಿರಾಜ್, ರಾಣಿ ರವೀಂದ್ರ ಟೋಮಿ ಥಾಮಸ್, ಕುಡೆಕಲ್ ಸಂತೋಷ್, ಎಂ.ಡಿ.ರಂಗಸ್ವಾಮಿ ಮತ್ತಿತರರು ಪಾಲ್ಗೊಂಡಿದ್ದರು.

ಕೇರಳದಲ್ಲಿ ಕೊರೊನಾ ರೂಪಾಂತರಿ: ಕೊಡಗಿನಲ್ಲಿ ಮುಂಜಾಗ್ರತಾ ಕ್ರಮ



ಮಡಿಕೇರಿ, ಡಿ.17– ಕೇರಳದಲ್ಲಿ ಕೊರೊನಾ ರೂಪಾಂತರಿ ಜೆಎನ್1 ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಗಡಿ ಜಿಲ್ಲೆ ಕೊಡಗಿನಲ್ಲಿ ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು ಜಿಲ್ಲಾಡಳಿತಕ್ಕೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳೊಂದಿಗೆ ದೂರವಾಣಿ ಮೂಲಕ ಸಮಾಲೋಚಿಸಿದ ಸಚಿವರು, ಪ್ರಸ್ತುತ ಪರಿಸ್ಥಿತಿ ಬಗ್ಗೆ ಸಮಗ್ರ ಮಾಹಿತಿ ಪಡೆದರು. ಕೊಡಗು ಜಿಲ್ಲೆಗೆ ಗಡಿ ಹೊಂದಿಕೊಂಡಿರುವ ಕೇರಳದಲ್ಲಿ ರೂಪಾಂತರಿ ಕೊರೊನಾ ಪತ್ತೆಯಾಗಿರುವ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಜಿಲ್ಲೆಯ ಆರೋಗ್ಯ ಇಲಾಖೆಯು ಸನ್ನದ್ಧವಾಗಿದ್ದು, ಎಲ್ಲಾ ಪರಿಸ್ಥಿತಿಗಳನ್ನು ನಿಭಾಯಿಸಲು ಸಜ್ಜಾಗಿರ ಬೇಕು. ಜನಸಾಮಾನ್ಯರಿಗೆ ಯಾವುದೇ ತೊಂದರೆ ಆಗದಂತೆ ಕ್ರಮ ಕೈಗೊಳ್ಳಬೇಕು. ಕೊರೊನಾ ಪ್ರಕರಣಗಳು ಕಂಡುಬಂದಲ್ಲಿ ನಿಯಮಾನುಸಾರ ಚಿಕಿತ್ಸೆ ಹಾಗೂ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ತಿಳಿಸಿದರು.

ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಜಿಲ್ಲೆಗೆ ಹೆಚ್ಚಿನ ಪ್ರವಾಸಿಗರು ಬರುವ ನಿರೀಕ್ಷೆಯಿದೆ. ಈ ಹಿನ್ನೆಲೆಯಲ್ಲಿ ಈಗಿನಿಂದಲೇ ಅಗತ್ಯ ವ್ಯವಸ್ಥೆ ಮತ್ತು ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿಗೆ ಸಚಿವರು ಸೂಚನೆ ನೀಡಿದರು.

ಇಂದು ಕೊಡಗಿಗೆ ಸಚಿವ ದಿನೇಶ್ ಗುಂಡೂರಾವ್

ಮಡಿಕೇರಿ ಡಿ.17– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಡಿ.18ರಂದು ಕೊಡಗು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದು, ಸಚಿವರು ಅಂದು ಬೆಳಗ್ಗೆ 10.30ಕ್ಕೆ ಕುಶಾಲನಗರದ ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ನಂತರ ಮಧ್ಯಾಹ್ನ 12 ಗಂಟೆಗೆ ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಕೊಡಗು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಂಡು ಹೊಡೆಯುವ ಸ್ಪರ್ಧೆ ವಿಜೇತರಿಗೆ ಬಹುಮಾನ



ಗೋಣಿಕೊಪ್ಪ, ಡಿ.17–ಐರನ್ ಸೈಟ್ ಶೂಟರ್ಸ್ ಅಸೋಸಿಯೇಷನ್ ವತಿಯಿಂದ ಮಾಯಮುಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ಆಯೋಜಿಸಿದ್ದ ಗುಂಡು ಹೊಡೆಯುವ ಸ್ಪರ್ಧೆಯಲ್ಲಿ 375ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿ ಗಮನ ಸೆಳೆದರು.

ತೆಂಗಿನಕಾಯಿ ಹಾಗೂ ಮೊಟ್ಟೆಗೆ ಗುಂಡು ಹೊಡೆಯುವ ಸ್ಪರ್ಧೆ ನಡೆಯಿತು. 22 ಕೋವಿಯಲ್ಲಿ ತೆಂಗಿನಕಾಯಿಗೆ ಗುಂಡು ಹೊಡೆಯುವ ವಿಭಾಗದಲ್ಲಿ ಪುತ್ತರೀರ ನಂಜಪ್ಪ (ಪ್ರಥಮ), ಬಡುವಂಡ ಶ್ಲೋಕ್ ಸುಬ್ಬಯ್ಯ (ದ್ವಿತೀಯ), ಬಾಚಮಡ ಲವ (ತೃತೀಯ). 12 ಬೋರ್ ವಿಭಾಗದಲ್ಲಿ ಬಡುವಂಡ ದೇವಯ್ಯ (ಪ್ರ), ಕೆಚ್ಚೀರ ಶಬ್ದ್ ಬೆಳ್ಯಪ್ಪ (ದ್ವಿ), ಕೋಣಿಯಂಡ ಚಿಣ್ಣಪ್ಪ (ತೃ). 22 ಕೋವಿಯಲ್ಲಿ ಮೊಟ್ಟೆಗೆ ಗುಂಡು ಹೊಡೆಯುವ ವಿಭಾಗದಲ್ಲಿ ಕಳ್ಳಿಚಂಡ ವರುಣ್ (ಪ್ರ), ನೆಲ್ಲೀರ ಧನು (ದ್ವಿ), ಕೇಲೇಟೀರ ಪವಿತ್ (ತೃ) ಸ್ಥಾನ ಪಡೆದರು.

ಮಾಜಿ ಎಂಎಲ್‌ಸಿ ಚೆಪ್ಪುಡೀರ ಅರುಣ್ ಮಾಚಯ್ಯ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ತೀತೀರ ಧರ್ಮಜ ಉತ್ತಪ್ಪ, ಹಿರಿಯ ವಕೀಲ ಮುಕ್ಕಾಟೀರ ಆರ್.ಹರೀಶ್, ಕಾವೇರಿ ಅಸೋಸಿಯೇಷನ್ ಅಧ್ಯಕ್ಷ ಕಾಳಪಂಡ ಟಿಪ್ಪು ಬಿದ್ದಪ್ಪ, ಮಾಜಿ ಅಧ್ಯಕ್ಷ ಕಾಳಪಂಡ ಸಿ.ಸುದೀರ್, ಕೊಡವ ಪೊಮ್ಮಕ್ಕಡ ಕೂಟ ಅಧ್ಯಕ್ಷೆ ಕೊಟ್ಟಂಗಡ ವಿಜು ದೇವಯ್ಯ, ದಾನಿ ಚೆಪ್ಪುಡೀರ ಕಿಟ್ಟು ಅಯ್ಯಪ್ಪ, ಮಾಜಿ ಅಧ್ಯಕ್ಷ ಎಸ್.ಎಸ್.ಸುರೇಶ್, ಕಂಗಳತ್ನಾಡ್ ಅಮ್ಮಕೊಡವ ಸಮಾಜದ ಅಧ್ಯಕ್ಷೆ ಬಾನಂಡ ಆಶಾ ಸುದನ್, ಕ್ರೀಡಾಕೂಟ ಸಂಚಾಲಕ ಆಪಟ್ಟೀರ ಟಾಟು ಮೊಣ್ಣಪ್ಪ, ಯೋಜನಾ ನಿರ್ದೇಶಕ ಅಪಟ್ಟೀರ ಆರ್. ಅಯ್ಯಪ್ಪ ಬಹುಮಾನ ವಿತರಿಸಿದರು.

ಸಂಸದ ಪ್ರತಾಪ್ ಸಿಂಹ ರಾಜೀನಾಮೆಗೆ ಕಾಂಗ್ರೆಸ್ ಆಗ್ರಹ

ಪೊನ್ನಂಪೇಟೆ, ಡಿ.17– ಸಂಸತ್ ಭವನಕ್ಕೆ ದಾಳಿ ನಡೆಸಿದ ಯುವಕರಿಗೆ ಸಂಸದ ಪ್ರತಾಪ್ ಸಿಂಹ ಪಾಸ್ ನೀಡಿರುವುದು ಅತ್ಯಂತ ಕಳವಳಕಾರಿ ವಿಚಾರವಾಗಿದ್ದು, ಆದ್ದರಿಂದ ಈ ಘಟನೆಯ ನೈತಿಕ ಹೊಣೆ ಹೊತ್ತು ಪ್ರತಾಪ್ ಸಿಂಹ ರಾಜೀನಾಮೆ ನೀಡಬೇಕು ಎಂದು ಕೊಡಗು ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಪಿ.ಎ.ಹನೀಫ್ ಒತ್ತಾಯಿಸಿದರು. ಸಂಸದರಾಗಿ ಅಪರಿಚಿತರಿಗೆ ಪಾಸ್‌ಗಳನ್ನು ನೀಡಲು ಹೇಗೆ ಸಾಧ್ಯ? ಜವಾಬ್ದಾರಿಯುತ ವ್ಯಕ್ತಿಗಳು ಬೇಜವಾಬ್ದಾರಿಯಿಂದ ನಡೆಸುವ ಅನಾಹುತ ಮತ್ತು ಅದಕ್ಕೆ ಕಾರಣವಾಗುವುದು ಕೂಡಾ ಕಾನೂನಿನಲ್ಲಿ ಶಿಕ್ಷಾರ್ಹ ಅಪರಾಧ. ಈ ಹಿನ್ನೆಲೆಯಲ್ಲಿ ಘಟನೆ ನಡೆದ ದಿನದಂದೇ ಪ್ರತಾಪ್ ಸಿಂಹ ಅವರನ್ನು ಸಂಸತ್ ಸದಸ್ಯ ಸ್ಥಾನದಿಂದ ಉಚ್ಚಾಟನೆ ಮಾಡಬೇಕಿತ್ತು ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿಯಿಂದ ಸಾಕಷ್ಟು ಸೇವಾ ಕಾರ್ಯ



ವಿರಾಜಪೇಟೆ, ಡಿ.17– ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಸಮುದಾಯ ಅಭಿವೃದ್ಧಿ, ನಮ್ಮೂರು ನಮ್ಮ ಕೆರೆ, ವಿಪತ್ತು ನಿರ್ವಹಣೆ ಮತ್ತು ವಿಮಾ ಕಾರ್ಯಕ್ರಮ ಸೇರಿದಂತೆ ಸಾಕಷ್ಟು ಸೇವಾ ಕಾರ್ಯಗಳನ್ನು ನಡೆಸಲಾಗುತ್ತಿದೆ ಎಂದು ಯೋಜನೆಯ ಕೊಡಗು ಜಿಲ್ಲಾ ನಿರ್ದೇಶಕಿ ಲೀಲಾವತಿ ತಿಳಿಸಿದರು.

ಸಮೀಪದ ತೋಮರ ಸಮುದಾಯ ಭವನದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಬಿ.ಸಿ.ಟ್ರಸ್ಟ್, ವಿರಾಜಪೇಟೆ ತಾಲೂಕು ಮತ್ತು ವಲಯ, ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜಾ ಸಮಿತಿ ಹಾಗೂ ಕೆದಮುಳ್ಳೂರು ಪ್ರಗತಿ ಬಂಧು ಸ್ವಸಹಾಯ ಸಂಘಗಳ ಒಕ್ಕೂಟದ ಆಶ್ರಯದಲ್ಲಿ ನಡೆದ ಧಾರ್ಮಿಕ ಸಮಾರಂಭದಲ್ಲಿ ಮಾತನಾಡಿದ ಅವರು, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಶಿಷ್ಯವೇತನ, ಸುಜ್ಞಾನ ನಿಧಿ ಮತ್ತು ಜ್ಞಾನ ವಿಕಾಸ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ವಿರಾಜಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಕೆ.ಬಸವರಾಜು ಮಾತನಾಡಿ, ನಮ್ಮ ಸಂಸ್ಕೃತಿ, ಧಾರ್ಮಿಕ ಆಚರಣೆ ಮಹತ್ವವಾಗಿದೆ. ಧರ್ಮಕಾರ್ಯಗಳಿಂದ ಆಗುವ ಒಳಿತುಗಳ ಬಗ್ಗೆ ಧಾರ್ಮಿಕ ಉಪನ್ಯಾಸ ನೀಡಿದರು.

ಪೂಜಾ ಸಮಿತಿ ಅಧ್ಯಕ್ಷರಾದ ಕೆ.ಎಸ್. ಅರುಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕೆದಮುಳ್ಳೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಮಾಳೇಟಿರ ಜಪ್ರಿ ಉತ್ತಪ್ಪ, ತೋರ ಗ್ರಾಮದ ಪ್ರಗತಿಪರ ಕೃಷಿಕ ಕೆ.ಡಿ.ಪ್ರಭುಕುಮಾರ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ದಿನೇಶ್, ಗ್ರಾಪಂ ಸದಸ್ಯರಾದ ಮೀನಾಕ್ಷಿ, ಜಯಂತಿ, ಕೆ.ಎಂ.ರಾಮಯ್ಯ, ವಿರಾಜಪೇಟೆ ವಲಯ ಮೇಲ್ವಿಚಾರಕ ನಾಗರಾಜ್, ವಿಜಯಕುಮಾರ, ಸುನಿತಾ, ತೇಜಸ್ವಿನಿ, ಪೂಜಾ ಸಮಿತಿ ಹಾಗೂ ವಿರಾಜಪೇಟೆ ವಲಯ ಪ್ರಗತಿಬಂಧು ಸ್ವಸಹಾಯ ಸಂಘದ ಪದಾಧಿಕಾರಿಗಳು, ಸದಸ್ಯರು, ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಕಲೆಗಳಿಗೆ ನಾಟಕ ತಾಯಿ ಬೇರು



ಚಾಮರಾಜನಗರ, ಡಿ.17–ಜಗತ್ತಿನ ಎಲ್ಲಾ ಕಲೆಗಳಿಗೆ ನಾಟಕ ತಾಯಿ ಬೇರು ಇದ್ದ ಹಾಗೆ, ಅತ್ಯಂತ ಮಹತ್ವ ಸ್ಥಾನ ಪಡೆದು ಸುಸಂಸ್ಕೃತ ಬದುಕನ್ನು ಕಲಿಸುವ ರಂಗಭೂಮಿ ಸತ್ಯವನ್ನು ಪ್ರತಿಷ್ಠಾಪಿಸುತ್ತದೆ ಎಂದು ಚಲನಚಿತ್ರ ಸಂಕಲನಕಾರ, ರಾಜ್ಯ ಮತು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಎಂ.ಎನ್.ಸ್ವಾಮಿ ಹೇಳಿದರು.

ನಗರದ ರಾಜ್‌ಕುಮಾರ್ ಕಲಾ ಮಂದಿರದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ಕಲಾಮಂಟಪ ಮತ್ತು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ಹಮ್ಮಿಕೊಂಡಿದ್ದ ಮೂರು ದಿನಗಳ ರಂಗೋತ್ಸವದ ಸಮಾರೋಪದಲ್ಲಿ ಮಾತನಾಡಿದ ಅವರು, ನಾಟಕ ಎಲ್ಲವನ್ನು ಕಲಿಸುತ್ತದೆ. ಸಂಗೀತ, ಹಾಡು, ನೃತ್ಯ ಅಭಿನಯ ಸೇರಿದಂತೆ ಒಂದು ವಿಶಾಲ ಸಂಕಿರಣ ಇದ್ದಂತೆ. ನಾಟಕದಲ್ಲಿ ಭಕ್ತಿ, ಭಾವ, ಅರಿವು, ಅರ್ಥಮ ಹೃದಯ, ಮಾರ್ಗ, ಮನಸ್ಸು ಇರುತ್ತದೆ. ಇದು ರಂಗಭೂಮಿಗೆ ಅಡಿಪಾಯ ಇದನ್ನು ಅರಿತು ಜೆಎಸ್‌ಎಸ್ ಸಂಸ್ಥೆ ಕಳೆದ 60 ವರ್ಷಗಳಿಂದ ಕಲಾಮಂಟಪ ಸ್ಥಾಪಿಸಿ, ಕಲೆಯನ್ನು ಪ್ರೋತ್ಸಾಹಿಸುವ ಜೊತೆ ಮಕ್ಕಳಲ್ಲೂ ನಾಟಕ ಕಲೆಯನ್ನು ಕಲಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದರು.

ಪೋಷಕರು ಮೊಬೈಲ್, ಕೆಟ್ಟ ಧಾರಾವಾಹಿಗಳು, ಸಾಮಾಜಿಕ ಜಾಲತಾಣಗಳಿಂದ ಮಕ್ಕಳನ್ನು ದೂರ ಇಟ್ಟು ಇಂತಹ ನಾಟಕ ಕಲೆಗಳಿಗೆ ಕಲಿಸುವುದರತ್ತ ಗಮನ ಹರಿಸಿದರೆ ಒಂದು ಒಳ್ಳೆಯ ಸಮಾಜ ನಿರ್ಮಿಸಬಹುದು. ಧಾರಾವಾಹಿಗಳಲ್ಲಿ ಖಳ ನಾಯಕಿಯನ್ನು ಬಿಂಬಿಸಿ ಸಮಾಜದಲ್ಲಿ ಕೆಟ್ಟ ಪರಿಣಾಮ ಬೀರುತ್ತಿದ್ದು, ಇದು ಮುಂದೆ ಇನ್ನಷ್ಟು ಪರಿಣಾಮ ಬೀರುತ್ತದೆ ಎಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುಲಿಂಗಯ್ಯ ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ರಂಗೋತ್ಸವ ಸಂಚಾಲಕ ಚಂದ್ರಶೇಖರ್ ಹೆಗ್ಗೋಠಾರ, ಪ್ರಾಂಶುಪಾಲ ಜಿ.ಸಿದ್ದರಾಜು, ಸಾರ್ವಜನಿಕ ಸಂಪರ್ಕಾಧಿಕಾರಿ ಆರ್.ಎಂ.ಸ್ವಾಮಿ, ಡಾ.ಎ.ಆರ್.ಸುಷ್ಮಾ, ಸಹಾಯಕ ಪ್ರಾಧ್ಯಾಪಕಿ ಜಮುನಾ, ಉಪನ್ಯಾಸಕಿ ಅಂಬಿಕಾದೇವಿ ಉಪಸ್ಥಿತರಿದ್ದರು

ಮಾನವ ಕಳ್ಳಸಾಗಣೆ ತಡೆಗೆ ಚಿಂತನೆ ಅಗತ್ಯ

●ನ್ಯಾಯಾಧೀಶೆ ಬಿ.ಎಸ್.ಭಾರತಿ ಸಲಹೆ ●ಚಾ.ನಗರದಲ್ಲಿ ಕಾರ್ಯಾಗಾರ



ಚಾಮರಾಜನಗರ, ಡಿ.17–ಮಾನವ ಕಳ್ಳಸಾಗಣೆ ತಡೆಯಲು ಹೊಸ ಆಯಾಮಗಳ ಚಿಂತನೆ, ಅರಿವು, ಚರ್ಚೆಗಳು ಪ್ರಜ್ಞಾವಂತ ನಾಗರಿಕರಿಗೆ ಅಗತ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ಪೊಲೀಸ್ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮೈಸೂರಿನ ಒಡನಾಡಿ ಸೇವಾ ಸಂಸ್ಥೆ ಹಾಗೂ ಯಂಗ್ ಇಂಡಿಯಾ ಅರ್ಬನ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ ನಡೆದ 'ಮಾನವ ಕಳ್ಳಸಾಗಣೆಯ ಹೊಸ ಆಯಾಮಗಳು' ಕುರಿತ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಾನವ ಕಳ್ಳಸಾಗಣೆ ದೇಶದೆಲ್ಲೆಡೆ ನಡೆಯುತ್ತಿರುವ ಬಹುದೊಡ್ಡ ಅಪರಾಧವಾಗಿದೆ. ಮನುಷ್ಯರೇ ಕಳ್ಳಸಾಗಣೆ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದು ಮನುಕುಲಕ್ಕೆ ಶೋಚನೀಯವಾಗಿ ಪರಿಣಮಿಸಿದೆ. ಹಾಗಾಗಿ ಮನುಷ್ಯರಾದವರು ತಮ್ಮಲ್ಲಿ ತಾವು ಬದಲಾವಣೆ ಕಂಡುಕೊಂಡಾಗ ಮಾತ್ರ ಸಮಾಜದಲ್ಲಿ ನ್ಯಾಯಯುತವಾದ ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಲಿದೆ. ಜೊತೆಗೆ ಇತರರಿಗೂ ಇದು ಮಾದರಿಯಾಗಲಿದೆ ಎಂದರು. ಇತ್ತೀಚಿನ ದಿನಗಳಲ್ಲಿ ಅಂತರ್ಜಾಲ ಬಳಕೆ ಹೆಚ್ಚಾಗಿದ್ದು, ಇದರಿಂದ ಮಾನವ ಕಳ್ಳಸಾಗಣೆ ಹಾಗೂ ಮಹಿಳೆ ಮತ್ತು ಮಕ್ಕಳ ಮೇಲೆ ದೌರ್ಜನ್ಯ ಪ್ರಕರಣಗಳು, ಸೈಬರ್ ಅಪರಾಧಗಳು ಹೆಚ್ಚಾಗುತ್ತಿರುವುದು ಇಂದಿನ ಪರಿಸ್ಥಿತಿಯ ದುರಂತವಾಗಿದೆ. ಮಾನವ ಕಳ್ಳಸಾಗಣೆ ತಡೆಯಲು ಪ್ರತಿಯೊಬ್ಬರಿಗೂ ಅರಿವು ಅಗತ್ಯವಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಮಾತನಾಡಿ, ಮಾನವ ಕಳ್ಳಸಾಗಣೆಯ ಹೊಸ ಆಯಾಮಗಳ ಬಗ್ಗೆ ಪ್ರತಿಯೊಬ್ಬರು ತಿಳಿದುಕೊಳ್ಳುವ ಉತ್ತಮ ವಿಚಾರವಾಗಿದೆ. ಮಾನವ ಕಳ್ಳಸಾಗಣೆಯ ಪ್ರಕರಣಗಳಲ್ಲಿ ಬಹುಪಾಲು ಮಹಿಳೆಯರು, ಮಕ್ಕಳು ಸಿಲುಕಿರುವುದನ್ನ ಕಾಣಬಹುದು. ಮಾನವ ಕಳ್ಳಸಾಗಣೆ ಸಾಮಾಜಿಕ, ರಾಜಕೀಯ, ಆರ್ಥಿಕ, ಶೈಕ್ಷಣಿಕ ಹಾಗೂ ಕಾನೂನಾತ್ಮಕ ಸವಾಲಾಗಿ ಪರಿಣಮಿಸಿದೆ. ಇದರ ತಡೆಗಾಗಿ ಸಾಕಷ್ಟು ಸ್ವಯಂ ಸೇವಾ ಸಂಸ್ಥೆಗಳು ಸಮಾಜ ಮುಖಿಯಾಗಿ ಅವಿರತವಾಗಿ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ. ಮಹಿಳೆಯರ ಮತ್ತು ಮಕ್ಕಳ ರಕ್ಷಣಾ ಕ್ಷೇತ್ರಕ್ಕೆ ಹೊಸ ಆಯಾಮ ಗಳನ್ನು ಸೃಷ್ಟಿಸಬೇಕಾದ ಅನಿವಾರ್ಯತೆ ಇದೆ ಎಂದರು.

> ಸಾಮಾಜಿಕವಾಗಿ ಮಹಿಳೆಯರು ಮತ್ತು ಮಕ್ಕಳ ದೈಹಿಕ ದೌರ್ಜನ್ಯ ತಡೆಯಲು ಸಮಾಜದ ಎಲ್ಲರೂ ಸೈನಿಕರಂತೆ ಹೋರಾಡಬೇಕಾದ ಅವಶ್ಯವಿದೆ. ಮುಖ್ಯವಾಗಿ ಪಂಚಾಯಿತಿ ಮಟ್ಟದಿಂದ ಇಂತಹ ಶೋಷಣೆ, ದೌರ್ಜನ್ಯಗಳನ್ನು ತಡೆಗಟ್ಟಲು ಪ್ರತಿ ಗ್ರಾಪಂಗಳಲ್ಲಿ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಅರಿವು ಶಿಬಿರಗಳನ್ನು ಜನಪ್ರತಿನಿಧಿಗಳ ಸಮ್ಮುಖದಲ್ಲಿ ಆಯೋಜಿಸಬೇಕು.
> -ಸಿ.ಟಿ.ಶಿಲ್ಪಾನಾಗ್, ಜಿಲ್ಲಾಧಿಕಾರಿ

ಒಡನಾಡಿ ಸೇವಾ ಸಂಸ್ಥೆಯ ಕಾರ್ಯದರ್ಶಿ ಸ್ಟ್ಯಾನ್ಲಿ ಮಾತನಾಡಿ, ಸಂಸ್ಥೆಯಿಂದ ಹಮ್ಮಿಕೊಂಡಿರುವ ಸಮಾಜಮುಖಿ ಕಾರ್ಯಗಳ ಬಗ್ಗೆ ವಿವರಿಸಿ ಸಂಸ್ಥೆಯು ಮಹಿಳೆಯರು, ಮಕ್ಕಳು ಸೇರಿದಂತೆ ದೌರ್ಜನ್ಯಕ್ಕೆ ಒಳಗಾದವರ ಪರವಾಗಿ ಕೆಲಸ ಮಾಡುತ್ತಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಉಮ್ಮತ್ತೂರು ಇಂದುಶೇಖರ್, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ, ಒಡನಾಡಿ ಸೇವಾ ಸಂಸ್ಥೆ ನಿರ್ದೇಶಕರಾದ ಪರಶುರಾಮ್, ಯಂಗ್ ಇಂಡಿಯಾ ಅರ್ಬನ್ ಆ್ಯಂಡ್ ರೂರಲ್ ಡೆವಲಪ್‌ಮೆಂಟ್ ನಿರ್ದೇಶಕ ರಾಘವೇಂದ್ರ, ವೈಐಯುಆರ್‌ಡಿ ಕಾರ್ಯದರ್ಶಿ ರಾಚಪ್ಪಾಜಿ, ಟ್ರಸ್ಟಿ ಶೀಲಾ ಇದ್ದರು.

ಹೆದ್ದಾರಿಯಲ್ಲಿ ಬಾಳೆದಿಂಡು ಹಿಡಿದು ಪ್ರತಿಭಟನೆ

ಚಾಮರಾಜನಗರ, ಡಿ.17– ತಮಿಳುನಾಡಿಗೆ ಕಾವೇರಿ ನದಿ ನೀರು ಹರಿಸುತ್ತಿರುವ ಕ್ರಮವನ್ನು ಖಂಡಿಸಿ ಭಾನುವಾರವೂ ಕರ್ನಾಟಕ ಸೇನಾಪಡೆಯ ಕಾರ್ಯಕರ್ತರು ರಾಷ್ಟ್ರೀಯ ಹೆದ್ದಾರಿಯಲ್ಲಿ ಬಾಳೆದಿಂಡು ಹಿಡಿದು ವಿನೂತನ ಪ್ರತಿಭಟನೆ ನಡೆಸಿದರು.

ನಗರದ ಚಾಮರಾಜೇಶ್ವರ ಉದ್ಯಾನ ಮುಂಭಾಗ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು, ಭುವನೇಶ್ವರಿ ವೃತ್ತಕ್ಕೆ ತೆರಳಿ ನಂತರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಾಳೆದಿಂಡು ಹಿಡಿದು ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಘೋಷಣೆ ಕೂಗಿದರು. ಕಾವೇರಿ ನದಿ ನೀರು ನಿರ್ವಹಣಾ ಮಂಡಳಿ ರದ್ದಾಗುವ ತನಕ ಕರ್ನಾಟಕಕ್ಕೆ ನ್ಯಾಯ ಸಿಗೋಲ್ಲ. ಅದನ್ನು ರದ್ದುಪಡಿಸಬೇಕು. ರಾಜ್ಯ ಸರ್ಕಾರ ನೀರನ್ನು ತಕ್ಷಣ ನಿಲ್ಲಿಸಬೇಕು. ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ರಾಜ್ಯಕ್ಕೆ ನ್ಯಾಯ ಒದಗಿಸಿಕೊಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದಹುಂಡಿ ರಾಜು, ನಿಜಧ್ವನಿಗೋವಿಂದರಾಜು, ಚಾ.ರಾ.ಕುಮಾರ್, ಪ್ರಕಾಶ್, ವೀರಭದ್ರ, ರಾಜಪ್ಪ ಇತರರು ಭಾಗವಹಿಸಿದ್ದರು.



ಕಂಬಾರರಂತಹ ಸಾಹಿತಿಗಳಿಂದ ಕನ್ನಡ ಉಳಿವು



ಕೊಳ್ಳೇಗಾಲ, ಡಿ.17–ಕನ್ನಡವನ್ನು ಉಳಿಸಿ ಬೆಳೆಸಲು ಕಂಬಾರರಂತಹ ಸಾಹಿತಿಗಳ ಸೇವೆಯೇ ಕಾರಣ. ಮಾನಸ ಪ್ರಶಸ್ತಿಯನ್ನು ಕಂಬಾರರಿಗೆ ನೀಡುವ ಮೂಲಕ ಮಾನಸ ಶಿಕ್ಷಣ ಸಂಸ್ಥೆ ತನ್ನ ಗರಿಮೆಯನ್ನು ಹೆಚ್ಚಿಸಿಕೊಂಡಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಟಿ.ಜಿ.ಶಿವಶಂಕರೇಗೌಡ ಹೇಳಿದರು.

ಪಟ್ಟಣದ ಮಾನಸ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಸಮಾರೋಪದಲ್ಲಿ ಆರ್.ಸಿದ್ದೇಗೌಡ ಲಿಂಗಮ್ಮನವರ ಸ್ಮರಣಾರ್ಥ ಸಾಹಿತಿ ನಾಡೋಜ ಡಾ.ಚಂದ್ರಶೇಖರ ಕಂಬಾರ ಅವರಿಗೆ ಮಾನಸ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ಸಾಮಾನ್ಯ ಜ್ಞಾನ ಹೆಚ್ಚಿರುತ್ತದೆ. ಜೊತೆಗೆ ಉತ್ತಮ ಸಂಸ್ಕಾರ ಇರುತ್ತದೆ. ಪಟ್ಟಣ ಪ್ರದೇಶದಲ್ಲಿ ವಾಸ ಮಾಡುವವರು ಯಾಂತ್ರಿಕ ಜೀವನ ನಡೆಸುತ್ತಿದ್ದು, ಹಳ್ಳಿಯಲ್ಲಿ ಇರುವವರು ಶ್ರಮ ಜೀವನ ನಡೆಸುತ್ತಾರೆ. ಮಾತೃಭಾಷೆ ಕಲಿಕೆ ಸಾಧನೆಗೆ ಅಡ್ಡಿಯಾಗುವುದಿಲ್ಲ. ಉನ್ನತ ಹುದ್ದೆಗೆ ಏರಿರುವವರು ಗ್ರಾಮೀಣ ಪ್ರದೇಶದ ಜನರೇ ಹೆಚ್ಚಾಗಿದ್ದಾರೆ ಎಂದು ತಿಳಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಚಂದ್ರಶೇಖರ ಕಂಬಾರರು, ಭಾರತ ಒಂದು ವಿಶಿಷ್ಟವಾದ ದೇಶ. ಮಕ್ಕಳೆಲ್ಲರು ಸೃಜನಶೀಲರು, ಅವರಿಂದ ಸಾಹಿತ್ಯವನ್ನು ಓದಿಸಬೇಕು ಮತ್ತು ಸಾಹಿತ್ಯ ಸೃಷ್ಟಿಸುವಂತೆ ಪ್ರೇರೇಪಿಸಬೇಕು. ಮಾನಸ ಪ್ರಶಸ್ತಿ ಸ್ವೀಕರಿಸುವ ಈ ಕ್ಷಣ ನನಗೆ ಸಂತಸ ತಂದಿದೆ ಎಂದರು.

ವಿಶ್ರಾಂತ ಕುಲಪತಿ ಹಿ.ಚಿ.ಬೋರಲಿಂಗಯ್ಯ ಮಾತನಾಡಿ, ಮಾನಸ ಶಿಕ್ಷಣ ಸಂಸ್ಥೆ ಗ್ರಾಮೀಣ ಭಾಗದ ಜನರಿಗೆ ಉತ್ತಮ ಸೇವೆ ನೀಡುತ್ತಿದೆ. ಗ್ರಾಮೀಣ ಪ್ರದೇಶದ ಸಂಸ್ಕೃತಿ, ಪರಂಪರೆಯನ್ನು ಉಳಿಸುವಲ್ಲಿ ಸಂಸ್ಥೆ ಪಣತೊಟ್ಟಿದೆ. ಸ್ಥಳೀಯ ಜ್ಞಾನದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಜಾನಪದ ಕಲೆಗಳ ಬಗ್ಗೆ ಅರಿವು ಮೂಡಿಸಬೇಕು. ಮಕ್ಕಳ ಪ್ರತಿಭೆಯನ್ನು ಗುರುತಿಸಿ ಉತ್ತಮ ವೇದಿಕೆಯನ್ನು ಕಲ್ಪಿಸಿಕೊಡುವಲ್ಲಿ ಸಂಸ್ಥೆ ಮಾನಸೋತ್ಸವ ವೇದಿಕೆ ಸೃಷ್ಟಿಸಿದೆ. ಡಾ.ಚಂದ್ರಶೇಖರ ಕಂಬಾರರಿಗೆ ಮಾನಸ ಪ್ರಶಸ್ತಿ ನೀಡಿರುವುದು ಗ್ರಾಮೀಣ ಸಂಸ್ಕೃತಿ ಮತ್ತು ಪರಂಪರೆಗೆ ಭೂಷಣಪ್ರಾಯವಾಗಿದೆ ಎಂದರು. ಇದೇ ವೇಳೆ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಮಾನಸ ವಾರ್ಷಿಕ ಸಂಚಿಕೆ 2023–24 ಅನ್ನು ಬಿಡುಗಡೆ ಮಾಡಿದರು. ಶಾಸಕ ಎ.ಆರ್.ಕೃಷ್ಣಮೂರ್ತಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ದತ್ತೇಶ್ ಮತ್ತಿತರರು ಹಾಜರಿದ್ದರು.

ಕೆರೆಗೆ ಕೊಳಚೆ ನೀರು ಹರಿಸದಂತೆ ಒತ್ತಾಯಿಸಿ ಗ್ರಾಮಸ್ಥರ ಪ್ರತಿಭಟನೆ

ಚಾಮರಾಜನಗರ, ಡಿ.17– ಕೆರೆಗೆ ಕೊಳಚೆ ನೀರು ಹರಿಸಬಾರದು ಎಂದು ಒತ್ತಾಯಿಸಿ ತಾಲೂಕಿನ ಬಸಪ್ಪನಪಾಳ್ಯ ಗ್ರಾಮಸ್ಥರು ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು.

ಗ್ರಾ.ಪಂ. ಅನುದಾನದಲ್ಲಿ ನಿರ್ಮಿಸುತ್ತಿದ್ದ ಚರಂಡಿ ಕಾಮಗಾರಿ ಮುಂದೆ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿರುವ ಕೆರೆಯ ನೀರನ್ನು ಹಿಂದೆ ಗ್ರಾಮಸ್ಥರು ಮನೆ ಬಳಕೆ, ಕುಡಿಯಲು ಬಳಸುತ್ತಿದ್ದರು. ಹಬ್ಬದ ದಿನಗಳಲ್ಲಿ ಪೂಜೆ ಸಲ್ಲಿಸಿ ಮನೆಗೆ ನೀರು ತರುತ್ತಿದ್ದರು. ಆದರೆ ಇತ್ತೀಚೆಗೆ ಚಂದಕವಾಡಿ ಗ್ರಾಮದಿಂದ ಚರಂಡಿ ನೀರು ಗ್ರಾಮದ ಕೆರೆ ಬಿಡುತ್ತಿದ್ದು ಇದರಿಂದ ಕೆರೆ ನೀರು ಮಲೀನವಾಗಿದ್ದು, ಚರಂಡಿ ಪಕ್ಕದಲ್ಲಿರುವ ಬೋರ್‌ವೆಲ್‌ನಿಂದ ಮನೆಗಳಿಗೆ ಮಲೀನ ನೀರು ಸೇರುವ ಅನುಮಾನವಿದೆ ಏಕೆಂದರೆ ಗ್ರಾಮದಲ್ಲಿ ನಿರಂತರವಾಗಿ 15 ಮಂದಿ ಸತ್ತಿದ್ದಾರೆ. ಕೂಡಲೇ ಕೆರೆಗೆ ಬರುವ ಕೊಳಚೆ ನೀರನ್ನು ತಡೆಗಟ್ಟಬೇಕು. ಕೆರೆ ಅಭಿವೃದ್ಧಿ ಪಡಿಸಿ ಕೆರೆ ನೀರನ್ನು ಗ್ರಾಮದ ಜನತೆ ಬಳಸಲು ಅನುಕೂಲ ಮಾಡಿಕೊಡಬೇಕು ಎಂದು ಗ್ರಾಮಸ್ಥರು ಸ್ಥಳಕ್ಕೆ ಭೇಟಿ ನೀಡಿದ ಗ್ರಾ.ಪಂ.ಅಧ್ಯಕ್ಷ ನಟರಾಜು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸಿದ್ದರಾಜು ಅವರಲ್ಲಿ ಮನವಿ ಮಾಡಿದರು. ಮೇಲಧಿಕಾರಿಗಳ ಗಮನಕ್ಕೆ ತಂದು ಕ್ರಮಕೈಗೊಳ್ಳುವುದಾಗಿ ಪಿಡಿಓ ಭರವಸೆ ನೀಡಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಗೊಳ್ಳಿರಾಯಣ್ಣ ಯುವವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್ ಮಾತನಾಡಿ, ನಮ್ಮ ಗ್ರಾಮದ ಕೆರೆಗೆ ಒಂದು ಪರಂಪರೆ, ಇತಿಹಾಸವಿದೆ. ಆಗಾಗಿ ಕೊಳಚೆ ನೀರನ್ನು ಬಿಡಬಾರದು. ಸರ್ಕಾರವೇ ಕೆರೆ ಅಭಿವೃದ್ಧಿಗೆ ಒತ್ತು ನೀಡುತ್ತಿದೆ. ಕೂಡಲೇ ಗ್ರಾಮ ಪಂಚಾಯಿತಿ ವತಿಯಿಂದ ಕೆರೆಯ ಮಲೀನ ನೀರು ಹೊರ ಹಾಕಿ ಅಭಿವೃದ್ಧಿ ಪಡಿಸಿ ಗ್ರಾಮದ ಜನತೆ ಅನುಕೂಲ ಮಾಡಿಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಗ್ರಾ.ಪಂ.ಸದಸ್ಯರ ಮಹಾಒಕ್ಕೂಟದ ಚಾಮರಾಜನಗರ ತಾಲೂಕು ಅಧ್ಯಕ್ಷ ಆರ್. ರೇವಣ್ಣ, ಸದಸ್ಯೆ ಶಶಿರೇಖಾ ಬೋದಿರಾಜು, ಮಾಜಿ ಸದಸ್ಯರಾದ ಶಿವಕುಮಾರ್, ಬಸವೇಗೌಡ, ಶಿವಬಸವಯ್ಯ, ಮುಖಂಡರಾದ ಕುರುಬರ ಸಂಘದ ರಾಜ್ಯ ಉಪಾಧ್ಯಕ್ಷ ಬಸಪ್ಪನಪಾಳ್ಯ ನಟರಾಜು, ಶಿವಣ್ಣೇಗೌಡ, ವೆಂಕಟೇಶ್, ನಾಗರಾಜು, ಶಾಮಿಯಾನ ಚೆನ್ನಸ್ವಾಮಿ, ಯಜಮಾನರಾದ ಕುಮಾರ್, ಮಲ್ಲಯ್ಯ, ರೇವಣ್ಣಸ್ವಾಮಿ, ಶಿವಣ್ಣ ಮಾಜಿ ಯಜಮಾನ ನಾಗರಾಜು, ಹಾಗೂ ಶ್ರೀಭಕ್ತಕನಕದಾಸರ ಯುವಕರ ಬಳಗ, ಡಾ.ಬಿ.ಆರ್.ಅಂಬೇಡ್ಕರ್ ಯುವಕರ ಬಳಗ ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.



ದಾವಣಗೆರೆಯಲ್ಲಿ ನಡೆಯಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮಹಾ ಅಧಿವೇಶನಕ್ಕೆ ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಅವರನ್ನು ಹುಬ್ಬಳ್ಳಿ ನಿವಾಸದಲ್ಲಿ ಭಾನುವಾರ ಆಹ್ವಾನಿಸಲಾಯಿತು. ಈ ಸಂದರ್ಭದಲ್ಲಿ ಮಹಾಸಭಾದ ರಾಜ್ಯ ಘಟಕ ಖಜಾಂಚಿ ವರುಣಾ ಮಹೇಶ್, ಕೈಗಾರಿಕಾ ಸಮಿತಿ ರಾಜ್ಯಾಧ್ಯಕ್ಷ ಉಮೇಶ್ ಪಾಟೀಲ್, ಧಾರವಾಡ ಘಟಕ ಜಿಲ್ಲಾಧ್ಯಕ್ಷ ಗುರುರಾಜ್ ಹುಣಸಿಮರದ್, ದಾವಣಗೆರೆ ಜಿಲ್ಲಾ ಯುವ ಘಟಕ ಅಧ್ಯಕ್ಷ ಶಂಭು ಉರೇಕೊಂಡಿ, ಅನಿಲ್ ಮತ್ತಿತರರ ಪದಾಧಿಕಾರಿಗಳು ಇದ್ದರು.



ಸುಬ್ರಹ್ಮಣ್ಯ ಷಷ್ಠಿಯ ನಿಮಿತ್ತ ಮೈಸೂರಿನ ಸೀವೇಜ್ ಫಾರಂ ರಸ್ತೆಯ ಕನಕಗಿರಿಯಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಖಂಡರಾದ ಪಳನಿ ರಾಜೇಶ್, ಕೇಬಲ್ ಮಹದೇವು, ಮಲ್ಲೇಶ್, ದೊಡ್ಡಯ್ಯ, ಕೆಂಗೇಗೌಡ, ನಾರಾಯಣ, ಮರಿಸ್ವಾಮಿ, ಕುಮಾರ್, ರವಿ, ಗುಣಶೇಖರ್ ಇತರರಿದ್ದರು.

ಇಂದು 'ಬೆಪ್ಪು ತಕ್ಕಡಿ ಬೋಳೇಶಂಕರ' ನಾಟಕ

ಮೈಸೂರು, ಡಿ.17–ಮೈಸೂರಿನ ಕಲಾಮಂದಿರ ಆವರಣದ ಕಿರು ರಂಗ ಮಂದಿರದಲ್ಲಿ ದೇಸಿರಂಗ ಸಾಂಸ್ಕೃತಿಕ ಸಂಸ್ಥೆಯ ಕಲಾವಿದರು ಅಭಿನಯಿಸುವ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ ಕಂಬಾರರ 'ಬೆಪ್ಪು ತಕ್ಕಡಿ ಬೋಳೇ ಶಂಕರ' ನಾಟಕ ಡಿ.18ರಂದು ಸಂಜೆ 6.30ಕ್ಕೆ ಪ್ರದರ್ಶನಗೊಳ್ಳಲಿದೆ ಎಂದು ದೇಸಿರಂಗ ಸಾಂಸ್ಕೃತಿಕ ಸಂಸ್ಥೆಯ ಕೃಷ್ಣ ಜನಮನ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಹೆಚ್.ಡಿ.ದೇವೇಗೌಡರಿಗೆ ಆಹ್ವಾನ

ವಿಎಚ್‌ಪಿ ನಾಯಕ ಅಲೋಕ್‌ಕುಮಾರ್ ಅವರು ಭಾನುವಾರ ನನ್ನನ್ನು ನವದೆಹಲಿ ನನ್ನ ನಿವಾಸದಲ್ಲಿ ಭೇಟಿಯಾದರು ಎಂದು ತಿಳಿಸಿದ್ದಾರೆ. ಮುಂದಿನ ವರ್ಷದ ಜನವರಿ 22ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಇತರ ಗಣ್ಯರ ಸಮ್ಮುಖದಲ್ಲಿ ರಾಮ ಮಂದಿರ ಉದ್ಘಾಟನೆಯನ್ನು ಮಾಡಲಿದ್ದಾರೆ. ಈ ಕಾರ್ಯಕ್ರಮಕ್ಕೆ ಅರಸೀಕೆರೆ ತಾಲೂಕಿನ ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಸೇರಿದಂತೆ ರಾಜ್ಯದ ಹಲವು ಗಣ್ಯರಿಗೆ ಆಹ್ವಾನ ನೀಡಲಾಗಿದೆ.

ಆಗಸ್ಟ್ 5, 2020 ರಂದು, ಪ್ರಧಾನಿ ಮೋದಿ ಅವರು ದೇವಾಲಯದ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿದ್ದರು. ರಾಮ ಮಂದಿರದ ಸಮೀಪವಿರುವ 70 ಎಕರೆ ಪ್ರದೇಶದಲ್ಲಿ ವಾಲ್ಮೀಕಿ, ಕೇವತ್, ಶಬರಿ, ಜಟಾಯು, ಸೀತಾ, ಗಣೇಶ ಮತ್ತು ಶೇಷಾವತಾರ (ಲಕ್ಷ್ಮಣ) ದೇವಾಲಯಗಳನ್ನು ನಿರ್ಮಿಸಲಾಗುತ್ತಿದೆ.

JN-1ಗೆ ನಾಲ್ವರ ಬಲಿ

ಅಧಿಕಾರಿಗಳ ಸಭೆ ನಡೆಸಿ JN-1 ಮೈಸೂರಿನಲ್ಲಿ ಕಾಲಿಡದಂತೆ ಯಾವ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕೆಂದು ಯೋಜನೆ ರೂಪಿಸಲಾಗಿದೆ. ತಾಲೂಕು ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿಗಳ ನೇತೃತ್ವದಲ್ಲಿ ಟಾಸ್ಕ್ ಫೋರ್ಸ್ ರಚನೆ ಮಾಡಲಾಗಿದೆ. ಜಿಲ್ಲೆಯ ಪ್ರತಿಯೊಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಆರೋಗ್ಯಾಧಿಕಾರಿಗೆ ಹಲವು ಜವಾಬ್ದಾರಿಗಳನ್ನು ನೀಡಲಾಗಿದೆ.

ಮೈಸೂರು ಜಿಲ್ಲೆಯಲ್ಲಿ 1,300 ಕ್ಕೂ ಹೆಚ್ಚು ಹಳ್ಳಿಗಳಿವೆ. ಜನರಲ್ಲಿ ಕೆಮ್ಮು, ನೆಗಡಿ, ಜ್ವರ ಬಂದ ಪಕ್ಷದಲ್ಲಿ ಅವರಲ್ಲಿ ಸೋಂಕಿನ ಲಕ್ಷಣ ಇದೆಯೇ ಎಂದು ಸೂಕ್ಷ್ಮವಾಗಿ ಗಮನಿಸಲಾಗುತ್ತದೆ. ಸೋಂಕು ಇರುವ ಬಗ್ಗೆ ಸಂಶಯ ಬಂದರೆ ಪರೀಕ್ಷೆಗೆ ಒಳಪಡಿಸಲಾಗುವುದು. ತರುವಾಯ ಆರ್‌ಟಿಪಿಸಿಆರ್ ಟೆಸ್ಟ್ ಮಾಡಿಸಲಾಗುವುದು. ಕೊರೊನಾ ಸೋಂಕು ದೃಢಪಟ್ಟರೆ ಅವರನ್ನು ಆಸ್ಪತ್ರೆಯ ಪ್ರತ್ಯೇಕ ಕೊಠಡಿಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುವುದು. ಜೊತೆಗೆ ಅವರ ಕುಟುಂಬಸ್ಥರನ್ನು ಪರೀಕ್ಷೆಗೊಳಪಡಿಸಲಾಗುವುದು ಎಂದು ಡಾ.ಕುಮಾರಸ್ವಾಮಿ ತಿಳಿಸಿದರು.

ಆಸ್ಪತ್ರೆಗಳಲ್ಲಿರುವ ಆಕ್ಸಿಜನ್ ಸಿಲಿಂಡರ್‌ಗಳ ಕಾರ್ಯನಿರ್ವಹಣೆ ಬಗ್ಗೆ ಈಗಾಗಲೇ ಅಣಕು ಪ್ರದರ್ಶನ ಮಾಡಲಾಗಿದೆ. ಅಗತ್ಯ ಕೊರೊನಾ ಟೆಸ್ಟ್ ಕಿಟ್ ಗಳನ್ನು ಸ್ಟಾಕ್ ಮಾಡಿಕೊಳ್ಳಲಾಗಿದೆ ಎಂದರು. ಹಾಗೆಂದು ಜನರು ಆತಂಕ ಪಡುವ ಅಗತ್ಯವಿಲ್ಲ. ಇದು ಡಿಸೆಂಬರ್ ತಿಂಗಳಾದ ಕಾರಣ, ಹವಾಮಾನ ಬದಲಾವಣೆಯಿಂದ ಕೆಮ್ಮು, ನೆಗಡಿ, ಜ್ವರ ಬರುವುದು ಸಹಜ. ಆದರೂ ಸೋಂಕಿನ ಸಂಶಯ ಬಂದರೆ ಜನರೆ ಸ್ವಯಂ ಪ್ರೇರಿತರಾಗಿ ಪರೀಕ್ಷೆಗೆ ಒಳಗಾಗಬೇಕು ಎಂದು ಸಲಹೆ ನೀಡಿದ್ದಾರೆ.

ಕೇರಳದ ಕರ್ನಾಟಕದ ಗಡಿ ಭಾಗದ ಹಳ್ಳಿಗಳಲ್ಲಿ ನಿಗಾ ವಹಿಸಲಾಗುವುದು. ಹಳ್ಳಿ ಜನರು ಕೇರಳಗೆ ಹೋಗಿ ಬರುತ್ತಾರೆ. ಈ ಹಿನ್ನೆಲೆ ಆಶಾ ಕಾರ್ಯಕರ್ತೆಯರ ಮೂಲಕ ಗಡಿ ಭಾಗದ ಜನರಲ್ಲಿ ಜಾಗೃತಿ ಮೂಡಿಸುವಂತೆ ಆಶಾ ಕಾರ್ಯಕರ್ತೆಯರಿಗೆ ತಿಳಿಸಲಾಗಿದೆ ಎಂದು ಡಾ.ಕುಮಾರಸ್ವಾಮಿ ತಿಳಿಸಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆಯಲ್ಲಿ ಬುಧವಾರ ಆರೋಗ್ಯಾಧಿಕಾರಿಗಳ ಸಭೆ ನಡೆಯಲಿದೆ. ಸಭೆಯಲ್ಲಿ ಸರ್ಕಾರ ನೀಡುವ ಸೂಚನೆ ಮೇರೆಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಲವು ಕಾರ್ಯಕ್ರಮ ರೂಪಿಸಲಾಗುವುದು ಎಂದು ಹೇಳಿದರು. ಮೈಸೂರಿನಲ್ಲಿ ಕೊರೊನಾ ಇನ್ನು ಬಂದಿಲ್ಲವೆಂದು ಜನರು ನಿರ್ಲಕ್ಷ್ಯ ತೋರುವುದು ಬೇಡ. ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಳ್ಳಬೇಕು, ಹಾಗಾಗ ಸ್ಯಾನಿಟೈಸ್ ಬಳಸಬೇಕು ಎಂದು ಡಾ.ಕುಮಾರಸ್ವಾಮಿ ಸಲಹೆ ನೀಡಿದ್ದಾರೆ.

ಅಧ್ಯಕ್ಷರ ನೇಮಕ

ನೇಮಕ ಮಾಡಲಾಗುವುದು ಎಂದು ಹೇಳಿ ಸಮಾಧಾನಪಡಿಸಿದ್ದರು. ಶಾಸಕರಲ್ಲಿ ಅಸಮಾಧಾನ ಹೊಗೆಯಾಡುತ್ತಿರುವುದನ್ನು ಅರಿತ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಹೈಕಮಾಂಡ್ ಜೊತೆ ಅಂತಿಮ ಸುತ್ತಿನ ಮಾತುಕತೆ ನಡೆಸಲು ತೀರ್ಮಾನಿಸಿದ್ದು, ಮುಂದಿನ ವಾರ ದೆಹಲಿಗೆ ತೆರಳಲಿದ್ದಾರೆ. ಮೊದಲ ಬಾರಿ ಶಾಸಕರಾದವರಿಗೆ ನಿಗಮ ಮಂಡಳಿಗಳಲ್ಲಿ ಸ್ಥಾನವಿಲ್ಲ ಎಂಬುದನ್ನು ಈಗಾಗಲೇ ಸಿಎಂ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ಮೊದಲ ಹಂತದಲ್ಲಿ ಶಾಸಕರು ಹಾಗೂ ವಿಧಾನಪರಿಷತ್ ಸದಸ್ಯರಿಗೆ ಸ್ಥಾನ ಕಲ್ಪಿಸಲಾಗುತ್ತಿದ್ದು, ಎರಡನೇ ಹಂತದಲ್ಲಿ ಕಾರ್ಯಕರ್ತರಿಗೆ ನಿಗಮ ಮಂಡಳಿಯಲ್ಲಿ ಸ್ಥಾನ ನೀಡಲಾಗುವುದು ಎಂದು ಈಗಾಗಲೇ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಎಮ್ಮೆ ಹಾಲು ಮಾರಾಟ

ಆರಂಭದಲ್ಲಿ ಅರ್ಧ ಲೀಟರ್ ಹಾಲಿನ ಪ್ಯಾಕೆಟ್‌ಗಳನ್ನು ಬಿಡುಗಡೆ ಮಾಡಲಾಗುವುದು ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂಕೆ ಜಗದೀಶ್ ತಿಳಿಸಿದ್ದಾರೆ. ಎರಡು ವರ್ಷಗಳ ಹಿಂದೆ, ಕೆಎಂಎಫ್ ಸುಮಾರು 4,000–5,000 ಲೀಟರ್ ಎಮ್ಮೆ ಹಾಲನ್ನು ಮಾರಾಟ ಮಾಡುತ್ತಿತ್ತು, ನಂತರ ಪೂರೈಕೆ ಕೊರತೆಯಿಂದಾಗಿ ಸ್ಥಗಿತಗೊಂಡಿತು. ಮಾರಾಟ ಮತ್ತು ಸರಬರಾಜುಗಳು ಶೀಘ್ರದಲ್ಲೇ ಪ್ರಾರಂಭವಾಗುತ್ತವೆ ಮತ್ತು ಹಸುವಿನ ಹಾಲು ಮತ್ತು ಅದರ ಉತ್ಪನ್ನಗಳೊಂದಿಗೆ ಎಮ್ಮೆ ಹಾಲಿಗೆ ಬೇಡಿಕೆಯು ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಅವರು ಹೇಳಿದರು.

ಎಲ್ಲಾ ಒಕ್ಕೂಟಗಳಲ್ಲಿ ಹಾಲು ಪೂರೈಸಲು ಸಾಕಷ್ಟು ಎಮ್ಮೆಗಳಿಲ್ಲದ ಕಾರಣ ವಿಜಯಪುರ ಮತ್ತು ಬೆಳಗಾವಿಯ ರೈತರಿಂದ ಹಾಲು ಖರೀದಿಸಲಾಗುತ್ತದೆ. ಉತ್ತರ ಕರ್ನಾಟಕದಲ್ಲಿ ಸಾಕಷ್ಟು ಎಮ್ಮೆಗಳಿದ್ದು, ಅಲ್ಲಿಂದಲೇ ಹಾಲು ಸಂಗ್ರಹಿಸಲಾಗುವುದು. ಮಾರುಕಟ್ಟೆ ಮತ್ತು ಬೇಡಿಕೆಗೆ ಅನುಗುಣವಾಗಿ ಸಂಗ್ರಹಣೆ ಹೆಚ್ಚಲಿದೆ ಎಂದು ಜಗದೀಶ್ ತಿಳಿಸಿದರು. ಹಾಲು ಪೂರೈಕೆಯಲ್ಲಿ ಇತರೆ ಬ್ರಾಂಡ್‌ಗಳಿಂದ ಪೈಪೋಟಿ ಹೆಚ್ಚುತ್ತಿದ್ದು, ನಂದಿನಿ ಮತ್ತು ಕೆಎಂಎಫ್ ಯಾವುದೇ ಉತ್ಪನ್ನದಲ್ಲಿ ಹಿಂದುಳಿಯಲು ಬಯಸುವುದಿಲ್ಲ. ತುಪ್ಪ, ಹಾಲು ಪೂರೈಕೆಗೆ ಈಗಾಗಲೇ ತೀವ್ರ ಪೈಪೋಟಿ ಏರ್ಪಟ್ಟಿದೆ ಎಂದು ಮತ್ತೊಬ್ಬ ಅಧಿಕಾರಿ ತಿಳಿಸಿದರು. ಖಾಸಗಿ ಮತ್ತು ಧಾರ್ಮಿಕ ಸಂಸ್ಥೆಗಳು ಸೇರಿದಂತೆ ಹಲವು ಕಡೆಗಳಿಂದ ನಮಗೆ ಹಾಲು, ತುಪ್ಪ ಮತ್ತು ಬೆಣ್ಣೆಗಾಗಿ ಬೇಡಿಕೆ ಬರುತ್ತಿವೆ. ನಾವು ತಾಂತ್ರಿಕ ವಿವರಗಳಲ್ಲಿ ಅರ್ಹತೆ ಹೊಂದಿದ್ದೇವೆ, ಆದರೆ ಹಣಕಾಸಿನ ಬಿಡ್‌ಗಳಲ್ಲಿ ಕಳೆದುಕೊಳ್ಳುತ್ತೇವೆ. ಲಡ್ಡುಗಳಿಗೆ ತಿರುಮಲ ತಿರುಪತಿ ದೇವಸ್ಥಾನಂ ಟ್ರಸ್ಟ್ ಬೋರ್ಡ್‌ಗೆ ತುಪ್ಪವನ್ನು ಪೂರೈಸುವ ಬಿಡ್ ಇತ್ತೀಚೆಗೆ ಕೈತಪ್ಪಿ ಹೋಗಿತ್ತು ಎಂದು ಅಧಿಕಾರಿ ಹೇಳುತ್ತಾರೆ. ಕೆಎಂಎಫ್ ಈಗ ಪ್ರತಿದಿನ 46 ಲಕ್ಷ ಲೀ. ಹಾಲು ಮತ್ತು 10 ಲಕ್ಷ ಲೀಟರ್ ಮೊಸರನ್ನು ರಾಜ್ಯ ಮತ್ತು ಗಡಿಯಾದ್ಯಂತ ಮಾರಾಟ ಮಾಡುತ್ತಿದೆ.

ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರಿಡುವ ಪ್ರಸ್ತಾಪಕ್ಕೆ ಕಾಂಗ್ರೆಸ್ ಶಾಸಕರ ಬೆಂಬಲವೇ ಇಲ್ಲ

● ಶಾಸಕ ಜಿ.ಟಿ.ದೇವೇಗೌಡರ ಸ್ಪಷ್ಟನೆ ● ವಿಮಾನ ನಿಲ್ದಾಣಕ್ಕೆ ನಾಲ್ವಡಿ ಹೆಸರು ಅಂತಿಮ ● ಸಂಸತ್‌ನಲ್ಲಿ ಭದ್ರತಾ ಲೋಪವಾಗಿರುವುದು ಸತ್ಯ ● ಪ್ರತಾಪ್ ಸಿಂಹ ರಾಜೀನಾಮೆ ಕೇಳುವುದು ಸರಿಯಲ್ಲ

ಮೈಸೂರು, ಡಿ.17(ಬಿಎಲ್‌ಯು)– ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರು ನಾಮಕರಣ ಮಾಡುವ ಪ್ರಸ್ತಾಪಕ್ಕೆ ಬಿಜೆಪಿ ಹಾಗೂ ಜೆಡಿಎಸ್ ಮಾತ್ರವಲ್ಲದೆ ಕಾಂಗ್ರೆಸ್ ಶಾಸಕರು ಕೂಡ ಬೆಂಬಲ ಸೂಚಿಸಿಲ್ಲ ಎಂದು ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ತಿಳಿಸಿದ್ದಾರೆ.



ಮೈಸೂರಿನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರಿಡುವಂತೆ ಕಾಂಗ್ರೆಸ್ ಶಾಸಕ ಪ್ರಸಾದ್ ಅಬ್ಬಯ್ಯ ವೈಯಕ್ತಿಕವಾಗಿ ಹೇಳಿಕೆ ನೀಡಿದ್ದಾರೆ. ಅವರ ಈ ಪ್ರಸ್ತಾಪಕ್ಕೆ ಬಿಜೆಪಿ ಹಾಗೂ ಜೆಡಿಎಸ್ ಶಾಸಕರಷ್ಟೆ ಏಕೆ, ಕಾಂಗ್ರೆಸ್ ಶಾಸಕರು ಕೂಡ ಬೆಂಬಲ ಸೂಚಿಸಿಲ್ಲ ಎಂದು ಹೇಳಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಕಟ್ಟಿ ಬೆಳಸಿ, ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಇಂತಹ ಸಾಧಕರ ಹೆಸರನ್ನು ಮೈಸೂರು ವಿಮಾನ ನಿಲ್ದಾಣಕ್ಕೆ ನಾಮಕರಣ ಮಾಡುವುದು ಸೂಕ್ತ ಎಂದು ಜಿ.ಟಿ.ದೇವೇಗೌಡರು ಅಭಿಪ್ರಾಯ ಪಟ್ಟರು. ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರಿಡುವ ಪ್ರಸ್ತಾಪವನ್ನು ಸರ್ಕಾರ ಕೂಡ ಮಾಡಿಲ್ಲ. ಇದರಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರೇ ಅಂತಿಮ ಎಂದು ತಿಳಿಸಿದರು.

ಬೆಳಗಾವಿಯಲ್ಲಿ ನಡೆದ ವಿಧಾನಸಭಾ ಅಧಿವೇಶನದಲ್ಲಿ ರಾಜ್ಯದಲ್ಲಿ ಎದುರಾಗಿರುವ ಭೀಕರ ಬರಗಾಲ ಪರಿಸ್ಥಿತಿಯನ್ನು ಸರ್ಕಾರಕ್ಕೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಇದರ ಪರಿಣಾಮ ಅಸಲು ಪಾವತಿ ಮಾಡುವ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಕಟಿಸಿದ್ದಾರೆ ಎಂದು ಹೇಳಿದರು.

ಸಂಸತ್ ಅಧಿವೇಶನ ನಡೆಯುವ ವೇಳೆ ಲೋಕಸಭೆಗೆ ಇಬ್ಬರು ನುಗ್ಗಿದ ಪ್ರಕರಣದಲ್ಲಿ ಪಾಸ್ ಕೊಟ್ಟ ಸಂಸದ ಪ್ರತಾಪ್ ಸಿಂಹ ಅವರ ರಾಜೀನಾಮೆ ಕೇಳುವುದು ಸರಿಯಲ್ಲ ಎಂದು ತಿಳಿಸಿದರು.

ಸಂಸತ್ ಅಧಿವೇಶನದಲ್ಲಿ ಭದ್ರತಾ ಲೋಪವಾಗಿರುವುದು ಸತ್ಯ. ಆದರೆ ಭದ್ರತಾ ಲೋಪ ಎಸಗಿರುವ ಅಧಿಕಾರಿಗಳಿಗೆ ಶಿಕ್ಷೆಯಾಗಲಿ. ಅದು ಬಿಟ್ಟು ಪಾಸ್ ಕೊಟ್ಟ ಪ್ರತಾಪ್ ಸಿಂಹಗೆ ಏಕೆ ಶಿಕ್ಷೆ ಕೊಡಬೇಕು ಎಂದು ಪ್ರಶ್ನಿಸಿದರು.

ಅಧಿವೇಶನ ವೀಕ್ಷಣೆಗೆ ಕ್ಷೇತ್ರದ ಮತದಾರರು ಪಾಸ್ ಕೇಳಿದಾಗ ನಾವು ಕೊಡಲೇಬೇಕು. ಆದರೆ ಪಾಸ್ ತೋರಿಸಿದ ವ್ಯಕ್ತಿಯನ್ನು ಭದ್ರತಾ ಸಿಬ್ಬಂದಿಗಳು ಪರಿಶೀಲನೆ ನಡೆಸಬೇಕಿತ್ತು. ಭದ್ರತಾ ಸಿಬ್ಬಂದಿಗಳ ಬೇಜವಾಬ್ದಾರಿಯಿಂದ ಅಂದಿನ ಘಟನೆ ನಡೆದಿದೆ. ಇದರಿಂದ ಪ್ರತಾಪ್ ಸಿಂಹನನ್ನು ಹೊಣೆಗಾರನನ್ನಾಗಿ ಮಾಡುವುದು ಸರಿಯಲ್ಲ ಎಂದು ಜಿ.ಟಿ.ದೇವೇಗೌಡರು ತಿಳಿಸಿದರು.

ರಾಜ್ಯೋತ್ಸವ ಮೆರವಣಿಗೆಗೆ ಜಿಟಿಡಿ ಚಾಲನೆ



ಮೈಸೂರು ಅರಮನೆಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಡೆದ 68ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು.

ಜಯ ಕರ್ನಾಟಕ ಸಂಘಟನೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭುವನೇಶ್ವರಿ ಭಾವಚಿತ್ರಕ್ಕೆ ಶಾಸಕ ಜಿ.ಟಿ.ದೇವೇಗೌಡರು ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆ ಉದ್ಘಾಟಿಸಿದರು. ತರುವಾಯ ಬೆಳ್ಳಿ ರಥದಲ್ಲಿದ್ದ ಶ್ರೀ ಭುವನೇಶ್ವರಿ ಪ್ರತಿಮೆಯ ಮೆರವಣಿಗೆ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು. ಹಲವು ರೀತಿಯ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿತು.

ಜಯ ಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷ ಜಗದೀಶ್, ಮೈಸೂರು ನಗರಾಧ್ಯಕ್ಷ ಹರ್ಷ ಗೌಡ, ಜಿಲ್ಲಾಧ್ಯಕ್ಷ ಶ್ರೀಧರ್ ನಾಯಕ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಕಾವ್ಯಕ್ಕೆ ಜಗತ್ತನ್ನು ಬದಲಿಸುವ ಶಕ್ತಿ ಇದೆ

ಪ್ರಾಧ್ಯಾಪಕಿ ಡಾ. ಕವಿತಾ ರೈ ಅಭಿಮತ



ಮೈಸೂರು,ಡಿ.17(ಎಂಟಿವೈ)– ಜಗತ್ತಿನಲ್ಲಿ ಕಾವ್ಯ ತಲುಪದೇ ಇರುವ ಕ್ಷೇತ್ರವೇ ಇಲ್ಲ. ಕಾವ್ಯಕ್ಕೆ ಜಗತ್ತನ್ನು ಬದಲಿಸುವ ಶಕ್ತಿಯಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿಯ ಪ್ರಾಧ್ಯಾಪಕರಾದ ಡಾ.ಕವಿತಾ ರೈ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ ಸಂಸ್ಥೆಯಲ್ಲಿ ಭಾನುವಾರ ಸನ್ವಿತಿ ಪ್ರಕಾಶನ ಸಂಸ್ಥೆಯ ಆಯೋಜಿಸಿದ್ದ 'ಸನ್ವಿತಿ ಕನ್ನಡ ಕಾವ್ಯ ಸಂಭ್ರಮ– ರಾಜ್ಯ ಮಟ್ಟದ ಕಾವ್ಯೋತ್ಸವ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕಾವ್ಯಕ್ಕೆ ಜಗತ್ತನ್ನು ಬದಲಿಸುವ ಶಕ್ತಿ ಇದೆ. ಕನ್ನಡದ ನೆಲ ಇದನ್ನು ತೋರಿಸಿಕೊಟ್ಟಿದೆ. ಹನ್ನೆರಡನೇ ಶತಮಾನದಲ್ಲಿ ಬಸವಣ್ಣ, ಅಕ್ಕಮಹಾದೇವಿ ಮತ್ತಿತರ ನೇತೃತ್ವದಲ್ಲಿ ನಡೆದ ವಚನ ಚಳವಳಿಯೇ ಇದಕ್ಕೆ ಸಾಕ್ಷಿ. ಕಾವ್ಯ ತಲುಪದ ಹಾಗೂ ಮುಟ್ಟದ ಕ್ಷೇತ್ರವೇ ಇಲ್ಲ. ಅಲ್ಲದೆ, ಕಾವ್ಯ ಉದ್ದೇಶಿಸದೇ ಇರುವುದು ಯಾವುದು ಇಲ್ಲ ಎಂದರು.

ಶಿಕ್ಷಣ ಸಾರ್ವತ್ರಿಕರಣಗೊಂಡಾಗ ಅಭಿವ್ಯಕ್ತಿಯನ್ನು ಕಾವ್ಯ ರಚನೆ ಮೂಲಕ ಹೊರಗೆ ತರಲು ಆರಂಭಿಸಿದರು. ಪ್ರಸ್ತುತ ಯುವಕರಿಗೆ ಆಯ್ಕೆ ಸ್ವಾತಂತ್ರ್ಯ ಇದೆಯೇ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಕಾವ್ಯ ಸಂವೇದನ ಇರಬೇಕು. ಕಾವ್ಯದ ಉದ್ದೇಶ ಯಾವುದು? ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಸಾಮ್ರಾಜ್ಯಶಾಹಿ, ವಸಾಹತುಶಾಹಿ, ಬಂಡವಾಳಶಾಹಿ, ಪಿತೃಶಾಹಿ ಬಗ್ಗೆ ಎಚ್ಚರವಹಿಸಬೇಕು. ರಾಷ್ಟ್ರೀಯತೆ, ಫ್ಯಾಸಿಸಂ ಜೊತೆಗೆ ಮಹಿಳಾ ಶೋಷಣೆಯ ಬಗ್ಗೆಗೂ ಗಮನಹರಿಸಬೇಕು. ಪುರುಷ ಮತ್ತು ಮಹಿಳೆಯರ ನಡುವೆ ಸಮಾನತೆ ಎಂಬುದು ಅವಕಾಶಗಳ ನೆಲೆಯಲ್ಲಿ ಇರಬೇಕು. ಕವಿಗಳಲ್ಲಿ ಸೂಕ್ಷ್ಮತೆ ಇಲ್ಲದಿದ್ದರೇ ಸುಮ್ಮನೆ ಆಲಾಪ ಆಗುತ್ತದೆ ಎಂದು ಅವರು ಹೇಳಿದರು.

ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಮೈಸೂರು ಕೃಷ್ಣಮೂರ್ತಿ ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಮೊಹಮ್ಮದ್ ಅಜರುದ್ದೀನ್ ಅವರ ಲೇಖಿನ ವಿಹಾರ ಕೃತಿಯನ್ನು ಸಾಹಿತಿ ಟಿ. ಸತೀಶ್ ಜವರೇಗೌಡ ಬಿಡುಗಡೆ ಮಾಡಿದರು.

ಇದೇ ವೇಳೆ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಟಿ. ಸತೀಶ್ ಜವರೇಗೌಡ, ಪ್ರೊ.ಎನ್. ನಾಗೇಂದ್ರ, ಡಾ.ಸಿ.ಪಿ. ಲಾವಣ್ಯ, ಲಕ್ಷ್ಮೀಶ ಶರ್ಮಾ, ಎಂ.ಎಂ. ನಿಖಿಲೇಶ್, ಎ.ಸಿ. ಮಂಜುನಾಥ್ ಅವರಿಗೆ ಸನ್ವಿತಿ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಕಾರ್ಯಕ್ರಮದಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ.ಕಂಚಿನಕೆರೆ ಗೋವಿಂದೇಗೌಡ ಆಶಯ ಭಾಷಣ ಮಾಡಿದರು. ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಜಿ.ಹೆಚ್. ಮಹದೇವ ಸ್ವಾಮಿ ಮುಖ್ಯ ಅತಿಥಿಯಾಗಿದ್ದರು. ಬೆಂಗಳೂರಿನ ಸಾಹಿತಿ ಡಿ. ಪದ್ಮನಾಭ, ಎಂಎಂಕೆ ಮತ್ತು ಎಸ್‌ಡಿಎಂ ನಿರ್ವಹಣಾ ವಿಭಾಗದ ಅಧ್ಯಾಪಕ ಶಿವಬೀರಪ್ಪ, ಸನ್ವಿತಿ ಪ್ರಕಾಶನದ ಸಂಸ್ಥಾಪಕ ಅಧ್ಯಕ್ಷ ಬಸಪ್ಪ ಸಿ. ಸಾಲುಂಡಿ, ಸಂಚಾಲಕ ಕೀರ್ತಿ ಕುಮಾರ್ ಇದ್ದರು. ಬಳಿಕ ನಡೆದ ಕವಿಗೋಷ್ಠಿಯಲ್ಲಿ ವಿವಿಧೆಡೆ ಆಗಮಿಸಿದ್ದ ಹಲವಾರು ಯುವ ಕವಿಗಳು ಪಾಲ್ಗೊಂಡಿದ್ದರು.

ಕೋಲಾರದಲ್ಲಿ ಮಲದ ಗುಂಡಿಯೊಳಗೆ ಮಕ್ಕಳನ್ನು ಇಳಿಸಿ ಸ್ವಚ್ಛತಾ ಕಾರ್ಯ

ಪ್ರಾಂಶುಪಾಲ, ವಾರ್ಡನ್, ಶಿಕ್ಷಕ ಅಮಾನತು

ಕೋಲಾರ, ಡಿ.17– ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳನ್ನು ಮಲದ ಗುಂಡಿಯೊಳಗೆ ಇಳಿಸಿ ಸ್ವಚ್ಛಗೊಳಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಂಶುಪಾಲರಾದ ಭಾರತಮ್ಮ, ವಾರ್ಡನ್ ಮಂಜುನಾಥ್ ಹಾಗೂ ಶಿಕ್ಷಕ ಮುನಿಯಪ್ಪ ಅವರನ್ನು ಅಮಾನತು ಮಾಡಲಾಗಿದೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ನವೀನ್ ಕುಮಾರ್ ರಾಜ್, ಮೂವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಇದೊಂದು ತೀರಾ ಗಂಭೀರವಾದ ವಿಚಾರ. ವಸತಿ ಶಾಲೆಯ ಪ್ರಾಂಶುಪಾಲರು ಹಾಗೂ ಶಿಕ್ಷಕರು ದೊಡ್ಡ ಲೋಪ ಎಸಗಿದ್ದಾರೆ. ಹೀಗಾಗಿ, ಅಮಾನತುಗೊಳಿಸಿ ತನಿಖೆ ನಡೆಸಲು ನಿರ್ದೇಶನ ನೀಡಿದ್ದೇನೆ. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕರಿಗೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ವರದಿ ನೀಡಲು ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಮೊರಾರ್ಜಿ ದೇಸಾಯಿ ಶಾಲೆಗೆ ಜಿಲ್ಲಾ ನ್ಯಾಯಾಧೀಶರಾದ ಸುನೀಲ್ ಹೊಸಮಣಿ ಹಾಗೂ ಪೊಲೀಸರು ಭೇಟಿ ನೀಡಿದ್ದು, ಪರಿಶೀಲನೆ ನಡೆಸಿದ್ದಾರೆ. ಅಲ್ಲದೆ, ಮಕ್ಕಳ ಬಳಿಯೂ ಸಮಸ್ಯೆಯನ್ನು ವಿಚಾರಿಸಿದ್ದಾರೆ. ಪ್ರತಿ ಕೊಠಡಿಗೂ ಭೇಟಿ ಕೊಟ್ಟು ಪರಿಶೀಲನೆ ನಡೆಸಿದ ನ್ಯಾಯಾಧೀಶರು ಮಕ್ಕಳಿಂದ ದೂರು ಪಡೆದುಕೊಂಡರು.

ಈ ವೇಳೆ ಮಕ್ಕಳು ಪ್ರತಿಭಟನೆಯನ್ನೂ ನಡೆಸಿದ್ದಾರೆ. ಪ್ರಾಂಶುಪಾಲೆ ಭಾರತಮ್ಮ, ವಾರ್ಡನ್ ಮಂಜುನಾಥ್ ಹಾಗೂ ಶಿಕ್ಷಕ ಅಭಿಷೇಕ್ ಅವರಿಂದ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

ನಾಡಪ್ರಭು ಕೆಂಪೇಗೌಡರ ವಿರುದ್ಧ ಅವಮಾನಕರ ಪೋಸ್ಟ್

ನಟ ಚೇತನ್ ಅಹಿಂಸ ವಿರುದ್ಧ ದೂರು ದಾಖಲು

ಬೆಂಗಳೂರು, ಡಿ.17– ವಿವಾದಾತ್ಮಕ ಹೇಳಿಕೆಗಳನ್ನು ನೀಡಿ ಸುದ್ದಿಯಾಗುವ ಸ್ಯಾಂಡಲ್‌ವುಡ್ ನಟ ಚೇತನ್ ಅಹಿಂಸ ವಿರುದ್ಧ ದೂರು ದಾಖಲಾಗಿದೆ. ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡರ ವಿರುದ್ಧ ಅವಹೇಳನಕಾರಿ ಪೋಸ್ಟ್ ಹಾಕಿದ ಆರೋಪದ ಮೇಲೆ ನಟ ಚೇತನ್ ಅಹಿಂಸಾ ವಿರುದ್ಧ ವಕೀಲ ಆರ್‌ಎಲ್‌ಎನ್ ಮೂರ್ತಿ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ನಟ ಚೇತನ್ ಅವರು ತಮ್ಮ ಸೋಶಿಯಲ್ ಮೀಡಿಯಾ ಪೋಸ್ಟ್‌ನಲ್ಲಿ ಕೆಂಪೇಗೌಡರ ಬಗ್ಗೆ ಅವಹೇಳನ ಮಾಡಲಾಗಿದೆ ಎಂದು ವಕೀಲ ಆರ್‌ಎಲ್‌ಎನ್ ಮೂರ್ತಿ ಎಂಬುವರು ದೂರು ನೀಡಿದ್ದು, ನಟ ಎಂದು ಹೇಳಿಕೊಳ್ಳುವ ವಿದೇಶಿ ಪ್ರಜೆಯಾದ ಚೇತನ್ ಅವರಿಂದ ನಾಡಪ್ರಭು ಕೆಂಪೇಗೌಡರಿಗೆ ಅವಹೇಳನವಾಗಿದೆ ಎಂದು ಆರೋಪ ಮಾಡಿದ್ದಾರೆ.

ಚೇತನ್ ಸೋಷಿಯಲ್ ಮೀಡಿಯಾ ಪೋಸ್ಟ್‌ನಲ್ಲೇನಿದೆ?: ಇಬ್ಬರು ಯೋಧರ ಕಥೆ: ಕೆಂಪೇಗೌಡ ಊಳಿಗಮಾನ್ಯ ಜಾತಿ ಲಾಬಿಗಳ ಪ್ರಭಾವದಿಂದಾಗಿ ಈಗ ಪ್ರಮುಖ ಕರ್ನಾಟಕದ ಐಕಾನ್ ಆಗಿರುವ ಅತ್ಯಲ್ಪ ಐತಿಹಾಸಿಕ ವ್ಯಕ್ತಿ

ಟಿಪ್ಪು ಸುಲ್ತಾನ್ ಒಬ್ಬ ಐತಿಹಾಸಿಕವಾಗಿ ಬಹಳ ಮಹತ್ವದ ವ್ಯಕ್ತಿ, ಅವರ ಜನ್ಮವು ಮುಸ್ಲಿಮರಾಗಿ ಅವರ ಇಂದಿನ ಮಾನ್ಯತೆಗೆ ಅಡ್ಡಿಯಾಗಿದೆ. ದುರದೃಷ್ಟವಶಾತ್, ಒಬ್ಬ ವ್ಯಕ್ತಿಯು ಹುಟ್ಟಿದ ಸಮುದಾಯಕ್ಕೆ ಅವನ/ಅವಳ ಸಾಮಾಜಿಕ ಕೊಡುಗೆಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುತ್ತದೆ

ಈ ರೀತಿ ನಟ ಚೇತನ್ ಅಹಿಂಸ ಅವರು ತನ್ನ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿದ್ದು, ಇದರಿಂದ ನಾಡಪ್ರಭು ಕೆಂಪೇಗೌಡರಿಗೆ ಅಗೌರವ ಉಂಟಾಗಿದೆ ಎಂದು ಆರೋಪಿಸಿ ವಕೀಲ ಆರ್‌ಎಲ್‌ಎನ್ ಮೂರ್ತಿ ಅವರು ನೀಡಿರುವ ದೂರಿನ ಮೇಲೆ ಎಫ್‌ಐಆರ್ ದಾಖಲಾಗಿದೆ.

ತಮ್ಮ ಮಗ ದೆಹಲಿಯಲ್ಲಿ ದೊಡ್ಡ ಅಧಿಕಾರಿಯಾಗಿದ್ದಾನೆಂದು ನಂಬಿದ್ದ ತಾಯಿ!

ಸಂಸತ್‌ನಲ್ಲಿ ಸ್ಮೋಕ್ ಬಾಂಬ್ ಸಿಡಿಸಿದ ವಿಷಯ ತಿಳಿದು ಆಘಾತ

ಮೈಸೂರು, ಡಿ.17(ಆರ್‌ಕೆ)–ತನ್ನ ಮಗ ದೆಹಲಿಯಲ್ಲಿ ದೊಡ್ಡ ಅಧಿಕಾರಿಯಾಗಿದ್ದಾನೆ ಎಂದು ನಂಬಿದ್ದ ತಾಯಿಗೆ ಮನೋರಂಜನ್ ದೊಡ್ಡ ಆಘಾತ ಉಂಟು ಮಾಡಿದ್ದಾನೆ.



ಬೆಂಗಳೂರಿನಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ನನ್ನ ಮಗನನ್ನು ಅವನ ಬುದ್ಧಿವಂತಿಕೆ ನೋಡಿ ದೆಹಲಿಗೆ ಕರೆಸಿಕೊಂಡು ದೊಡ್ಡ ಹುದ್ದೆ ಕೊಟ್ಟಿದ್ದಾರಂತೆ. ಅವನೀಗ ಜವಾಬ್ದಾರಿ ಇರುವ ದೊಡ್ಡ ಅಧಿಕಾರಿ. ಮೈಸೂರಿಗೆ ಬರಲು ಅವನಿಗೆ ಸಮಯವೇ ಇಲ್ಲವಂತೆ. ಇಲ್ಲಿಗೆ ಬಂದರೂ ಅವನಿಗೆ ದೆಹಲಿಯಿಂದ ಮೇಲಿಂದ ಮೇಲೆ ಫೋನ್ ಮಾಡುತ್ತಿರುತ್ತಾರೆ ಎಂದು 6 ತಿಂಗಳ ಹಿಂದೆ ಮನೋರಂಜನ್ ತಾಯಿ ಮನೆ ಬಳಿ ನೆರೆ ಹೊರೆಯ ಮಹಿಳೆಯರೊಂದಿಗೆ ಮಾತನಾಡಿಕೊಂಡಿದ್ದರು ಎಂಬುದು ವಿಚಾರಣೆ ವೇಳೆ ತಿಳಿದು ಬಂದಿದೆ.

ನನ್ನ ಮಗ ಮೈಸೂರಿಗೆ ಬಂದಾಗ ಅವನನ್ನು ನೋಡಲೆಂದು ಸ್ನೇಹಿತನೋರ್ವ ದೆಹಲಿಯಿಂದಲೇ ಬರುತ್ತಿದ್ದು, ಇಬ್ಬರೂ, ಹಾಸನ ಜಿಲ್ಲೆ, ಅರಕಲಗೋಡು ತಾಲೂಕಿನ ತಮ್ಮ ಗ್ರಾಮಕ್ಕೆ ಹೋಗಿ ಜಮೀನು, ತೋಟ ನೋಡಿಕೊಂಡು ಬರುತ್ತಿದ್ದರು ಎಂದು ಅವರು ಸ್ಥಳೀಯ ಮಹಿಳಾ ಸ್ನೇಹಿತೆಯರೊಂದಿಗೆ ಹೇಳಿಕೊಂಡಿದ್ದರು ಎಂದು ತಿಳಿದು ಬಂದಿದೆ. ತನ್ನ ಮಗ ದೊಡ್ಡ ಆಫೀಸರ್ ಆಗಿ ಚೆನ್ನಾಗಿದ್ದಾನೆ ಅಂದುಕೊಂಡಿದ್ದ ಮುಗ್ಧ ತಂದೆ–ತಾಯಿಯರಿಗೆ ಮನೋರಂಜನ್ ಎಂತಹ ದೊಡ್ಡ ಕೆಲಸ ಮಾಡುತ್ತಿದ್ದ ಎಂಬುದನ್ನು ತಿಳಿದು ಆಘಾತಕ್ಕೊಳಗಾಗಿದ್ದಾರೆ. ಸಂಸತ್ ಭವನಕ್ಕೆ ನುಗ್ಗಿ ಕಲಾಪ ನಡೆಯುವಾಗಲೇ ಸ್ಮೋಕ್ ಬಾಂಬ್ ಸಿಡಿಸಿದ ಸುದ್ದಿ ಬಿತ್ತರವಾಗುತ್ತಿದ್ದಂತೆಯೇ ವಿಜಯನಗರ 2ನೇ ಹಂತದ ಮನೋರಂಜನ್ ಮನೆಯ ನೆರೆಹೊರೆಯವರು ಅಚ್ಚರಿಗೊಂಡು ನಿಬ್ಬೆರಗಾಗಿದ್ದಾರೆ.

ಲೆಹರ್ ಸಿಂಗ್ ಸಿರೋಯಾ ಬೇಜವಾಬ್ದಾರಿ ಹೇಳಿಕೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪ



ಮೈಸೂರು,ಡಿ.17(ಎಂಟಿವೈ)– ಸಂಸತ್ ಭವನದಲ್ಲಿ ಹೊಗೆ ಬಾಂಬ್ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಸಿರೋಯಾ ಬೇಜವಾಬ್ದಾರಿಯಿಂದ ಹೇಳಿಕೆ ನೀಡಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸತ್ ಭವನದಲ್ಲಿ ಸ್ಮೋಕ್ ಬಾಂಬ್ ದಾಳಿ ನಡೆದು ನಾಲ್ಕು ದಿನವಾದರೂ, ಕೇಂದ್ರ ಸರ್ಕಾರ ಪ್ರಕರಣಕ್ಕೆ ಕುರಿತಂತೆ ಸಮಗ್ರ ತನಿಖೆ ನಡೆಸಲು ಮುಂದಾಗಿಲ್ಲ. ಪ್ರಕರಣವನ್ನು ಮುಚ್ಚಿಹಾಕುವ ಹುನ್ನಾರ ನಡೆಸಲಾಗುತ್ತಿದೆ. ಸಂಸತ್ ಪ್ರವೇಶಿಸಲು ಪಾಸ್ ನೀಡಿದ ಮೈಸೂರಿನ ಸಂಸದ ಪ್ರತಾಪ್ ಸಿಂಹ ಅವರಿಗೆ ವಿಚಾರಣೆಗೆ ಹಾಜರಾಗುವಂತೆ ಇದುವರೆಗೂ ನೋಟಿಸ್ ನೀಡದಿರುವುದು ಪ್ರಕರಣ ಮುಚ್ಚಿ ಹಾಕುವ ಹುನ್ನಾರವನ್ನು ತೋರ್ಪಡಿಸುತ್ತದೆ. ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ಲೆಹರ್ ಸಿಂಗ್ ಸಿರೋಯಾ ತಮ್ಮ ಜವಾಬ್ದಾರಿಯನ್ನು ಮರೆತು ಬೇಜವಾಬ್ದಾರಿಯಿಂದ ಹೇಳಿಕೆ ನೀಡಿರುವುದು ಖಂಡನೀಯ. ಆಡಳಿತಾರೂಢ ಪಕ್ಷದ ರಾಜ್ಯಸಭಾ ಸದಸ್ಯರಾಗಿರುವ ಲೆಹರ್‌ಸಿಂಗ್ ತಮ್ಮ ಸರ್ಕಾರದ ಭದ್ರತಾ ವೈಫಲ್ಯ ಮರೆಮಾಚಲು ಮುಖ್ಯಮಂತ್ರಿ ವಿರುದ್ಧ ಸುಳ್ಳು ಆರೋಪ ಮಾಡಿದ್ದಾರೆ ಎಂದು ಕಿಡಿಕಾರಿದರು.

ಲೆಹರ್ ಸಿಂಗ್ ಸಿರೋಯಾ ಹೇಳಿಕೆ ತನಿಖೆಯ ಹಾದಿ ತಪ್ಪಿಸಲು ಕೇಂದ್ರ ಸರ್ಕಾರ ಹೆಣೆದಿರುವ ಸಂಚಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಪುತ್ರನನ್ನು ಗೆಲ್ಲಿಸಲು ಹುನ್ನಾರ ನಡೆಸಿದ್ದಾರೆ ಎಂದಿರುವ ಲೆಹರ್ ಸಿಂಗ್ ಹಿಟ್ ಅಂಡ್ ರನ್ ಹೇಳಿಕೆ ನೀಡಿದ್ದಾರೆ. ಇಂತಹ ಕೆಲಸವನ್ನು ಸಿಎಂ ಸಿದ್ದರಾಮಯ್ಯ ತಮ್ಮ ರಾಜಕೀಯ ಜೀವನದಲ್ಲಿ ಎಂದೂ ಮಾಡಿಲ್ಲ. ಮುಂದೆಯೂ ಮಾಡುವುದಿಲ್ಲ ಎಂದರು.

ಸಂಸದ ಪ್ರತಾಪ್ ಸಿಂಹ ಅವರನ್ನು ಕಾಂಗ್ರೆಸ್ ಭಯೋತ್ಪಾದಕ ಎಂದು ಹೇಳಿಕೆ ನೀಡಿಲ್ಲ. ಪ್ರತಾಪ್ ಸಿಂಹ ಶಾಂತಿ ಕದಡಲು ಪ್ರಚೋದಿಸುತ್ತಾರೆ ಎಂದು ಟೀಕಿಸುತ್ತೇವೇ ಹೊರತು ಭಯೋತ್ಪಾದಕ ಎಂದಿಲ್ಲ ಎಂದು ಸ್ಪಷ್ಟಪಡಿಸಿದರಲ್ಲದೆ, ಇತ್ತೀಚೆಗೆ ರಾಮಸ್ವಾಮಿ ವೃತ್ತದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ನಡೆದ ಪ್ರತಿಭಟನೆಗೂ, ಕಾಂಗ್ರೆಸ್‌ಗೂ ಸಂಬಂಧವಿಲ್ಲ ಎಂದು ತಿಳಿಸಿದರು.

ಹತಾಶರಾದ ಯುವಕರು: ದೇಶದ ಯುವಕರು ಉದ್ಯೋಗವಿಲ್ಲದೇ ಹತಾಶರಾಗಿದ್ದಾರೆ. ಕೇಂದ್ರದ ಬಿಜೆಪಿ ಸರ್ಕಾರ ವಾರ್ಷಿಕ 2 ಕೋಟಿ ಉದ್ಯೋಗವಲ್ಲ, 10 ವರ್ಷಗಳ ಆಡಳಿತದಲ್ಲಿ 2 ಕೋಟಿ ಉದ್ಯೋಗವನ್ನು ಸೃಷ್ಟಿಸಲಿಲ್ಲ. ಇಂಜಿನಿಯರಿಂಗ್ ಮುಗಿಸಿದವರು ನರೇಗಾದಂತಹ ಕೂಲಿ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.

ದೇಶದಲ್ಲಿ ಪ್ರತಿದಿನ 89 ಮಹಿಳೆಯರ ಮೇಲೆ ಅತ್ಯಾಚಾರ ನಡೆಯುತ್ತಿದೆ ಎಂದು ವರದಿ ತಿಳಿಸಿದೆ. ರಾಷ್ಟ್ರೀಯ ಅಪರಾಧ ಘಟಕದ ದಾಖಲೆಯ ಪ್ರಕಾರ ಬಿಜೆಪಿ ಆಡಳಿತವಿರುವ ಉತ್ತರ ಪ್ರದೇಶದಲ್ಲಿ ಹೆಚ್ಚು ಅಪರಾಧ ಕೃತ್ಯಗಳು ನಡೆಯುತ್ತಿವೆ. ಮಣಿಪುರದ ಬೆತ್ತಲೆ ಮೆರವಣಿಗೆ ಬಗ್ಗೆ ಬಿಜೆಪಿ ಮೌನವಹಿಸಿದೆ. ಈಗ ಬೆಳಗಾವಿ ಜಿಲ್ಲೆಯ ವಂಟಮೂರಿ ಗ್ರಾಮದಲ್ಲಿ ನಡೆದ ಘಟನೆ ಕುರಿತಂತೆ ರಾಜಕೀಯ ಲಾಭಕ್ಕಾಗಿ ಹೋರಾಟ ಮಾಡುವ ಬಿಜೆಪಿಯವರಿಗೆ ನಾಚಿಕೆಯಾಗಬೇಕು. ಬೆಳಗಾವಿ ಜಿಲ್ಲೆಯ ವಂಟಮೂರಿಯಲ್ಲಿ ನಡೆದ ಘಟನೆ ಖಂಡನೀಯ ಎಂದರು.

ವಿಮಾನ ನಿಲ್ದಾಣಕ್ಕೆ ನಾಲ್ವಡಿ ಹೆಸರಿನ ರಾಜಕಾರಣ: ಮೈಸೂರು ವಿಮಾನ ನಿಲ್ದಾಣಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣ ವಿಚಾರದಲ್ಲಿ ಸಂಸದ ಪ್ರತಾಪ್ ಸಿಂಹ ರಾಜಕಾರಣ ಮಾಡುತ್ತಿದ್ದಾರೆ. ಹುಬ್ಬಳ್ಳಿ ಕಾಂಗ್ರೆಸ್ ಶಾಸಕ ಪ್ರಸಾದ್ ಅಬ್ಬಯ್ಯ ಮೈಸೂರು ವಿಮಾನ ನಿಲ್ದಾಣಕ್ಕೆ ಟಿಪ್ಪು ಹೆಸರಿಡುವಂತೆ ಹೇಳಿದ್ದಾರೆ. ಅದು ಅವರ ವೈಯಕ್ತಿಕ ಹೇಳಿಕೆ. ಅಲ್ಲದೇ, ಅವರಿಗೂ ಮೈಸೂರಿಗೂ ಸಂಬಂಧ ಇಲ್ಲ. ಈ ವಿಚಾರವಾಗಿ ಸಂಸದ ಪ್ರತಾಪ್ ಸಿಂಹ ಪತ್ರ ಬರೆದು ಸಿದ್ದರಾಮಯ್ಯ ವಿರುದ್ಧ ಟೀಕೆ ಮಾಡಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರು ನಾಮಕರಣಕ್ಕೆ ಬಸವರಾಜ ಬೊಮ್ಮಾಯಿ ಮೂಲಕ ಕಷ್ಟಪಟ್ಟು ಕೇಂದ್ರಕ್ಕೆ ಪತ್ರ ಬರೆಸಿರುವುದಾಗಿ ತಿಳಿಸಿದ್ದಾರೆ. ಆದರೆ, ಸಿದ್ದರಾಮಯ್ಯ 2015ರಲ್ಲಿಯೇ ನಾಲ್ವಡಿ ಹೆಸರು ನಾಮಕರಣ ಮಾಡುವಂತೆ ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ಅದೇ ಪತ್ರವನ್ನು ಇನ್ನೊಮ್ಮೆ ಕಳುಹಿಸುವುದಾಗಿ ಹೇಳಿದ್ದಾರೆ. ಆದರೆ, 10 ವರ್ಷಗಳಿಂದ ಸಂಸದರಾಗಿರುವ ಪ್ರತಾಪ್ ಸಿಂಹ ಸುಮ್ಮನಿದ್ದಾರೆ ಎಂದು ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮುಖಂಡರಾದ ಬಿ.ಎಂ. ರಾಮು, ಎಂ. ಶಿವಣ್ಣ, ಕೆ. ಮಹೇಶ್, ಸೇವಾದಳದ ಗಿರೀಶ್ ಇದ್ದರು.

ಕುಪ್ಪೆಯಲ್ಲಿ ಬೋನಿಗೆ ಬಿದ್ದ ಚಿರತೆ

ನಾಗನಹಳ್ಳಿ ಬಳಿ ಚಿರತೆ ಮರಿಗಳು ಪತ್ತೆ, ಆತಂಕ



ಹುಣಸೂರು: ಹುಣಸೂರು ತಾಲೂಕು ಕುಪ್ಪೆ ಗ್ರಾಮದ ಜಮೀನಿನಲ್ಲಿ ಇರಿಸಿದ್ದ ಬೋನಿಗೆ ಚಿರತೆ ಬಿದ್ದು ಸೆರೆಯಾಗಿದೆ.

ಈ ಭಾಗದ ಸಾಕು ಪ್ರಾಣಿಗಳಿಗೆ ಕಂಠಕವಾಗಿದ್ದ ಚಿರತೆಯನ್ನು ಸೆರೆ ಹಿಡಿಯುವಂತೆ ಕುಪ್ಪೆ ಗ್ರಾಮದ ರೈತರ ಮನವಿ ಮೇರೆಗೆ ಅರಣ್ಯ ಇಲಾಖೆ ಸಿಬ್ಬಂದಿಗಳು ಚಿರತೆ ಸೆರೆಗೆ ಇಟ್ಟಿದ್ದ ಬೋನಿನಲ್ಲಿ ನಾಯಿ ತಿನ್ನುವ ಆಸೆಯಿಂದ ಒಳನುಗ್ಗಿದ ಸುಮಾರು 3 ವರ್ಷದ ಚಿರತೆ ಬಂದಿಯಾಗಿದೆ.

ಸೆರೆ ಸಿಕ್ಕಿರುವ ಚಿರತೆಯನ್ನು ನಾಗರಹೊಳೆ ರಾಷ್ಟ್ರೀಯ ಉದ್ಯಾನವನಕ್ಕೆ ಬಿಡಲಾಯಿತೆಂದು ಆರ್.ಎಫ್.ಓ.ನಂದಕುಮಾರ್ ತಿಳಿಸಿದ್ದಾರೆ.

ನಾಗನಹಳ್ಳಿಯಲ್ಲಿ ಚಿರತೆ ಮರಿಗಳು: ನಗರಕ್ಕೆ ಸಮೀಪದ ನಾಗನಹಳ್ಳಿಯ. ನಾಗೇಶ್ ಎಂಬುವವರ ಜಮೀನಿನಲ್ಲಿ ಕಳೆದ ಒಂದು ವಾರದಿಂದ ಚಿರತೆ ಮರಿಗಳು ಓಡಾಡುತ್ತಿದ್ದು, ಸುತ್ತಮುತ್ತಲಿನ ಪ್ರದೇಶದಲ್ಲಿ ತಾಯಿ ಚಿರತೆ ಇರಬಹುದು ಎಂದು ಗ್ರಾಮಸ್ಥರು ಆತಂಕಗೊಂಡಿದ್ದಾರೆ. ಇದರಿಂದ ಜಮೀನಿಗೆ ತೆರಳದಂತಾಗಿದೆ. ಮರಿಯೊಂದಿಗೆ ತಾಯಿ ಚಿರತೆಯನ್ನು ಸೆರೆ ಹಿಡಿದು ಆತಂಕ ದೂರ ಮಾಡುವಂತೆ ಗ್ರಾಮಸ್ಥರು ಅರಣ್ಯಾಧಿಕಾರಿಗಳಲ್ಲಿ ಮನವಿ ಮಾಡಿದ್ದಾರೆ.

ವಿವಾಹಿತೆ ಮೇಲೆ ಅತ್ಯಾಚಾರಕ್ಕೆ ಯತ್ನ

ನಂ.ಗೂಡು ಬಳಿ ಅಮಾನುಷ ಘಟನೆ, ಬಿಡಿಸಲು ಬಂದ ಪತಿಗೂ ಕುಡುಗೋಲಿನಿಂದ ಹಲ್ಲೆ ನಡೆಸಿ ಪರಾರಿ

ಮಲ್ಲುಂಡಿ, ನಂಜನಗೂಡು, ಡಿ.17– ವಿವಾಹಿತ ಮಹಿಳೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ ಕಾಮುಕನೋರ್ವ ಬಿಡಿಸಲು ಬಂದ ಗಂಡನ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿರುವ ಘಟನೆ ಶನಿವಾರ ತಾಲೂಕಿನ ಹೊಸ ಕಡೆಜಟ್ಟಿ ಗ್ರಾಮದಲ್ಲಿ ಸಂಭವಿಸಿದೆ.

ಹೊಸ ಕಡೆ ಜಟ್ಟಿ ಗ್ರಾಮದ ದಂಪತಿ ತೆಂಗಿನ ತೋಟ ಒಂದರಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡಿಕೊಂಡು ವಾಸ ಮಾಡುತ್ತಿದ್ದರು. ಅದೇ ಗ್ರಾಮದ ಶಂಕರ್ ಅವರ ಮಗ ನವೀನ್ ಈ ಕುಟುಂಬದ ಮಹಿಳೆ ಮೇಲೆ ಕಣ್ಣಿಟ್ಟಿದ್ದು, ಆಗಾಗ ಚುಡಾಯಿಸುತ್ತಿದ್ದನಂತೆ. ಶನಿವಾರ ತೋಟದಲ್ಲಿ ಕೆಲಸ ಮುಗಿಸಿ ದಂಪತಿ ಮನೆಗೆ ಹಿಂತಿರುಗಿದ್ದರೆನ್ನಲಾಗಿದೆ. ಈ ಸಂದರ್ಭದಲ್ಲಿ ಕರೆಂಟ್ ಹೋಗಿದ್ದರಿಂದ ಪತಿ ಮೋಟರ್ ಸ್ವಿಚ್ ಆಫ್ ಮಾಡಲು ಮೆಷಿನ್ ಮನೆಗೆ ತೆರಳಿದ್ದರು ಎನ್ನಲಾಗಿದೆ. ಮನೆಯಲ್ಲಿ ಯಾರು ಇಲ್ಲದ ಸಂದರ್ಭವನ್ನೇ ಹೊಂಚು ಹಾಕಿ ಕಾದು ಕುಳಿತಿದ್ದ ಆರೋಪಿ ನವೀನ್ ಆಕೆಯ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದ್ದಾನೆ. ಇದರಿಂದ ಗಾಬರಿಯಾದ ಮಹಿಳೆ ಜೋರಾಗಿ ಕಿರುಚಿಕೊಂಡಿದ್ದಾರೆ. ಆದರೂ ಬಿಡದೆ ಹಲ್ಲೆ ನಡೆಸಿ ಬಾಯಿಯನ್ನು ಮುಚ್ಚಿ ಅತ್ಯಾಚಾರಕ್ಕೆ ಯತ್ನಿಸಿದ್ದ. ಅತ್ಯಾಚಾರಕ್ಕೆ ವಿರೋಧಿಸಿದ ಮಹಿಳೆ ಮೇಲೆ ಕುಡುಗೋಲಿನಿಂದ ಹಲ್ಲೆ ನಡೆಸಿದ್ದಾನೆ.

ಇದೇ ವೇಳೆ ಪತ್ನಿಯ ಚೀರಾಟ ಕೇಳಿ ಸ್ಥಳಕ್ಕೆ ಓಡಿಬಂದ ಪತಿ ಮೇಲೂ ಕುಡುಗೋಲಿನಿಂದ ಹಲ್ಲೆ ನಡೆಸಿ ಆರೋಪಿ ಪರಾರಿಯಾಗಿದ್ದಾನೆ. ಹುಲ್ಲಹಳ್ಳಿ ಪೊಲೀಸರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಹಿಳೆಯಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ. ಈ ಸಂಬಂಧ ಹುಲ್ಲಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ದೂರು ದಾಖಲಿಸಿಕೊಂಡಿರುವ ಹುಲ್ಲಹಳ್ಳಿ ಪಿಎಸ್ಐ ರಮೇಶ್ ಕರ್ಕ ಕಟ್ಟೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸಂತ್ರಸ್ತ ಮಹಿಳೆಯ ಹೇಳಿಕೆ ಪಡೆದು ತನಿಖೆ ಮುಂದುವರಿಸಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಫೈಟ್ ಕ್ಲಬ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬ್ಯಾಡ್ ಮ್ಯಾನರ್ಸ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಅನಿಮಲ್ (ಹಿಂದಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಾಯಾ ನಗರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಸ್‌ಟ್ರಾ (ತೆ)	4 ಪ್ರದರ್ಶನಗಳು
ರಾಜಕಮಲ್	
ಜರುಗಾ ಹುಷಾರುಗಾ(ತೆ)	4 ಪ್ರದರ್ಶನಗಳು
ಸಂಗಂ	
ಸ್ನೇಹರ್ಷಿ (ಕ)	4 ಪ್ರದರ್ಶನಗಳು
ಲಿಡೋ	
ಕೈವಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಪ್ತಸಾಗರದಾಚೆ ಎಲ್ಲೋ–ಸೈಡ್ ಬಿ(ಕ)	4 ಪ್ರದರ್ಶನಗಳು
ಪ್ರಭಾ	
ಬಾ ನಲ್ಲೆ ಮದುವೆಗೆ (ಕ) 2 ಪ್ರದರ್ಶನಗಳು, ಹಳ್ಳಿ ಮುಕ್ಕ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್ ದೂ : 4240422/4241800

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10.25ಕ್ಕೆ, ಮ.2.20ಕ್ಕೆ, ಸಂ.6.15ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 2	ವೊಂಕ (ಇಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ ಸೈಡ್–ಬಿ (ಕ): ಮ.1.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಸಂ.4.15ಕ್ಕೆ, ರಾ.7.10ಕ್ಕೆ, ಹಾಯ್ ನಾನ (ತೆ): ರಾ.10.05ಕ್ಕೆ,
ಸ್ಕ್ರೀನ್ 3	ಕೈವ (ಕ): ಬೆ.10.20ಕ್ಕೆ, ಸ್ನೇಹರ್ಷಿ (ಕ): ಮ.1.30ಕ್ಕೆ, ಅನಿಮಲ್ (ಹಿಂ): ಮ.3.55ಕ್ಕೆ, ರಾ.7.40ಕ್ಕೆ.
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10.15ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ಕೈವ (ಕ): ಮ.1.20ಕ್ಕೆ, ರಾ.10ಕ್ಕೆ

INOX LIVE THE MOVIE ಐನಾಕ್ಸ್ ಮೂವೀಸ್ ದೂ : 2533444 / 2433456

ಸ್ಕ್ರೀನ್ 1	ಅನಿಮಲ್ (ಹಿಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ಕೈವ (ಕ): ಬೆ.10.20ಕ್ಕೆ, ಅನಿಮಲ್ (ಹಿಂ): ಮ.1.20ಕ್ಕೆ, ಸಂ.5.25ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಹಾಯ್ ನಾನ (ತೆ): ಮ.12.40ಕ್ಕೆ, ಸಂ.6.55ಕ್ಕೆ, ಕೈವ (ಕ): ಮ.3.55ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.10.10ಕ್ಕೆ
ಸ್ಕ್ರೀನ್ 4	ಹಾಯ್ ನಾನ (ತೆ): ಬೆ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.15ಕ್ಕೆ, ಅನಿಮಲ್ (ಹಿಂ): ಸಂ.4.25ಕ್ಕೆ, ರಾ.8.30ಕ್ಕೆ

ಮೈಸೂರು ವಿಷನ್ ಸಿನಿಮಾ ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್ ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಫೋಸ್ಟ್ (ಕ): ಬೆ.9ಕ್ಕೆ, ಬೆ.10.20ಕ್ಕೆ, ಮ.1.15ಕ್ಕೆ, ಮ.3.20ಕ್ಕೆ, ರಾ.7.35ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, **12th ಫೇಲ್** (ಹಿಂ): ಮ.3.50ಕ್ಕೆ, ಭಗವಂತ್ ಕೇಸರಿ (ತೆ): ರಾ.7.05ಕ್ಕೆ, ಗಣಪತ್: ಎ ಹೀರೋ (ಹಿಂ): ಸಂ.4.10ಕ್ಕೆ, ಕಿಲ್ಲರ್ಸ್ ಆಫ್ ಫ್ಲವರ್ ಮೂನ್ (ಇಂ): ಬೆ.10ಕ್ಕೆ, ಮ.2.05ಕ್ಕೆ, ಸಂ.6.10ಕ್ಕೆ, ರಾ.10.15ಕ್ಕೆ, ಲಿಯೋ (ಕ): ಮ.12.45ಕ್ಕೆ, ಲಿಯೋ (ತ): ಬೆ.11.55ಕ್ಕೆ, ಸಂ.4.10ಕ್ಕೆ, ಸಂ.6.15ಕ್ಕೆ, ರಾ.9.40ಕ್ಕೆ, ರಾ.10.30ಕ್ಕೆ, ಮುಜಿಬ್ ದಿ ಮೇಕಿಂಗ್ ಆಫ್ ಎ ನೇಷನ್ (ಹಿಂ): ರಾ.10ಕ್ಕೆ, ಟಗರುಪಲ್ಯ (ಕ): ಮ.1ಕ್ಕೆ, ರಾ.7ಕ್ಕೆ, ತೇಜಸ್ (ಹಿಂ): ಬೆ.11.05ಕ್ಕೆ, ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ನೆಮ್ಮದಿ ಜೀವನಕ್ಕೆ ಕುಟುಂಬದಲ್ಲಿ ಹೊಂದಾಣಿಕೆ ಅಗತ್ಯ

ಹೆಚ್ಚುವರಿ ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಬಿ.ಎನ್. ನಂದಿನಿ ಸಲಹೆ



ತಿ.ನರಸೀಪುರ, ಡಿ.17– ಕುಟುಂಬದಲ್ಲಿ ಪುರುಷ – ಮಹಿಳೆ ಹೊಂದಾಣಿಕೆಯಿಂದ ಬದುಕಿದಲ್ಲಿ ಮಾತ್ರ ಕುಟುಂಬದಲ್ಲಿ ಪ್ರಗತಿ ಹಾಗೂ ಸಂತೋಷದಾಯಕವಾಗಿರಲು ಸಾಧ್ಯ ಎಂದು ಹೆಚ್ಚುವರಿ ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಬಿ.ಎನ್. ನಂದಿನಿ ಹೇಳಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ, ಬಿಸಿ ಟ್ರಸ್ಟ್ ಮಹಿಳಾ ಜ್ಞಾನವಿಕಾಸ ಕಾರ್ಯಕ್ರಮದಡಿ ಮಹಿಳಾ ವಿಚಾರಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಿಂದಿನ ಕಾಲದಲ್ಲಿ ಮಹಿಳೆಯರು ಮನೆಯೊಳಗೆ ಇರಬೇಕಿತ್ತು. ಈಗ ಕಾಲ ಬದಲಾಗಿದೆ. ಮಹಿಳೆಯರು ಶೈಕ್ಷಣಿಕವಾಗಿ ಪ್ರಗತಿ ಸಾಧಿಸಿ, ಆರ್ಥಿಕ ಸಬಲೀಕರಣ ಕಾಣುತ್ತಿದ್ದಾರೆ. ಕುಟುಂಬದಲ್ಲಿ ಗಂಡು ಹೆಣ್ಣು ಎಂಬ ತಾರತಮ್ಯ ಇರಬಾರದು. ಇಬ್ಬರು ಕೂಡ ಒಂದೇ ಎಂಬ ಸಮಾನ ಭಾವನೆಯಿಂದ ನಡೆದುಕೊಂಡಾಗ ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೇ ಶಾಂತಿ, ನೆಮ್ಮದಿಯಿಂದ ಜೀವನ ನಡೆಸಬಹುದು ಎಂದರು.

ಹಿರಿಯರನ್ನು ತಾತ್ಸಾರವಾಗಿ ಕಾಣುವ ಪ್ರವೃತ್ತಿ ಸಲ್ಲದು. ನೀವು ಏನು ಮಾಡುತ್ತೀರೋ ಅದನ್ನು ನಿಮ್ಮ ಮಕ್ಕಳು ಪಾಲಿಸುತ್ತಾರೆ. ಇದನ್ನು ಬಿಟ್ಟು ಹಿರಿಯರನ್ನು ಗೌರವಿಸುವ ಭಾವನೆ ಬೆಳೆಸಿಕೊಳ್ಳಿ ಇತ್ತೀಚಿನ ದಿನಗಳಲ್ಲಿ ಬಾಲ್ಯವಿವಾಹ ಹೆಚ್ಚಾಗುತ್ತಿದೆ. ಇದು ತಡೆಗಟ್ಟಬೇಕು. ಹೆಣ್ಣು ಮಕ್ಕಳನ್ನು ಶಾಪ ಎಂದುಕೊಂಡು ಭ್ರೂಣ ಹತ್ಯೆ ಮಾಡುತ್ತಿರುವುದು ವಿಷಾದನೀಯ. ಮಹಿಳೆಯರು ಒಂದು ಶಕ್ತಿ ಎಂದು ತಿಳಿದುಕೊಳ್ಳಿ, ಹೆಣ್ಣು ಮಕ್ಕಳು ಹೊರೆ ಎಂದು ಭಾವಿಸಬೇಡಿ. 18 ವರ್ಷಕ್ಕೂ ಮುನ್ನಾ ಮದುವೆ ಮಾಡಬೇಡಿ. ಇದು ಅಕ್ಷ್ಯಮ ಅಪರಾಧ ಎಂದು ತಿಳಿಸಿದರು

ಯೋಜನಾಧಿಕಾರಿ ಹನುಮಂತಪ್ಪ ಅಂಗಡಿ ಮಾತನಾಡಿ, ನಮ್ಮ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆ 22 ಸಾವಿರ ಮಹಿಳಾ ಸದಸ್ಯರನ್ನು ಹೊಂದಿದ್ದು, 12 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದೆ, 10 ಕೋಟಿ 58 ಲಕ್ಷವನ್ನು ಉಳಿತಾಯ ಮಾಡಿದೆ, ಮೂರು ಕೋಟಿ ಸಾಲ ಮನ್ನಾ ಮಾಡಲಾಗಿದೆ, ತಾಲೂಕಿನ ದೇವಸ್ಥಾನಗಳ ಜೀರ್ಣೋದ್ಧಾರ, ನಿರ್ಗತಿಕರಿಗೆ, ಅಂಗವಿಕಲರಿಗೆ ಮಾಸಾಶನ, ಹಾಲಿನ ಡೈರಿ ಕಟ್ಟಡಗಳ ನಿರ್ಮಾಣಕ್ಕೆ ಧನ ಸಹಾಯ, ಕಡುಬಡ ವಿದ್ಯಾರ್ಥಿನಿಯರಿಗೆ ಮಾಸಾಸನ, ಕೆರೆಗಳ ಅಭಿವೃದ್ಧಿ ಸೇರಿದಂತೆ ವಿವಿಧ ಕ್ಷೇತ್ರಗಳಿಗೆ ನೆರವು ನೀಡುತ್ತಾ ಬಂದಿದೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಪುಷ್ಪಲತಾ ರಾಜಶೇಖರ್ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿ ಕೆಎಸ್ ಭವ್ಯ, ಜಿಲ್ಲಾ ಜನಜಾಗೃತಿ ವೇದಿಕೆಯ ಅಧ್ಯಕ್ಷ ಕೆ ಎಸ್.ಪ್ರಭುಸ್ವಾಮಿ ಅವರುಗಳು ಮಾತನಾಡಿದರು,

ದುಶ್ಚಟ ಮುಕ್ತ ಸಮಾಜದಲ್ಲಿ ಮಹಿಳೆಯರ ಪಾತ್ರ ಎಂಬ ವಿಚಾರಗೋಷ್ಠಿ ನಡೆಯಿತು. ಕಾರ್ಯಕ್ರಮದಲ್ಲಿ ಪುಷ್ಪಗುಚ್ಛ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಕರಕುಶಲ ಉತ್ಪನ್ನಗಳ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮದ ಸ್ಪರ್ಧೆಗಳು ನಡೆದವು

ಕಾರ್ಯಕ್ರಮದಲ್ಲಿ ಪೊಲೀಸ್ ಠಾಣಾಧಿಕಾರಿ ಧನಂಜಯ್, ವಿದ್ಯೋದಯ ಶಿಕ್ಷಣ ಸಂಸ್ಥೆಯ ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಕೃಷಿ ಮೇಲ್ವಿಚಾರಕ ಟಿ ಆರ್. ಕುಮಾರ್, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಕಾವೇರಿ, ವಿಚಕ್ಷಣಾಧಿಕಾರಿ ಶ್ರೀನಿವಾಸ, ಆಡಳಿತ ಪ್ರಬಂಧಕರಾದ ಪರಮೇಶ್, ಸಹಾಯಕರಾದ ಕಿರಣ್ ಸೇವಾ ಪ್ರತಿನಿಧಿ, ಜ್ಞಾನವಿಕಾಸ ಕೇಂದ್ರದ ಪದಾಧಿಕಾರಿಗಳು ಮತ್ತು ಇತರರು ಭಾಗವಹಿಸಿದ್ದರು.

ಛಲವಿದ್ದಾಗ ಮಾತ್ರ ಸಾಧನೆ ಸುಲಭ

ಕಾರ್ಯಕ್ರಮಕ್ಕೆ ಆಗಮಿಸಿದ ವಿಶೇಷಚೇತನರಾದ ಅತ್ತಿಗುಪ್ಪೆ ಲತಾ ಮಾತನಾಡಿ, ನಾನು ಹತ್ತಾರು ವರ್ಷಗಳ ಹಿಂದೆ ನನ್ನ ಎರಡು ಕಾಲು ಕಳೆದುಕೊಂಡು 12 ವರ್ಷ ಕತ್ತಲೆಯಲ್ಲೇ ಜೀವನ ಕಳೆದೆ. ನನ್ನವರು ಅನ್ನೋರು ಯಾರೂ ಇಲ್ಲದಿರುವಾಗ ಆಸರೆಯಾಗಿ ಬಂದದ್ದು ಸ್ವಾಮಿವಿವೇಕಾನಂದ ಯೂತ್ ಮೂಮೆಂಟ್ ಹಾಗೂ ಧರ್ಮಸ್ಥಳ ಸಂಸ್ಥೆಯವರು. ಇವರ ಪ್ರೇರಣೆಯಿಂದ ನಾನು ಸ್ವ ಉದ್ಯೋಗ ತರಬೇತಿ ಪಡೆದೆ. ಆನಂತರ ನಾನೇ ಸ್ವತಃ ಮನೆಯಲ್ಲೇ ಫೆನಾಯಿಲ್ ಸೇರಿದಂತೆ ವಿವಿಧ ಉತ್ಪನ್ನಗಳನ್ನು ತಯಾರು ಮಾಡಲು ಪ್ರಾರಂಭಿಸಿದೆ. ಮೊದಲು ನಷ್ಟವಾದರೂ ಈಗ ಸರ್ಕಾರದ ಸಹಾಯದಿಂದ ಲಾಭವಾಗುತ್ತಿದೆ. ಆದ್ದರಿಂದ ನೀವೂ ಸಹ ಸ್ವ ಉದ್ಯೋಗದ ತರಬೇತಿ ಪಡೆದು ಆರ್ಥಿಕವಾಗಿ ಮುನ್ನಡೆಯಿರಿ ಎಂದರು.



ಕಂಪಲಾಪುರ, ಡಿ.17– ಯಾವುದೇ ಕೆಲಸವಾಗಲಿ ಅದನ್ನು ಛಲವಿಟ್ಟು ಮಾಡಿದರೆ ಸಾಧನೆ ಮೆಟ್ಟಿಲು ತನ್ನಿಂದ ತಾನೇ ಸಿಗುತ್ತೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕೊಡಗು ಜಿಲ್ಲೆ ಬಿ.ಸಿ.ಟ್ರಸ್ಟ್ ನಿರ್ದೇಶಕಿ ಲೀಲಾವತಿ ಅಭಿಪ್ರಾಯಪಟ್ಟರು.

ಕುಶಾಲನಗರ ಕೂಡಿಗೆಯ ರುಡ್‌ಸೆಡ್ ಸಂಸ್ಥೆ ಸಹಯೋಗದಲ್ಲಿ ಶುಕ್ರವಾರ ಇಲ್ಲಿನ ಶ್ರೀ ಕರಕಂಠೇಶ್ವರ ದೇವಸ್ಥಾನದ ಬಳಿ ಆಯೋಜಿಸಿದ್ದ ಮಹಿಳೆಯರಿಗೆ ಸ್ವ ಉದ್ಯೋಗ ತರಬೇತಿ ಕಾರ್ಯಕ್ರಮ ಪೂರ್ವಭಾವಿ ಸಭೆಯಲ್ಲಿ ಮಾತನಾಡಿ, ಮಹಿಳೆಯರು ಕೇವಲ ಹಣಕಾಸು ವ್ಯವಹಾರಕ್ಕೆ ಮಾತ್ರ ಸಂಘವನ್ನು ಬಳಸಿಕೊಳ್ಳಬಾರದು ಸ್ವ ಉದ್ಯೋಗ ಮಾಡುವ ಬಗ್ಗೆ ತರಬೇತಿ ಪಡೆದು ತಮ್ಮದೇ ಆದ ಉದ್ಯೋಗವನ್ನು ಪ್ರಾರಂಭಿಸಿದಾಗ ಆರ್ಥಿಕವಾಗಿ ಸಬಲರಾಗಬಹುದು ಎಂದರು.

ರುಡ್‌ಸೆಟ್ ಸಂಸ್ಥೆ ನಿರ್ದೇಶಕ ಪ್ರಕಾಶ್, ಉಪನ್ಯಾಸಕ ಹರೀಶ್ ಮಾತನಾಡಿ, ನಾವು ಈಗಾಗಲೇ 7000ಕ್ಕೂ ಹೆಚ್ಚು ಜನರಿಗೆ ಸ್ವ ಉದ್ಯೋಗದ ವಿವಿಧ ರೀತಿಯ ತರಬೇತಿ ನೀಡಿದ್ದು ಕೆಲವರು ತಮ್ಮದೇ ಆದ ಉದ್ಯೋಗ ಮಾಡಿ ಹಣ ಸಂಪಾದಿಸುತ್ತಿದ್ದಾರೆ. ನೀವೂ ಸಹ ಸ್ವ ಉದ್ಯೋಗದ ತರಬೇತಿ ಪಡೆಯಿರಿ ಅಂದಾಜು 30 ಮಹಿಳೆಯರು ಒಟ್ಟಾದರೆ ನಿಮ್ಮಲ್ಲಿಗೆ ಬಂದು ತರಬೇತಿ ನೀಡುತ್ತೇವೆ ಎಂದರು.

ಕಾರ್ಯಕ್ರಮದಲ್ಲಿ ತಾಲೂಕು ಸಮನ್ವಯಾಧಿಕಾರಿ ಪೂಜಾ, ಮೇಲ್ವಿಚಾರಕಿ ರವಿಕಲಾ, ಒಕ್ಕೂಟದ ಅಧ್ಯಕ್ಷೆ ರಾಣಿ, ಆಶಾ ಮುಖಂಡರಾದ ಕಟ್ಟೆಜಯಣ್ಣ, ಕಲಾವಿದ ರಾಜಣ್ಣ, ಸೇವಾಪ್ರತಿನಿಧಿ ರೂಪ, ಪವಿತ್ರ, ಆನಂದ್ ಸೇರಿದಂತೆ 200ಕ್ಕೂ ಹೆಚ್ಚು ಸದಸ್ಯರು ಭಾಗವಹಿಸಿದ್ದರು.

'ನನ್ನ ದೇಶ ನನ್ನ ಮಣ್ಣು' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರತಿಭಾವಂತ ವಿದ್ಯಾರ್ಥಿಗೆ ಸನ್ಮಾನ



ಹೆಚ್.ಡಿ.ಕೋಟೆ, ಡಿ.17– 'ನನ್ನ ದೇಶ ನನ್ನ ಮಣ್ಣು' ಕಾರ್ಯಕ್ರಮದಡಿ ಹೆಚ್.ಡಿ ಕೋಟೆ ತಾಲೂಕಿನಲ್ಲಿ ಸಂಗ್ರಹಿಸಿದ್ದ ಮಣ್ಣನ್ನು ದೆಹಲಿಗೆ ತೆರಳಿ ಹಸ್ತಾಂತರಿಸಿದ ತಾಲೂಕಿನ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿ ಅಭಿಗೌಡರನ್ನು ಕಾಲೇಜು ವತಿಯಿಂದ ಸನ್ಮಾನಿಸಲಾಯಿತು.

ಪಟ್ಟಣದಲ್ಲಿರುವ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದ್ವಿತೀಯ ಬಿಕಾಂನಲ್ಲಿ ವ್ಯಾಸಂಗ ಮಾಡುತ್ತಿರುವ ಅಭಿಗೌಡ ಬೊಪ್ಪನಹಳ್ಳಿ ಗ್ರಾಮದ ಸೋಮೇಗೌಡರ ಪುತ್ರನಾಗಿದ್ದು, ರಾಷ್ಟ್ರೀಯ ಸೇವಾ ಯೋಜನೆ (NSS) ವತಿಯಿಂದ ತಾಲೂಕಿನ ಪ್ರತಿನಿಧಿಯಾಗಿ ನನ್ನ ದೇಶ ನನ್ನ ಮಣ್ಣು ಎಂಬ ಕಾರ್ಯಕ್ರಮದ ಪ್ರತಿನಿಧಿಯಾಗಿ ದೆಹಲಿಗೆ ತೆರಳಿ ಪ್ರಧಾನಮಂತ್ರಿಗಳಿಗೆ, ಹೆಚ್.ಡಿ ಕೋಟೆ ತಾಲೂಕಿನ ಮಣ್ಣನ್ನು ಹಸ್ತಾಂತರಿಸಿದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಹಿಂತಿರುಗಿದ್ದಾರೆ.

ಇದರೊಂದಿಗೆ ಮತ್ತೆ ಕರ್ನಾಟಕದಿಂದ ಅದರಲ್ಲೂ ಮೈಸೂರು ವಿಶ್ವವಿದ್ಯಾನಿಲಯದಿಂದ ಆಯ್ಕೆಯಾದ 10 ಮಂದಿ ವಿದ್ಯಾರ್ಥಿಗಳಲ್ಲಿ ಈತನು ಒಬ್ಬನಾಗಿ ಎನ್‌ಎಸ್‌ಎಸ್ ಸ್ವಯಂಸೇವಕನಾಗಿ ರಾಷ್ಟ್ರೀಯ ಭಾವೈಕ್ಯತಾ ಶಿಬಿರದಲ್ಲಿ ಪಾಲ್ಗೊಂಡು ಏಳು ದಿನಗಳ ಅವಧಿಯಲ್ಲಿ ಹಲವು ಸಾಧನೆಗಳನ್ನು ಮಾಡಿ ಜಾನಪದ ನೃತ್ಯ, ಮೈಸೂರಿನ ಸಾಂಪ್ರದಾಯಿಕ ಉಡುಗೆಗಳು, ಪೆನ್ಸಿಲ್ ಆರ್ಟ್ ಮೂಲಕ ವಿವಿಧ ಖ್ಯಾತ ವ್ಯಕ್ತಿಗಳ ಚಿತ್ರ ಬಿಡಿಸಿ ಅಲ್ಲಿನ ಮುಖ್ಯಸ್ಥರುಗಳಿಂದ ಮೆಚ್ಚುಗೆ ಪಡೆದು ಪದಕಗಳನ್ನು ಗಳಿಸಿರುವುದಲ್ಲದೆ ಅಂತರ ರಾಜ್ಯಮಟ್ಟದ ರಕ್ತದಾನ ಶಿಬಿರದಲ್ಲಿಯೂ ಪಾಲ್ಗೊಂಡು ರಕ್ತದಾನ ಮಾಡಿ ಅಧಿಕಾರಿಗಳಿಂದ ಪ್ರಶಂಸೆ ಪಡೆದ ಪ್ರತಿಭಾನ್ವಿತ ವಿದ್ಯಾರ್ಥಿ.

ಈ ಸಂದರ್ಭದಲ್ಲಿ ಆದಿಚುಂಚನಗಿರಿ ಸಂಸ್ಥೆಯ ಆಡಳಿತ ಅಧಿಕಾರಿಗಳಾದ ಪ್ರೊ.ಕೆ.ಪಿ. ಬಸವಗೌಡರು, ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಕನ್ನಡ ಸಹಾಯಕ ಪ್ರಾಧ್ಯಾಪಕ ಚನ್ನಕೇಶವನಾಯಕ, ಎನ್‌ಎಸ್‌ಎಸ್ ಅಧಿಕಾರಿಗಳಾದ ರಾಮಚಂದ್ರ ಎಂ.ಆರ್, ಸಿದ್ದೇಗೌಡ ಹೆಚ್‌ಎಸ್, ಗ್ರಂಥಪಾಲಕರಾದ ಸಿದ್ದರಾಜು, ಉಪನ್ಯಾಸಕರಾದ ಮಂಜು, ಮಹೇಂದ್ರ.ಬಿ.ಸಿ., ಪ್ರಕಾಶ್ ನಾಯಕ್, ಮಹೇಶ್, ಅವೀನ ಪ್ರೀತಿ, ಚಿಕ್ಕದೇವಿ, ರಮ್ಯಶ್ರೀ ಚಂದನ ಡಿ, ಚಿತ್ರ, ಕಾವ್ಯಬಾಯಿ ಅಮೂಲ್ಯ ಹಾಗೂ ಇತರರು ಹಾಜರಿದ್ದರು.

ಅಂಬೇಡ್ಕರ್ ಪುತ್ತಳಿ ಗೋಪುರಕ್ಕೆ ಧನಸಹಾಯ



ಹಿರೀಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದಲ್ಲಿ ಒಂದೂವರೆ ಕೋಟಿಗೂ ಹೆಚ್ಚು ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಪುತ್ತಳಿ ಗೋಪುರ ನಿರ್ಮಾಣಕ್ಕೆ ವಿವಿಧ ಉದ್ಯಮಿಗಳು ಧನಸಹಾಯ ಮಾಡಿದ್ದಾರೆ.

ಕಟ್ಟೆಮಳಲವಾಡಿ ಗ್ರಾಮದ ಸತೀಶ್ ಬಾರ್ ಅಂಡ್ ರೆಸ್ಟೋರೆಂಟ್ ಮಾಲೀಕ ಈಶ್ವರ್ 50 ಸಾವಿರ, ಮುಸ್ಲಿಂ ಮುಖಂಡ ಅನ್ಸರ್ ಅಹಮದ್ 20 ಸಾವಿರ ಹಾಗೂ ತಂಬಾಕು ಕಂಪನಿಯ ಮಹಮದ್ ಅರ್ಷದಿ 20 ಸಾವಿರ, ಗ್ರಾಮದ ಮುಖಂಡ ಶ್ರೀನಿವಾಸ್ ಮೂರ್ತಿ 10 ಸಾವಿರ ಧನ ಸಹಾಯ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸಮಿತಿಯ ಅಧ್ಯಕ್ಷ ನಾಗರಾಜ್ ಮಲ್ಲಾಡಿ, ವಿ.ಎಸ್.ಎಸ್.ಎನ್. ಅಧ್ಯಕ್ಷ ಹಾಗೂ ಸಮಿತಿ ನಿರ್ದೇಶಕ ಶ್ರೀಧರ್, ನಿರ್ದೇಶಕರುಗಳಾದ ಪುಟ್ಟರಾಜ್, ಸಂತೋಷ್, ತಗಡಯ್ಯ, ರಾಜು, ರಾಜು.ಕೆ ಇದ್ದರು

ಸಂಸದ ಪ್ರತಾಪ್ ಸಿಂಹ ವಜಾಕ್ಕೆ ಕಾಂಗ್ರೆಸ್ ಆಗ್ರಹ

ತಿ.ನರಸೀಪುರ: ದೇಶದ ಪ್ರಜಾಪ್ರಭುತ್ವದ ಹೃದಯದಂತಿರುವ ಸಂಸತ್ ಭವನದ ಮೇಲೆ ದಾಳಿ ನಡೆದಿರುವುದು ದೊಡ್ಡ ಭದ್ರತಾ ಲೋಪವಾಗಿದ್ದು, ದಾಳಿಕೋರರಿಗೆ ಸಂಸತ್ ಭವನ ಪ್ರವೇಶಕ್ಕೆ ಪಾಸ್ ನೀಡಿರುವ ಸಂಸದ ಪ್ರತಾಪ್ ಸಿಂಹ ಅವರನ್ನು ಸಂಸದ ಸ್ಥಾನದಿಂದ ವಜಾಗೊಳಿಸುವಂತೆ ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವಕ್ತಾರ ಹುಣಸೂರು ಬಸವಣ್ಣ ಒತ್ತಾಯಿಸಿದ್ದಾರೆ.

22 ವರ್ಷಗಳ ಹಿಂದೆಯೂ ಇದೇ ಮಾದರಿಯ ದಾಳಿ ನಡೆದಿತ್ತು. ಈ ಸಮಯದಲ್ಲೂ ಬಿಜೆಪಿ ಸರ್ಕಾರ ಅಧಿಕಾರದಲ್ಲಿತ್ತು. ಈಗಲೂ ಬಿಜೆಪಿ ಅಧಿಕಾರದಲ್ಲಿದೆ. ಈ ಪಕ್ಷ ದೇಶದ ಸುರಕ್ಷತೆಯನ್ನು ಗಂಭೀರವಾಗಿ ಪರಿಗಣಿಸಿಲ್ಲ ಎನ್ನುವುದನ್ನು ಈ ಘಟನೆ ಖಚಿತಪಡಿಸುತ್ತದೆ ಎಂದು ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ ತಿಳಿಸಿದರು.

ದೇಶದ ರಾಜಧಾನಿಯಲ್ಲಿರುವ ಪ್ರಜಾಪ್ರಭುತ್ವದ ಸರ್ವೋಚ್ಚ ಸೌಧವನ್ನೇ ರಕ್ಷಿಸಲು ವಿಫಲವಾಗಿರುವ ಪ್ರಧಾನಿ ಮತ್ತು ಗೃಹಮಂತ್ರಿ ಆಡಳಿತದಲ್ಲಿಯೂ ಪೂರ್ಣವಾಗಿ ಸೋತಿದ್ದಾರೆ ಎನ್ನುವುದು ಸ್ಪಷ್ಟ ಎಂದು ಅವರು ಆಪಾದಿಸಿದ್ದಾರೆ. ದೆಹಲಿಯಲ್ಲಿರುವ ಗೃಹ ಸಚಿವಾಲಯ ಮತ್ತು ಗುಪ್ತಚರ ವಿಭಾಗ ಇಂತಹ ದುಷ್ಕೃತ್ಯಗಳನ್ನು ತಡೆಯಲು ವಿಫಲವಾಗಿವೆ. ರಾಜಧಾನಿಯಲ್ಲೇ ಅದರಲ್ಲೂ ಸಂಸತ್ತಿನಲ್ಲಿಯೇ ಇಂತಹ ಘಟನೆ ತಡೆಯಲು ಅಸಮರ್ಥರಾದವರು ಇನ್ನು ದೇಶಪೂರ್ತಿ ಹೇಗೆ ನಿಗಾಇಟ್ಟು ಗಡಿಗಳು ಮತ್ತು ಜನತೆಯನ್ನು ಕಾಪಾಡುತ್ತಾರೆ ಎನ್ನುವುದು ಜನರ ಪ್ರಶ್ನೆಯಾಗಿದ್ದು, ಮೈಸೂರು ಸಂಸದ ಪ್ರತಾಪ್ ಸಿಂಹರವರು ಇವರುಗಳ ಬಗ್ಗೆ ವಿಚಾರಿಸದೇ ಪಾಸ್ ವಿತರಿಸಿರುವುದು ಸರಿಯಲ್ಲ ಎಂದರು.

ಕೆಂಪೇಗೌಡನಹುಂಡಿ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಸುತ್ತೂರು, ಡಿ.17–ಮೈಸೂರು ತಾಲೂಕು, ವರುಣ ಹೋಬಳಿಯ ಕೆಂಪೇಗೌಡನಹುಂಡಿ ಮತ್ತು ಹೊಸಹುಂಡಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾಗಿ ಶ್ರೀಮತಿ ಚಿಕ್ಕೋಳಮ್ಮ ದೊಡ್ಡಪ್ಪಗೌಡ ಹಾಗೂ ಉಪಾಧ್ಯಕ್ಷರಾಗಿ ಶ್ರೀಮತಿ ಕೆಂಪಮ್ಮ ದೇವೇಗೌಡ ಅವರು ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಇಂದು ನಡೆದ ಚುನಾವಣೆಯಲ್ಲಿ ಇವರಿಬ್ಬರು ಬಿಟ್ಟರೆ ಉಳಿದವರ್‍ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಇವರಿಬ್ಬರನ್ನು ಚುನಾವಣಾಧಿಕಾರಿಗಳು ಅವಿರೋಧ ಆಯ್ಕೆ ಎಂದು ಘೋಷಿಸಿದರು.

ನಿರ್ದೇಶಕರಾದ ಶ್ರೀಮತಿ ಭದ್ರಮ್ಮ, ಚಿಕ್ಕತಾಯಮ್ಮ, ಮಂಗಳಮ್ಮ, ಶಿವಮ್ಮ, ಪುಟ್ಟತಾಯಮ್ಮ, ನೀಲಮ್ಮ ಅವರುಗಳು ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ತಾಪಂ ಸದಸ್ಯ ಮುದ್ದರಾಮೇಗೌಡ, ಗ್ರಾಪಂ ಸದಸ್ಯೆ ಶ್ರೀಮತಿ ರಾಜಮ್ಮ ಸಿದ್ದೇಗೌಡ, ಕೃಷ್ಣ ಡಿ. ಮತ್ತು ಶಂಕರ್ (ಬಡಗಲಹುಂಡಿ), ಗ್ರಾಮದ ಯಜಮಾನರಾದ ಕೆ.ಆರ್.ಸಿದ್ದರಾಮೇಗೌಡ, ಮಾದಪ್ಪ, ಕೆಳಟ್ಟಿ ಚಿಕ್ಕಂಡು, ರಾಮಲಿಂಗು ಹಾಗೂ ಕೆಂಪೇಗೌಡನಹುಂಡಿ ಮತ್ತು ಹೊಸಹುಂಡಿ ಗ್ರಾಮದ ಮಹಿಳಾ ಸದಸ್ಯರು ಹಾಜರಿದ್ದರು.



ಬನ್ನೂರಿನ ಮೈಸೂರು ಮಳವಳ್ಳಿ ಮುಖ್ಯ ರಸ್ತೆ ಬಳಿಯಿರುವ ನವಕೀಸ್ ವಿದ್ಯಾ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಕ್ರೀಡಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಹೇಂದ್ರಸಿಂಗ್ ಕಾಳಪ್ಪ ಕ್ರೀಡೆಯಲ್ಲಿ ವಿಜೇತರಾದವರಿಗೆ ಬಹುಮಾನ ನೀಡಿದರು. ಎಚ್.ಕೆ. ಪಾಂಡು, ತಾರಕೇಶ್ವರಿ, ರಾಮ್‌ಪ್ರಸಾದ್ ಸೇರಿದಂತೆ ಪ್ರಮುಖರು ಇದ್ದರು.

ಶೀಘ್ರದಲ್ಲೇ ಸ್ಮಶಾನ ನಿರ್ಮಾಣ, ನೀರು, ಆಸ್ಪತ್ರೆ ಸಮಸ್ಯೆ ನಿವಾರಣೆ

ತಾಂಡವಪುರ ಪಿಂಚಣಿ ಅದಾಲತ್‌ನಲ್ಲಿ ಯತೀಂದ್ರ ಭರವಸೆ



ನಂಜನಗೂಡು, ಡಿ.17– ವರುಣ ವಿಧಾನ ಸಭಾ ವ್ಯಾಪ್ತಿಯ ತಾಲೂಕಿನ ತಾಂಡವಪುರ ಗ್ರಾಮದಲ್ಲಿ ಶುಕ್ರವಾರ ವರುಣ ಆಶ್ರಯ ಸಮಿತಿ ಅಧ್ಯಕ್ಷ ಯತೀಂದ್ರ ಸಿದ್ದರಾಮಯ್ಯ ತಾಂಡವಪುರ ಗ್ರಾ.ಪಂ. ವ್ಯಾಪ್ತಿಯ ಗ್ರಾಮಗಳ ಪಿಂಚಣಿ ಅದಾಲತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಗ್ರಾಮದಲ್ಲಿ ಸುಸಜ್ಜಿತ ಸ್ಮಶಾನ ನಿರ್ಮಿಸುವಂತೆ ಕೋರಿದ್ದೀರಿ, ಗ್ರಾಮದ ಸರ್ವೆ ನಂಬರ್ 51 ಅಥವಾ ರೇಷ್ಮೆ ಇಲಾಖೆಗೆ ಸೇರಿದ ಜಾಗವನ್ನು ಸ್ಮಶಾನ ನಿರ್ಮಿಸಲು ನೀಡುವಂತೆ ಕಳೆದ ಬಾರಿಯೇ ಪತ್ರ ಬರೆಯಲಾಗಿದೆ. ಭೂಮಿ ಮಂಜೂರು ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ, ಶೀಘ್ರದಲ್ಲಿ ಸುಸಜ್ಜಿತ ಸ್ಮಶಾನ ನಿರ್ಮಿಸಲಾಗುವುದು ಎಂದರು.

ಗ್ರಾಮದ ಒಳಚರಂಡಿ ಯೋಜನೆಗಾಗಿ ಸರ್ಕಾರ 70 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆ ಮಾಡಿದೆ, ಗ್ರಾಮಕ್ಕೆ ಅಗತ್ಯವಾದ ಹೆರಿಗೆ ಆಸ್ಪತ್ರೆ, ಶುದ್ಧ ಕುಡಿಯುವ ನೀರಿನ ಯೋಜನೆಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ಶೀಘ್ರದಲ್ಲೇ ಸಾಕಾರಗೊಳಿಸಲು ಬದ್ಧನಾಗಿದ್ದೇನೆ ಎಂದ ಅವರು ಗ್ರಾ.ಪಂ ವ್ಯಾಪ್ತಿಯಲ್ಲಿ 97ಕ್ಕೂ ಹೆಚ್ಚು ಕೈಗಾರಿಕೆಗಳಿದ್ದು, ಕೈಗಾರಿಕೆಗಳಿಗಾಗಿ ಜಮೀನು ಕಳೆದುಕೊಂಡ ಮನೆಯ ಸದಸ್ಯರಿಗೆ ಕೈಗಾರಿಕೆಗಳಲ್ಲಿ ಉದ್ಯೋಗ ದೊರಕಿಸಿಕೊಡಲು ಈಗಾಗಲೇ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆಯುವಂತೆ ತಿಳಿಸಲಾಗಿದ್ದು ಇದೇ ತಿಂಗಳ ಡಿ.25 ಅಥವಾ 26 ರಂದು ಸಭೆ ಕರೆದು ವರುಣ ವಿಧಾನಸಭಾ ವ್ಯಾಪ್ತಿಯಲ್ಲಿ ಕೈಗಾರಿಕೆಗಾಗಿ ಭೂಮಿ ಕಳೆದುಕೊಂಡವರಿಗೆ ಉದ್ಯೋಗ ನೀಡಲು ಕ್ರಮವಹಿಸುತ್ತೇವೆ. ಅಲ್ಲದೆ ಸ್ಥಳೀಯರಿಗೆ ಉದ್ಯೋಗ ದೊರಕಿಸಿಕೊಡಲು ಶೀಘ್ರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಮ್ಮುಖದಲ್ಲಿ ಸಭೆ ನಡೆಸಲಾಗುವುದು ಎಂದು ಹೇಳಿದರು.

ಗ್ರಾಮಸ್ಥರು ಸ್ಮಶಾನ, ಹೆರಿಗೆ ಆಸ್ಪತ್ರೆ, ಕನಕ ಭವನಕ್ಕೆ ಜಾಗ ಮಂಜೂರು ಮಾಡಿಕೊಡಬೇಕು, ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಕಲ್ಪಿಸಬೇಕು, ಅಲ್ಲದೆ ರಸ್ತೆ, ಚರಂಡಿ ಅಭಿವೃದ್ಧಿಗೆ ಅನುದಾನ ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಸುನಿಲ್‌ಬೋಸ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಕಾಂಗ್ರೆಸ್ ಮುಖಂಡರಾದ ದಕ್ಷಿಣಮೂರ್ತಿ, ಬಿ.ಎಂ.ರಾಕೇಶ್, ಹೆಬ್ಯಾ ರಾಜು, ಬಿ.ಪಿ.ಮಹದೇವು, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಕೆಂಪಿಸಿದ್ದನಹುಂಡಿ ಗ್ರಾಪಂ ಅಧ್ಯಕ್ಷ ರವಿ, ಸದಸ್ಯರಾದ ತೊರೆಮಾವು ಗಿರೀಶ್, ಪಿಡಿಒ ಪ್ರಕಾಶ್, ಆರ್.ಐ.ಸರ್ವೇಶ್ ಇದ್ದರು.

ಮದ್ಯಪಾನ ತಾಣಗಳಾಗುತ್ತಿರುವ ಮೈಸೂರು ಉದ್ಯಾನವನಗಳು

● ಪೊಲೀಸ್ ಆಯುಕ್ತ ಬಿ.ರಮೇಶ್‌ರಿಗೆ ನಾಗರಿಕರ ಅಳಲು
● ಕುವೆಂಪುನಗರ ಪೊಲೀಸರ ನಡೆ ಸಾರ್ವಜನಿಕರ ಕಡೆ ಅಭಿಯಾನ



ಮೈಸೂರು, ಡಿ.17(ಎಸ್‌ಪಿಎನ್)– ಮೈಸೂರಿನ ಬಹುತೇಕ ಪಾರ್ಕ್‌ಗಳು ಮದ್ಯಪಾನದ ತಾಣಗಳಾಗುತ್ತಿವೆ. ಇಲ್ಲಿ ವಿಹಾರಕ್ಕೆ ಬರುವ ಸಾರ್ವಜನಿಕರಿಗೆ ಕುಡುಕರು ತೊಂದರೆ ನೀಡುತ್ತಿದ್ದಾರೆ. ಇದರ ಬಗ್ಗೆ ಗಮನಹರಿಸಿ. ಇದು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಅವರಲ್ಲಿ ನಾಗರಿಕರ ಅಳಲು.

ಮೈಸೂರು ಕುವೆಂಪುನಗರದ ಸೌಗಂಧಿಕಾ ಉದ್ಯಾನವನದಲ್ಲಿ ಅಶೋಕ್‌ಪುರಂ ಪೊಲೀಸ್ ಠಾಣೆ, ಕೃಷ್ಣರಾಜ ವಿಭಾಗ ಹಾಗೂ ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಸಹಯೋಗದೊಂದಿಗೆ 'ಪೊಲೀಸರ ನಡೆ ಸಾರ್ವಜನಿಕರ ಕಡೆ' ಅಭಿಯಾನ ನಡೆಯಿತು.

ಈ ವೇಳೆ ಸಾರ್ವಜನಿಕರು, ಮೈಸೂರಲ್ಲಿ ಪಾರ್ಕ್‌ಗಳೇನೋ ಸಾಕಷ್ಟಿವೆ. ಆದರೆ, ಅವು ಪುಂಡು–ಪೋಕರಿಗಳು, ಕುಡುಕರ ತಾಣಗಳಾಗಿವೆ. ಇದರಿಂದ ಮುಕ್ತಗೊಳಿಸಿ ಎಂದು ಪೊಲೀಸ್ ಆಯುಕ್ತರಲ್ಲಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರು, ಮೈಸೂರು ನಗರದಲ್ಲಿರುವಷ್ಟು ಉದ್ಯಾನವನಗಳು ದೇಶದ ಬೇರೆ ಯಾವುದೇ ರಾಜ್ಯಗಳಲ್ಲೂ ಇಲ್ಲ ಹಾಗಾಗಿಯೇ ಮೈಸೂರು 'ಉದ್ಯಾನವನಗಳ ನಗರಿ' ಎಂಬ ಬಿರುದಿಗೆ ಪಾತ್ರವಾಗಿದೆ. ಇಂತಹ ಸ್ಥಳಗಳಲ್ಲಿ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವುದು ನಮ್ಮ ಕರ್ತವ್ಯ ಎಂದರು.

ಸಹಾಯವಾಣಿ ಅಳವಡಿಸಿ: ಕುವೆಂಪುನಗರ ಬಡಾವಣೆಯಲ್ಲಿ ವಿವಿಧ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ನೌಕರರು, ಅಧಿಕಾರಿಗಳು ಹೆಚ್ಚಾಗಿ ವಾಸಿಸುತ್ತಿದ್ದಾರೆ. ಈ ಬಡಾವಣೆಯ ಪಾರ್ಕ್‌ಗಳಲ್ಲಿ ಬೆಳಗ್ಗೆ, ಸಂಜೆ ವಾಕ್ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಇಂತಹ ಸ್ಥಳಗಳಲ್ಲಿ ಕೆಲವೊಮ್ಮೆ ಯುವಕ–ಯುವತಿಯರು ಗಾಂಜಾ ಅಮಲಿನಲ್ಲಿ ಅಥವಾ ಮಹಿಳೆಯರನ್ನು ಗುರಿಯಾಗಿಸಿ ಕೀಟಲೆ ಮಾಡುವ ಪ್ರಕರಣಗಳು ಹೆಚ್ಚಾಗುತ್ತಿವೆ ಕಿಡಿಗೇಡಿಗಳು ಮದ್ಯಪಾನ ಮಾಡಿ, ಸಾರ್ವಜನಿಕರಿಗೆ ತೊಂದರೆ ನೀಡುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ನಗರದ ಎಲ್ಲಾ ಪಾರ್ಕ್‌ಗಳಲ್ಲಿ ಸಹಾಯವಾಣಿ ನಂಬರ್ ಫಲಕ ಅಳವಡಿಸುವಂತೆ ಕಾಂಗ್ರೆಸ್ ಹಿರಿಯ ಮುಖಂಡ ಪ್ರದೀಪ್ ಕುಮಾರ್, ಆಯುಕ್ತರಲ್ಲಿ ಮನವಿ ಮಾಡಿದರು. ಈ ಸಮಸ್ಯೆ ಬಗೆಹರಿಸುವುದಾಗಿ ಆಯುಕ್ತರು ಭರವಸೆ ನೀಡಿದರು.

ವ್ಹೀಲಿಂಗ್ ವಿರುದ್ಧ ಕಠಿಣ ಕ್ರಮ: ಮೈಸೂರು–ಮಾನಂದವಾಡಿ ರಸ್ತೆಯ ಸಿಲ್ಕ್ ಕಾರ್ಖಾನೆಯಿಂದ ಪರಸಯ್ಯನಹುಂಡಿಯವರೆಗೆ ಪಡ್ಡೆ ಹುಡುಗರು ದ್ವಿಚಕ್ರ ವಾಹನದಲ್ಲಿ ವ್ಹೀಲಿಂಗ್ ಮಾಡುತ್ತಾರೆ. ಈ ರಸ್ತೆಯಲ್ಲಿರುವ ಖಾಸಗಿ ಶಾಲೆಗೆ ನಿತ್ಯ ನೂರಾರು ಪೋಷಕರು, ಮಕ್ಕಳು ಬಂದು ಹೋಗುತ್ತಿರುವುದರಿಂದ ಈ ಜಾಗದಲ್ಲಿ ಸಂಚಾರದಟ್ಟಣೆ ಹೆಚ್ಚಾಗಿದೆ ಇಲ್ಲಿಗೆ ಸಂಚಾರ ಪೊಲೀಸರೊಬ್ಬರನ್ನು ನೇಮಿಸಬೇಕು ಎಂದು ಅಶೋಕಪುರಂ ಆದಿ ದ್ರಾವಿಡ ಮಹಾಸಂಘದ ಶಿವಸ್ವಾಮಿ ಆಯುಕ್ತರಲ್ಲಿ ಮನವಿ ಮಾಡಿದರು.

ಆಟೋ ಚಾಲಕರ ವಿರುದ್ಧ ಕ್ರಮ: ನಗರಾದ್ಯಂತ ಆಟೋ ಚಾಲಕರು, ಪ್ರಯಾಣಿಕರು ಕರೆದಲ್ಲಿಗೆ ಬರುವುದಿಲ್ಲ. ಆಗೊಂದು ವೇಳೆ ಬಂದರೂ ದುಪ್ಪಟ್ಟು ಹಣ ಕೇಳುತ್ತಿದ್ದಾರೆ. ಕೆಲವರು ಮೀಟರ್ ಹಾಕುತ್ತಿಲ್ಲ. ಬೆಳಗ್ಗೆ ವೇಳೆಯೇ ಡಬಲ್ ಹಣ ಕೇಳುತ್ತಾರೆ. ಸಮವಸ್ತ್ರ ಧರಿಸುತ್ತಿಲ್ಲ. ಕೆಲ ಚಾಲಕರು ಚಡ್ಡಿ ಹಾಕಿಕೊಂಡು ಆಟೋ ಚಾಲನೆ ಮಾಡುತ್ತಿರುತ್ತಾರೆ. ಅಲ್ಲದೆ, ಜನ ಸಂದಣಿ ಇರುವ ಕಡೆ ಆಟೋಚಾಲಕರು, ಮೀಟರ್ ಹಾಕುವುದಿಲ್ಲ. ಇದರ ಬಗ್ಗೆ ಪೊಲೀಸ್ ಇಲಾಖೆಗೆ ಅನೇಕ ಬಾರಿ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಇಲ್ಲಿನ ನಿವಾಸಿ ವೆಂಕಟೇಶ್, ಆಯುಕ್ತರ ಗಮನಕ್ಕೆ ತಂದರು. ಇಂತಹ ಸಂದರ್ಭದಲ್ಲಿ ಪ್ರಯಾಣಿಕರು ನಗರ ಪೊಲೀಸ್ ಕಂಟ್ರೋಲ್ ರೂಂ ಸಹಾಯವಾಣಿ 0821–2418339/139 ಹಾಗೂ 112ಗೆ ಕರೆ ಮಾಡಿ, ಪೊಲೀಸರ ಸಹಾಯ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಫುಟ್‌ಪಾತ್ ಸಮಸ್ಯೆ ಬಗೆಹರಿಸಿ: ಕುವೆಂಪುನಗರ ಶಾಂತಿಸಾಗರ್ ಕಾಂಪ್ಲೆಕ್ಸ್ ಮುಂಭಾಗದಲ್ಲಿ ಇತ್ತೀಚೆಗೆ ವಾಹನ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ಪಾದಚಾರಿಗಳ ಓಡಾಟಕ್ಕೆ ತೊಂದರೆಯಾಗುತ್ತಿದೆ. ಒಂದು ಕಡೆ ಆಟೋ ಸ್ಟ್ಯಾಂಡ್ ಇದೆ. ಮತ್ತೊಂದು ಕಡೆ ಬೀದಿಬದಿ ವ್ಯಾಪಾರಿಗಳು ಫುಟ್‌ಪಾತ್ ಅನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿದ್ದಾರೆ. ಈ ಸಮಸ್ಯೆ ಪರಿಹರಿಸುವಂತೆ ನಗರಪಾಲಿಕೆ ಮಾಜಿ ಸದಸ್ಯ ರಮೇಶ್ ಆಯುಕ್ತರಲ್ಲಿ ಮನವಿ ಮಾಡಿದರು. ಇದಕ್ಕೆ ಉತ್ತರಿಸಿ, ಈ ಸಮಸ್ಯೆಗೆ ಈ ಭಾಗದ ಸಂಚಾರ ಠಾಣೆ ಇನ್ಸ್‌ಪೆಕ್ಟರ್‌ರೊಂದಿಗೆ ಚರ್ಚಿಸಿ, ಪರಿಹಾರ ಕಂಡುಕೊಳ್ಳಲಾಗುವುದು ಎಂದು ಭರವಸೆ ನೀಡಿದರು.

ತಪಾಸಣಾ ವಿಧಾನ ಬದಲಿಸಿ: ನಗರಾದ್ಯಂತ ಸಂಚಾರ ಪೊಲೀಸರು ಮರದ ಪೊದೆಯಲ್ಲಿ ಅವಿತುಕೊಂಡು ವಾಹನ ತಪಾಸಣೆ ಮಾಡುತ್ತಾರೆ. ಇದರಿಂದ ವಾಹನ ಸವಾರರಿಗೆ ಕಿರಿಕಿರಿಯಾಗುತ್ತಿದೆ. ಇದಕ್ಕೆ ಕಡಿವಾಣ ಹಾಕುವಂತೆ ವಿದ್ಯಾರ್ಥಿಯೊಬ್ಬರು ಆಯುಕ್ತರಲ್ಲಿ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಆಯುಕ್ತರು, ಸಂಚಾರಿ ಪೊಲೀಸರು ಮರದ ಪೊದೆ ಹಿಂದೆ ಬಚ್ಚಿಟ್ಟುಕೊಂಡು ತಪಾಸಣೆ ಮಾಡುವುದು ತಪ್ಪು ಎಂದು ಹಿಂದೆಯೂ ಹೇಳಿದ್ದೇನೆ. ಹಾಗಂತ ನಾವು ಪೊಲೀಸರನ್ನು ತಪಾಸಣೆ ಮಾಡುವುದನ್ನೇ ನಿಲ್ಲಿಸಿ ಎಂದು ಹೇಳಲು ಸಾಧ್ಯವಿಲ್ಲ. ತಪಾಸಣೆ ವೇಳೆ ದಾಖಲೆ ಇಟ್ಟುಕೊಂಡು ಪೊಲೀಸರಿಗೆ ತೋರಿಸಿ ಸಹಕರಿಸುವಂತೆ ಕಿವಿಮಾತು ಹೇಳಿದರು.

ಕುವೆಂಪುನಗರದ ಸಿ.ಅಶ್ವತ್ ವೃತ್ತದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿರುವುದರಿಂದ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ. ಈ ಜಾಗಕ್ಕೆ ಸಂಚಾರ ಪೊಲೀಸರನ್ನು ನಿಯೋಜಿಸಬೇಕು. ಇಸ್ಕಾನ್ ಬಳಿ ಸಂಚಾರಿ ಪೊಲೀಸರು ತಪಾಸಣೆ ನಡೆಸುವ ಜಾಗವನ್ನು ಬದಲಿಸಬೇಕು ಎಂದು ನಾಗರಿಕರು ಆಯುಕ್ತರಲ್ಲಿ ಮನವಿ ಮಾಡಿದರು. 2022ರಲ್ಲಿ 72 ಸರಗಳ್ಳತನ ಪ್ರಕರಣ ದಾಖಲಾಗಿತ್ತು. 2023ರಲ್ಲಿ ಕೇವಲ 11 ಪ್ರಕರಣಗಳು ದಾಖಲಾಗಿವೆ. ಸರಗಳ್ಳತನ ಪ್ರಕರಣಗಳ ಕಡಿವಾಣಕ್ಕೆ ಪೊಲೀಸರು ಕ್ರಮ ಕೈಗೊಂಡಿದ್ದು ಹಲವು ಪ್ರಕರಣಗಳನ್ನು ಭೇದಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಈ ವೇಳೆ ಅಪರಾಧ ಮತ್ತು ಸಂಚಾರ ವಿಭಾಗ ಡಿಸಿಪಿ ಎಸ್.ಜಾಹ್ನವಿ, ಕೃಷ್ಣರಾಜ ವಿಭಾಗದ ಎಸಿಪಿ ಎಸ್.ಇ.ಗಂಗಾಧರ ಸ್ವಾಮಿ, ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ, ಅಶೋಕಪುರಂ ಠಾಣೆ ಇನ್ಸ್‌ಪೆಕ್ಟರ್ ರಮೇಶ್, ಕುವೆಂಪುನಗರ ಠಾಣೆ ಇನ್ಸ್‌ಪೆಕ್ಟರ್ ಅರುಣ್, ವಿದ್ಯಾರಣ್ಯಪುರಂ ಠಾಣೆ ಇನ್ಸ್‌ಪೆಕ್ಟರ್ ಮೋಹಿತ್, ಕೆ.ಆರ್.ಠಾಣೆ ಇನ್ಸ್‌ಪೆಕ್ಟರ್ ನಾಗೇಗೌಡ, ಲಕ್ಷ್ಮೀಪುರಂ ಠಾಣೆ ಇನ್ಸ್‌ಪೆಕ್ಟರ್ ರವಿಶಂಕರ್, ಸಿಬ್ಬಂದಿಗಳಾದ ಜೆ.ಕುಮುದ, ಬಿ.ಎಂ. ಮಹದೇವಯ್ಯ, ಎಎಸ್‌ಐ ಮಹದೇವ್, ನಾರಾಯಣ್ ಸೇರಿದಂತೆ ಇತರೆ ಪೊಲೀಸರು ಉಪಸ್ಥಿತರಿದ್ದರು.

ಹಸಿರು ನಮ್ಮ ಉಸಿರು

ಉತ್ತರ ಕ್ರಿಯಾದಿ

ಮೈಸೂರು ಸಿಟಿ, ದೇವರಾಜ ಮೊಹಲ್ಲಾ, ಆನೆಸಾರೋಟ್ ರಸ್ತೆ,
ದುರ್ಗಮ್ಮನಹುಂಡಿ ಬೀದಿ, # 1201 ಇಲ್ಲಿ ವಾಸವಾಗಿರುವ
ಲೇಟ್ ಕಪನೇಗೌಡರ ಮಕ್ಕಳು ಮಾಡುವ ವಿಜ್ಞಾಪನೆಗಳು
ತಾ॥ 08–12–2023ನೇ ಶುಕ್ರವಾರ ದಂದು ನಮ್ಮ ತಾಯಿವರಾದ



ಶ್ರೀಮತಿ ಜಯಮ್ಮರವರು
(ಲೇಟ್ ಕಪನೇಗೌಡರ ಧರ್ಮಪತ್ನಿ)

ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ತಾ॥ 18–12–12023ನೇ ಸೋಮವಾರ ಮಧ್ಯಾಹ್ನ 12–00 ಗಂಟೆಗೆ ಉತ್ತರ ಕ್ರಿಯಾದಿ ಕಾರ್ಯಕ್ರಮವನ್ನು ನಮ್ಮ ಸ್ವಾಗೃಹದಲ್ಲಿ ಹಾಗೂ ತಾ॥ 19–12–2023ನೇ ಮಂಗಳವಾರ ಮಧ್ಯಾಹ್ನ 12–00 ಗಂಟೆಗೆ ಅಲಮ್ಮನವರ ಛತ್ರ, ಡಿ. ದೇವರಾಜ ಅರಸು ರಸ್ತೆ, ಹಿಂಭಾಗ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಕೆ.ದಿನೇಶ್ ಮಾರ್ಕೆಟ್, ಕಾಂಗ್ರೆಸ್ ಮುಖಂಡರು
ಮತ್ತು ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು

ಮನೆ ಬಾಡಿಗೆಗಿದೆ

ನಿರ್ಮಿತಿ ಕೇಂದ್ರದ ಬಳಿ ಬೋಗಾದಿ ಮುಖ್ಯ ರಸ್ತೆಯಲ್ಲಿ 3ಬಿಎಚ್‌ಕೆ ಸ್ವತಂತ್ರ ಮನೆ ಬಾಡಿಗೆಗೆ ಲಭ್ಯವಿದೆ.
ಅವಿವಾಹಿತರಿಗೆ ಆದ್ಯತೆ ನೀಡಲಾಗುತ್ತದೆ.
ಆಸಕ್ತರು ಕರೆ ಮಾಡಬಹುದು
9449025127

6ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 6 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಗಳು, ಅಳಿಯ, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು

ಶ್ರೀಮತಿ ನಾಗರತ್ನಮ್ಮ
ದಿನಾಂಕ: 18.12.2017


5ನೇ ವರ್ಷದ ಪುಣ್ಯಸ್ಮರಣೆ



ಎಂ.ಬಿ.ರಾಜರತ್ನನವರು
ನಿ., ಸೂಪರಿಟೆಂಡೆಂಟ್ ಇಂಜಿನಿಯರ್
ಜನನ: 14.07.1940, ಮರಣ: 18.12.2018

ಇಂದಿಗೆ ನೀವು ನಮ್ಮನ್ನಗಲಿ 5 ವರ್ಷಗಳಾದರೂ ನಿಮ್ಮ ನೆನಪು ನಮ್ಮೆಲ್ಲರ ಮನದಲ್ಲಿ ಚಿರವಾಗಿರುತ್ತದೆ. ನೀವು ತೋರಿದ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ. ನಿಮ್ಮ ದಿವ್ಯಾತ್ಮಕ್ಕೆ ಚಿರಶಾಂತಿ ಕೋರುವೆವು
ದುಃಖತಪ್ತರು: ಪತ್ನಿ ಶ್ರೀಮತಿ ಎಚ್.ಸಣ್ಣತಾಯಮ್ಮ, ಸೊಸೆ, ಮೊಮ್ಮಗ ಹಾಗೂ ಬಂಧುಮಿತ್ರರು, ಜೆ.ಪಿ.ನಗರ, ಮೈಸೂರು

ಯುವರಾಜ ಸಿಲ್ಕ್ ಹೌಸ್ ಉದ್ಘಾಟನೆ



ಮೈಸೂರು, ಡಿ.17– ಮೈಸೂರಿನಲ್ಲಿ 'ಯುವರಾಜ ಸಿಲ್ಕ್ ಹೌಸ್' ಭಾನುವಾರ ಶುಭಾರಂಭಗೊಂಡಿತು.

ನಜರ್‌ಬಾದ್‌ನಲ್ಲಿ ತಾಲೂಕು ಆಡಳಿತ ಕಾರ್ಯಸೌಧ(ಮಿನಿ ವಿಧಾನಸೌಧ)ದ ಬಳಿಯಿರುವ ಯೂನಿಟಿ ಬಿಲ್ಡಿಂಗ್‌ನಲ್ಲಿ ಆರಂಭವಾಗಿರುವ 'ಯುವರಾಜ ಸಿಲ್ಕ್ ಹೌಸ್'ನಲ್ಲಿ ವೈವಿಧ್ಯಮಯ ಸೀರೆಗಳು ಸೇರಿದಂತೆ ಮಹಿಳೆಯರು, ಪುರುಷರು ಹಾಗೂ ಮಕ್ಕಳ ಉಡುಪುಗಳು ರಿಯಾಯಿತಿ ದರದಲ್ಲಿ ದೊರಕಲಿವೆ.

ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಯೂನಿಟಿ ಬಿಲ್ಡಿಂಗ್, ಸಪ್ತಪದಿ ಅಸೋಸಿಯೇಟ್ಸ್‌ನ ವ್ಯವಸ್ಥಾಪಕ ಪಾಲುದಾರರಾದ ಸಿ.ನಾರಾಯಣಗೌಡರು, ಕೆ.ಆರ್.ಸತ್ಯನಾರಾಯಣ ಹಾಗೂ ಚಿಕ್ಕಕೆಂಪೇಗೌಡರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಶುಭಾಶಯ ತಿಳಿಸಿದರು. ಯುವರಾಜ ಸಿಲ್ಕ್ ಹೌಸ್ ಮಾಲೀಕ ಯುವರಾಜ್, ಅರುಣಾ ಯುವರಾಜ್, ಟಿ.ಆರ್.ಕೃಷ್ಣೇಗೌಡರು ಮತ್ತಿತರರು ಉಪಸ್ಥಿತರಿದ್ದರು.

An Authorized Direct Company LOOKING FOR
• Associate Managers: M/F
• Recruitment Officers: M/F
• Tele-Counsellors: F
Interested people can WhatsApp CV to:
+91 76194-42484
IMMEDIATE JOINING
Salary at par with Industry

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೊದಲನೇ ವರ್ಷದ ಪುಣ್ಯಸ್ಮರಣೆ



ಶ್ರೀ ಗುರುಸಿದ್ದಶೆಟ್ಟಿ ಪಿ (ಬಿಎಸ್‌ಎನ್‌ಎಲ್)
ನಿಧನ: 18.12.2022
ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಪತ್ನಿ ಭಾಗ್ಯ, ಮಕ್ಕಳು ಅರುಣ್, ಆಶಾ ಹಾಗೂ ಕುಟುಂಬವರ್ಗದವರು

ಮೊದಲನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷ ಕಳೆದರೂ ಸಹ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು: ಅಕ್ಕ ಕೆಂಪದೇವಮ್ಮ, ಭಾವ ಈರಣ್ಣ (LIC) ಮತ್ತು ಕುಟುಂಬ ವರ್ಗದವರು. ನಂಜನಗೂಡು.

ಎಚ್. ದೇವರಾಜ್
ನಿಧನ: 16.12.2022

ಶಿರಸಿ ಬಳಿ ಒಂದೇ ಕುಟುಂಬದ ಐವರು ಜಲಸಮಾಧಿ



ಶಿರಸಿ, ಡಿ.17– ತಾಲೂಕಿನ ಭೈರುಂಬೆ ಸಮೀಪದ ಶಾಲ್ಮಲಾ ನದಿಯ ಭೂತನಗುಂಡಿ ಪ್ರದೇಶದಲ್ಲಿ ಸ್ನಾನಕ್ಕೆ ತೆರಳಿದ್ದ ನಗರದ ರಾಮನಬೈಲ್ ಹಾಗೂ ಕಸ್ತೂರಬಾನಗರದ ಒಂದೇ ಕುಟುಂಬದ ಐವರು ಕುಟುಂಬಸ್ಥರ ಎದುರು ಜಲಸಮಾಧಿಯಾದ ಘಟನೆ ಭಾನುವಾರ ನಡೆದಿದೆ.

ಶಿರಸಿ ನಗರದ ರಾಮನಬೈಲ್‌ನ ಮಹಮದ್ ಸಲೀಂ (44), ಉಮರ್ ಸಿದ್ದೀಕ್ (14), ನಾಬಿಲ್ (22), ನಾದಿಯಾ ಶೇಖ್ (22) ಹಾಗೂ ಕಸ್ತೂರಬಾನಗರದ ಮಿಸಬಾ (21) ನೀರು ಪಾಲಾಗಿ ಮೃತಪಟ್ಟಿದ್ದಾರೆ.

ಕುಟುಂಬದ 20 ಜನ ಸದಸ್ಯರು ಸೇರಿ ಪಿಕ್‌ನಿಕ್‌ಗಾಗಿ ಶಾಲ್ಮಲಾ ನದಿ ಪಾತ್ರದ ಭೂತನಗುಂಡಿ ಎಂಬ ಪ್ರದೇಶಕ್ಕೆ ತೆರಳಿದ್ದರು. ಈ ವೇಳೆ ನಾದಿಯಾ ಶೇಖ್ ಹಾಗೂ ನಾಬಿಲ್ ಎಂಬುವವರು ಆಕಸ್ಮಿಕವಾಗಿ ನೀರಲ್ಲಿ ಬಿದ್ದ ಸಂದರ್ಭದಲ್ಲಿ ಅವರನ್ನು ಉಳಿಸಲು ಸಮೀಪವಿದ್ದ ಸಲೀಂ, ಉಮರ್ ಹಾಗೂ ಮಿಸಬಾ ನೀರಿನ ಗುಂಡಿಗೆ ಧಾವಿಸಿದ್ದರು. ಯಾರಿಗೂ ಈಜು ಬರದ ಕಾರಣ ರಕ್ಷಣೆಗೆ ತೆರಳಿದವರೂ ಗುಂಡಿಯ ಆಳಕ್ಕೆ ಹೋಗಿದ್ದಾರೆ ಎಂಬುದು ಕುಟುಂಬಸ್ಥರ ಮಾಹಿತಿಯಾಗಿದೆ.

ಸ್ಥಳಕ್ಕೆ ಡಿವೈಎಸ್ಪಿ ಗಣೇಶ ಕೆ.ಎಲ್, ಸಿಪಿಐ ಪಿ. ಸೀತಾರಾಮ, ಪಿಎಸ್‌ಐ ಪ್ರತಾಪ, ಅಗ್ನಿಶಾಮಕದಳದ ಸಿಬ್ಬಂದಿ, ಗೋಪಾಲಗೌಡ ನೇತೃತ್ವದ ಲೈಫ್ ಗಾರ್ಡ್ ತಂಡ, ಸ್ಥಳೀಯ ಈಜುಗಾರರು ಆಗಮಿಸಿ ಕಾಣೆಯಾದವರ ಶೋಧ ಕಾರ್ಯದಲ್ಲಿ ತೊಡಗಿದ್ದಾರೆ.

neem BOND PLATINUM®
PLYWOOD & DOORS
@ FACTORY DEPOT RATES
10 YEARS WARRANTY*
9901291267 / 9731591267

2ನೇ ವರ್ಷದ ಪುಣ್ಯಸ್ಮರಣೆ



ದಿ. ಶ್ರೀ ಸುರೇಶ (ಸೂರಿ)
ಜನನ: 10.04.1967 ಮರಣ: 18.12.2021
ದುಃಖತಪ್ತರು: ತಾಯಿ ವಿಜಯ ಮತ್ತು ಕುಟುಂಬವರ್ಗದವರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ, ವಿದ್ಯಾರಣ್ಯಪುರಂ 1ನೇ ಮೇನ್, 3ನೇ ಕ್ರಾಸ್ ಮನೆ ನಂ.1063/11ಸಿರಲ್ಲಿ ವಾಸವಾಗಿರುವ ಶ್ರೀ.ಆರ್.ಬಿ.ಮಹೇಶ್ ರವರ ಮಗನಾದ ಶ್ರೀ.ಚರಣ್. ಆರ್.ಎಂ. ರವರು ಷೆಡ್ಯೂಲ್ ಸ್ವತ್ತಿನ ಸಂಬಂಧ ಅದರ ಮಾಲೀಕರಾದ ಮೈಸೂರು ಸಿಟಿ, ಮಂಡಿ ಮೊಹಲ್ಲಾ, ವೆಸ್ಲೆ ರಸ್ತೆ, 1ನೇ ಕ್ರಾಸ್, ಮನೆ ನಂ.19/23 ರಲ್ಲಿ ವಾಸವಾಗಿರುವ ಶ್ರೀ. ಶ್ರೀನಿವಾಸ್ ರವರ ಮಗನಾದ ಶ್ರೀ.ಸುಬ್ರಮಣಿ ರವರ ಜೊತೆ ದಿನಾಂಕ 03-02-2022 ರಂದು ಕ್ರಯದ ಕರಾರು ಪತ್ರ ಮಾಡಿಕೊಂಡು ಸದರಿ ಸ್ವತ್ತನ್ನು ನನ್ನ ಕಕ್ಷಿದಾರರು ಶುದ್ಧ ಕ್ರಯಕ್ಕೆ ಪಡೆಯುವವರಿದ್ದಾರೆ. ಮೇಲ್ಕಂಡ ಸುಬ್ರಮಣಿಯವರು ಬಂದು ಕ್ರಯಪತ್ರ ಮಾಡಿಕೊಡಲು ತಿರಸ್ಕರಿಸಿರುತ್ತಾರೆ. ಆ ಬಗ್ಗೆ ನಮ್ಮ ಕಕ್ಷಿದಾರರು ದಾವೆ ಹೂಡಿ ನ್ಯಾಯಾಲಯದ ಮೂಲಕ ಕ್ರಯಪತ್ರ ಮಾಡಿಸಿಕೊಳ್ಳುವವರಿದ್ದಾರೆ. ಆದ ಕಾರಣ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಮಸ್ತ ಸಾರ್ವಜನಿಕರಲ್ಲಿ ತಿಳಿಯಬಯಸುವುದೇನೆಂದರೆ, ಸದರಿ ಸುಬ್ರಮಣಿಯವರ ಜೊತೆ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರೂ ಸಹ ಯಾವುದೇ ಕ್ರಯದ ಕರಾರನ್ನಾಗಲೀ, ಕ್ರಯಪತ್ರವನ್ನಾಗಲೀ ಮಾಡಿಕೊಳ್ಳಬಾರದೆಂದು ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಮುಂದುವರೆದಲ್ಲಿ ಅದು ನಮ್ಮ ಕಕ್ಷಿದಾರರನ್ನು ಬಾಧ್ಯಪಡಿಸುವುದಿಲ್ಲ ಎಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್: ಮೈಸೂರು, ಸಿಟಿ, ರಾಜೀವ್ ನಗರ, ದೇವನೂರು 3ನೇ ಹಂತ, ಸ್ವತ್ತಿನ ಸಂಖ್ಯೆ.320ರ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 60.00 ಅಡಿ ಮತ್ತು ದಕ್ಷಿಣೋತ್ತರ 40.00 ಅಡಿಗಳುಳ್ಳ ಖಾಲಿ ನಿವೇಶನಕ್ಕೆ ಚೆಕ್ಕುಬಂದಿ : ಪೂರ್ವಕ್ಕೆ :ರಸ್ತೆ, ಪಶ್ಚಿಮಕ್ಕೆ ನಿವೇಶನ ಸಂಖ್ಯೆ: 313, ಉತ್ತರಕ್ಕೆ : ನಿವೇಶನ ಸಂಖ್ಯೆ–321, ದಕ್ಷಿಣಕ್ಕೆ : ನಿವೇಶನ ಸಂಖ್ಯೆ–319.

SD/- M.D. CHANDRASHEKAR
B.B.M, LL.B., ADVOCATE, NO. 2032, MADVACHAR ROAD K.R. MOHALLA, MYSORE
PH: 9448402135

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಲೇಟ್ ಕುಂಜೀರ ಎಂ. ಬೋಪ್ಪಯ್ಯ ರವರ ವಾರಸ್ಸುದಾರರಾದ 1] ಕುಂಜೀರ ಮಾದಪ್ಪ ಕರಿಯಪ್ಪ, 2] ಜೋಸಾಂಗ್ ಜುವಾಲಿ ಸದಾಶಿವ, 3] ಕುಂಜೀರ ಸದಾಶಿವ ರಾಜ, 4] ಕುಂಜೀರ ಸದಾಶಿವ ಮೊಣ್ಣಪ್ಪ @ ಕೆ.ಎಸ್. ಮೊಣ್ಣಪ್ಪ, 5] ಕಿಟ್ಟಿ ಉತ್ತಪ್ಪ @ ಕುಂಜೀರ ಕಿಟ್ಟಿ ಉತ್ತಪ್ಪ, 6] ಮೌನ ಜಯಂತ್ @ ಮೌನ ಉತ್ತಪ್ಪ, 7] ಕೆ. ಡಬ್ಲ್ಯೂ ಬೋಪಯ್ಯ ಮತ್ತು 8] ಕೆ.ಬಿ. ಶಾರದಾ @ ಕೆ.ಬಿ. ಶಾರದಾ ಸೋಮಣ್ಣ ರವರು ಒಟ್ಟಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧ–ರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ– ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ-ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕೆ. ಹೆಮ್ಮನಹಳ್ಳಿಗೆ ಸೇರಿದ ಸರ್ವೆ ನಂ. 57/1 ರಲ್ಲಿರುವ ಖುಷ್ಕಿ ಜಮೀನಿನ ವಿಸ್ತೀರ್ಣ 03 ಎಕರೆ 29 ಗುಂಟೆ, ಖಾತೆ ಸಂಖ್ಯೆ. 121, ಆಕಾರ ರೂ. 3.62 ಪೈಸೆ ಉಳ್ಳ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 93 ರ ಜಮೀನು, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ಸರ್ವೆ ನಂ. 57/2 ರ ಜಮೀನು.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ.1458/ಎ, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಸಮೀಪ, ಮೈಸೂರು.
ಮೊ:9844640641
email: sldlawfirm2021@gmail.com

KODAVA EDUCATION SOCIETY ®

(Sponsors of Coorg Institute of Technology)
Ponnampet-571216, Kodagu, Karnataka.

TENDER NOTIFICATION

Kodava Education Society invites experienced CIVIL CONTRACTORS for the construction of Coorg Institute of Pre-University (CIPUC) Block measuring 30,678.37 sq.ft, ground + 2 floors, at Ponnampet, Kodagu.

Eligible contractors who have successfully completed at least one building costing a minimum Rs. 5.00 crore and above and having a minimum average turnover of Rs. 5.00 crore during the last three years, ending 31.03.2023 only need apply.

Interested contractors are requested to contact our office on all working days during office hours. The cost of the tender document is Rs. 10000/- (rupees ten thousand only). The issue of tender documents is from 25th December 2023 and the last date for the receipt of sealed tender documents is 10th January 2024 at the above said office before 4.00 p.m.

Note: It is important to present the pre-qualification Technical Bid detailing the profile of your respective companies. For further details please contact numbers 9482133666 / 7204606076.

Sd/- Secretary